Ph: 0824-2430881
Fax : 0824-2430882
design for what is next...
GROUP4
Complete Sanitary and Tiles
Cauvery Building, Near Unity Hospital Falnir Road, Mangalore-1.
Email : group4mangalore@gmail.com
www.group4tiles.com
Hindware NITCO Jaquar GROHE

ಅರಿವಿನ ಅಕ್ಷರ ಕ್ರಾಂತಿ

# ಅಲ್ ಅನ್ಸಾರ್

ವಾರ ಪತ್ರಿಕೆ

AL-ANSAR KANNADA WEEKLY

Hameed Kayyar Proprietor
+91 824 2433979
9886796379
+91 9916943379
SUNHEART SOMANY Hindware CENgres HILTI KisaN
KAYYAR
TILES & SANITARY WARE
Stockists and Dealers in SANITARYWARES, TILES & ALL KINDS OF BUILDING MATERIALS
Vishwas View, Appartment, Near Karnataka Bank, N.H.17, PUMPWELL, MANGALORE.2.

ಸಂಪುಟ:20 ಸಂಚಿಕೆ:46 RNI No:KARKAN/2009/28984 Regd No.:KA/SK/MNG/982/2009-11 ಸೆಪ್ಟೆಂಬರ್ 26-ಅಕ್ಟೋಬರ್ 2,2011 ಶವ್ವಾಲ್ 27-ದ್ಸುಲ್‌ಖಅದ್ 3,1432 ರೂ: 6.00

## 26ರೂ.ಯಲ್ಲಿ ಬಡವನ ಬದುಕು!

ಭಾರತದ ಯೋಜನಾ ಆಯೋಗವು ಬಡವರನ್ನು ಕಡಿಮೆಮಾಡಲು ಅದ್ಭುತ ಯೋಜನೆಯೊಂದನ್ನು ಹಮ್ಮಿಕೊಂಡಂತಿದೆ. ಅದೇನೆಂದರೆ, ದಿನಕ್ಕೆ 26ರೂ.ಗಿಂತ ಹೆಚ್ಚು ಖರ್ಚು ಮಾಡುವವರೆಲ್ಲ ಶ್ರೀಮಂತರೆಂದು ಘೋಷಿಸುವುದು!

ಯೋಜನಾಯೋಗವು ಸುಪ್ರಿಂ ಕೋರ್ಟ್‌ಗೆ ಸಲ್ಲಿಸಿರುವ ಅಫಿಡವಿಟ್ ಪ್ರಕಾರ ಗ್ರಾಮೀಣ ಪ್ರದೇಶದಲ್ಲಿ ಮಾಸಿಕ ರೂ 781ರ ತನಕ ಖರ್ಚು ಮಾಡುವ ವ್ಯಕ್ತಿಯನ್ನು ಬಡವ ಎಂದು ಗುರುತಿಸಬಹುದು. ಅಂದರೆ ದಿನಕ್ಕೆ 26ರೂಪಾಯಿ. ನಗರದಲ್ಲಾದರೆ ಮಾಸಿಕ ರೂ. 965, ಅಂದರೆ, ದಿನಕ್ಕೆ ರೂ.32. ಆಗ ಮಾತ್ರ ಆತ ಬಿಪಿಎಲ್ (ಬಡತನ ರೇಖೆಗಿಂತ ಕೆಳಗೆ) ಪಟ್ಟಿಗೆ ಸೇರುತ್ತಾನೆ. ಖರ್ಚು ಇದಕ್ಕಿಂತ ಹೆಚ್ಚಿದ್ದರೆ ಆತ ಎಪಿಎಲ್, ಅಂದರೆ ಬಡತನ ರೇಖೆಗಿಂತ ಮೇಲಿರುತ್ತಾನೆ. ಬಡವನೆನಿಸಬೇಕಾದರೆ ನಗರದಲ್ಲಿ 5 ಸದಸ್ಯರ ಕುಟುಂಬಕ್ಕೆ ಮಾಸಿಕ ಖರ್ಚು ರೂ. 4284, ಗ್ರಾಮಗಳಲ್ಲಿ ರೂ.3905 ಮೀರಬಾರದು. ನಮ್ಮ ವ್ಯವಸ್ಥೆಗಳ ಅವ್ಯವಸ್ಥೆಗೆ ಬೇರೆ ನಿದರ್ಶನ ಬೇಕೇ?

ಇನ್ನೂ ಸ್ವಾರಸ್ಯಕರ ಸಂಗತಿಯೆಂದರೆ, ಇದೊಂದು ಸುಧಾರಿತವಾದ ಅಫಿಡವಿಟ್. ಇದಕ್ಕಿಂತ ಮೊದಲು, ಅಂದರೆ ಕಳೆದ ಜೂನ್ ತಿಂಗಳಲ್ಲಿ ಯೋಜನಾ ಆಯೋಗವು 2004-05ರ ಬಡತನ ಸೂಚ್ಯಂಕವನ್ನು ಆಧರಿಸಿ ಸುಪ್ರಿಂಕೋರ್ಟ್‌ನಲ್ಲಿ ಸಲ್ಲಿಸಿದ್ದ ಅಫಿಡವಿಟ್ ಪ್ರಕಾರ ಬಡವರ ಆದಾಯ ನಗರದಲ್ಲಿ 579 ಮತ್ತು ಗ್ರಾಮದಲ್ಲಿ ರೂ.447ಕ್ಕಿಂತ ಕಡಿಮೆಯಿರಬೇಕಿತ್ತು. ಅಂದರೆ ನಗರದ ಬಡವ ರೂ.19.30 ಮತ್ತು ಹಳ್ಳಿಗ ರೂ.14.90ರಲ್ಲಿ ದಿನ ದೂಡಬೇಕಿತ್ತು. ಶಿಕ್ಷಣ, ವೈದ್ಯಕೀಯ, ವಸತಿ, ವಸ್ತ್ರ ಇತ್ಯಾದಿಗಳ ವಿಷಯ ವಿರಲಿ, ಒಂದು ಹೊತ್ತಿನ ಆಹಾರಕ್ಕಾದರೂ ಈ ಹಣ ಸಾಕಾದೀತೇ? ಇದರಿಂದ ಅಸಮಾಧಾನಗೊಂಡ ಸುಪ್ರಿಂ ಕೋರ್ಟ್ ಹೊಸ ಲೆಕ್ಕಾಚಾರ ಪ್ರಕಾರ ಅಫಿಡವಿಟ್ ನೀಡಲು ಸೂಚಿಸಿತ್ತು. ಹಾಗೇ 2011ಜೂನ್ ತಿಂಗಳ ಬಡತನ ಸೂಚ್ಯಂಕ ಆಧರಿಸಿ ಈ ಹೊಸ ಅಫಿಡವಿಟ್ ನೀಡಲಾಯಿತು. ಅದರ ಪ್ರಕಾರ ರೂ.26-32ರಲ್ಲಿ ಭಾರತೀಯ ಬದುಕಬೇಕು. ಹೆಚ್ಚು ವೆಚ್ಚಮಾಡಿದರೆ ಬಡವನಿಗಿರುವ ಸೌಲಭ್ಯಗಳು ಆತನಿಗಿಲ್ಲ! ಅಷ್ಟು ಕಡಿಮೆ ಖರ್ಚಿನಲ್ಲಿ ಬದುಕಲು ಸಾಧ್ಯವೇ? ಎಂಬ ಪ್ರಶ್ನೆ ಇಲ್ಲಿ ಅಪ್ರಸ್ತುತ. ಲೆಕ್ಕ ಹಾಕಿದವರು ಅಷ್ಟು ಗಣಿತ ಗೊತ್ತಿಲ್ಲದವರೇನಲ್ಲ. ಜಗತ್ಪ್ರಸಿದ್ದ ಯುನಿವರ್ಸಿಟಿಗಳಲ್ಲಿ ಉನ್ನತ ಶಿಕ್ಷಣ ಪಡೆದಿರುವ, ಅರ್ಥ ಶಾಸ್ತ್ರದಲ್ಲಿ ಪಿಎಚ್‌ಡಿ ಮಾಡಿದವರು ಕೂಡಾ ನಮ್ಮ ಯೋಜನಾ ಆಯೋಗದಲ್ಲಿದ್ದಾರೆ. ತಮ್ಮ ಮಕ್ಕಳು ಬಳಸುವ ಪೆನ್ಸಿಲ್‌ಗೆ ತಾವು ಕೊಡುವ ಹಣದಿಂದ ಬಡವ್ಯಕ್ತಿ ಇಡೀ ದಿನದ ಖರ್ಚು ನೋಡಿಕೊಳ್ಳಬೇಕೆಂದು ಅವರು ಬಯಸುತ್ತಾರಷ್ಟೆ!

ತಾನು ನಿಗದಿಪಡಿಸಿದ್ದಕ್ಕಿಂತ ಹೆಚ್ಚಿನ ಹಣ ಖರ್ಚು ಮಾಡಿದರೆ ಬಡವನಿಗಿರುವ ಸವಲತ್ತುಗಳನ್ನು ಕಸಿದು ಕೊಳ್ಳುವ ಆಯೋಗದ ಈ ಕ್ರಮ ಖಂಡಿತಾ ಬಡವರ ಮೇಲಿನ ಸವಾರಿ. ವೆಚ್ಚವನ್ನಾಧರಿಸಿ ಬಡವರನ್ನು ಗುರುತಿಸುವ ಕ್ರಮವನ್ನು ಸೋನಿಯಾ ಗಾಂಧಿ ನೇತೃತ್ವದ ರಾಷ್ಟ್ರೀಯ ಸಲಹಾ ಮಂಡಳಿಯೇ ಟೀಕಿಸಿರುವುದು ಗಮನಾರ್ಹ. ದಿನದಿಂದ ದಿನಕ್ಕೆ ಜೀವನಾವಶ್ಯಕ ವಸ್ತುಗಳು ಕೈಗೆಟುಕದಷ್ಟು ಮೆಲೆ ಹಾರುತ್ತಿರುವಾಗ ಹೊಸಹೊಸ ನೀತಿಗಳ ಮೂಲಕ ಬಡವರಿಗೆ ಮೋಸಮಾಡಲು ಹೊರಟವರು ಸಾರ್ವಜನಿಕ ದಂಗೆಯೊಂದನ್ನು ಆಹ್ವಾನಿ ಸುತ್ತಿದ್ದಾರೆಯೇ? ■

## ಪ್ರಧಾನಿಯ ತಯಾರಿಕೆಯಲ್ಲಿ ಬಿಜೆಪಿ

ಲೋಕಸಭಾ ಚುನಾವಣೆ ನಡೆಯಬೇಕೆಂದರೆ ಇನ್ನೂ ಎರಡೂವರೆ ವರ್ಷವಿದೆ. ಅಷ್ಟರಲ್ಲೇ ಬಿಜೆಪಿಯು ಮುಂದಿನ ಪ್ರಧಾನಮಂತ್ರಿಯನ್ನು ತಯಾರಿಸುವ ಕೆಲಸದಲ್ಲಿ ತೊಡಗಿರುವುದು ಕಂಡು ಬರುತ್ತಿದೆ. ಮೊನ್ನೆಮೊನ್ನೆಯವರೆಗೂ ವಿಶ್ರಾಂತಜೀವನದಲ್ಲಿದ್ದ ಎಲ್.ಕೆ.ಅಡ್ವಾಣಿಯವರು ಧುತ್ತನೆ ಪ್ರತ್ಯಕ್ಷರಾಗಿ ರಥವೇರಿ ಕೂರಲು ಸಿದ್ಧರಾಗಿದ್ದರೆ, ಅತ್ತ ಗುಜರಾತ್ ಮುಖ್ಯಮಂತ್ರಿ ನರೇಂದ್ರಮೋದಿ ರಾಷ್ಟ್ರೀಯ ಇಮೇಜು ಸೃಷ್ಟಿಸಲು ಉಪವಾಸ ಬಿದ್ದರು. ಅಧಿಕಾರದ ದಾಹದ ಮುಂದೆ ಹೊಟ್ಟೆಯ ಹಸಿವು ದೊಡ್ಡದಲ್ಲ ಎಂಬುದನ್ನು ತೋರಿಸುವುದಕ್ಕಷ್ಟೇ ಸೀಮಿತವಾದ ಉಪವಾಸದಿಂದ ನಾಡು ಏನನ್ನು ಸಾಧಿಸಿತು ಎಂಬುದೀಗ ಅಪ್ರಸ್ತುತ. ಈ ನಾಯಕರಿಗೆ ಇಷ್ಟು ಬೇಗನೆ ಪ್ರಧಾನಿಗಾದಿಯ ಕನಸು ಬಿದ್ದದ್ದಾರೂ ಏಕೆ?

ಕೇಂದ್ರ ಸರ್ಕಾರಕ್ಕೆ ಇನ್ನೂ ಆಯುಷ್ಯವಿದೆ. ಅವಧಿಗೆ ಮುನ್ನವೇ ಸರ್ಕಾರ ಬಿದ್ದು ಹೋಗುವಂತಹ ದೌರ್ಬಲ್ಯವೇನೂ ಕಾಣಿಸುತ್ತಿಲ್ಲ. ಆದರೆ, ಹಝಾರೆ ಮೂಲಕ ಆರಂಭಗೊಂಡ ಭ್ರಷ್ಟಾಚಾರ ವಿರೋಧಿ ಆಂದೋಲನ, ಗೃಹ ಸಚಿವ ಚಿದಂಬರಂ ಸಹಿತ ಹಲವು ಕೇಂದ್ರ ಮಂತ್ರಿಗಳ ವಿರುದ್ಧ ಕೇಳಿಬರುತ್ತಿರುವ ಭ್ರಷ್ಟಾಚಾರ ಆರೋಪಗಳು ಬಿಜೆಪಿ ನಾಯಕರಲ್ಲಿ ಆಸೆ ಚಿಗುರಿಸಿದೆ. ಒಂದೊಮ್ಮೆ ತಾವು ಅಧಿಕಾರಕ್ಕೆ ಬರುವುದಾದರೂ ಅದು ತಮ್ಮ ಸಾಮರ್ಥ್ಯದಿಂದಲ್ಲ; ಕಾಂಗ್ರೆಸ್ ಸರ್ಕಾರದ ದೌರ್ಬಲ್ಯದಿಂದ ಮಾತ್ರ ಎಂಬುದನ್ನು ಖಚಿತವಾಗಿ ಅರಿತುಕೊಂಡಿರುವ ಬಿಜೆಪಿ ನಾಯಕರು, ಆ ದಿಸೆಯಂದಲೇ ಪ್ರಧಾನಿಗಿರಿಯ ಕನಸು ಕಾಣುತ್ತಿರುವುದು. ತಮ್ಮ ಜೀವಮಾನದ ಕನಸನ್ನು ನನಸಾಗಿಸಲು ಅಡ್ವಾಣಿ ರಂಗಕ್ಕಿಳಿದ ಬೆನ್ನಲ್ಲೇ ಮೋದಿ ಕೂಡಾ ಧಾವಿಸಿದರು. ಯಾರೋ ಅಮೇರಿಕದವರು ಭಾರತದ ಪ್ರಧಾನಿಗಿರಿಗೆ ತಮ್ಮ ಹೆಸರನ್ನು ಸೂಚಿಸಿದ್ದೇ ಮೋದಿ ಹಿರಿಹಿರಿ ಹಿಗ್ಗಲು ಕಾರಣ. ಒಂದಂತೂ ನಿಜ, ಇನ್ನೂ ಬಹಳ ದೂರದಲ್ಲಿರುವ ಪ್ರಧಾನಿಗಾದಿಗಾಗಿ ಬಿಜೆಪಿಯೊಳಗೆ ಮುಸುಕಿನ ಗುದ್ದಾಟ ನಡೆಯುತ್ತಿದೆ. ಆದರೆ, ಕೋಮುವಾದಿ ರಾಜಕೀಯದಿಂದ ಬೇಸತ್ತು ಪ್ರಗತಿಪರ ಆಡಳಿತ ಬಯಸಿರುವ ಜನತೆಗೆ ಕಾಂಗ್ರೆಸ್ ಅಲ್ಲದ ಪರ್ಯಾಯ ಇಲ್ಲದಿರುವುದರಿಂದ ಮತ್ತೆ ಯುಪಿಎ ಮರಳುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. 'ನಾನು ಪ್ರಧಾನಿ ಅಭ್ಯರ್ಥಿಯಲ್ಲ' ಎಂಬ ಅಡ್ವಾಣಿ ಮಾತು ನಿಜವಾಗುವ ಲಕ್ಷಣವೇ ಹೆಚ್ಚು. ■



ಅಕ್ಟೋಬರ್ ಸಂಚಿಕೆ ಮಾರುಕಟ್ಟೆಯಲ್ಲಿ
ಬೇಕೇ ಈ ಟೆನ್ಷನ್?
ಹಾಗೇ 133ನೇ ಬಾರಿ ನಿಮ್ಮೊಂದಿಗೆ...!
ಇನ್ನೂ ಹಲವಾರು ಉತ್ತಮ ಬರಹಗಳೊಂದಿಗೆ...


We Craft as per your Choice...
Cell : 94815 14543
94815 14541
Rifa Burkha House
Shop No. 220, Kunil Complex, KANKANADY, MANGALORE.
Ph.: 0824-2434543
Burkha, Hijab, Shawls, Scarf, Irani Shawls & Stiching


ಮದುವೆ ಖರೀದಿ ಮೇಲೆ ವಿಶೇಷ ರಿಯಾಯಿತಿ
916 gold
ಅಭಿಮಾನ್ ಗೋಲ್ಡ್
ಸದಾ ಬಾಳುವ ಪರಿಶುದ್ಧತೆ
Gold I Silver I Birth Stone
ಸೌಂದರ್ಯದ ವರ್ಣನೆಗೆಂದೇ...
ಆಕರ್ಷಕ ಅದೃಷ್ಟ ಬಹುಮಾನ ಯೋಜನೆಯ ಗೋಲ್ಡ್ ಸ್ಕೀಮ್ ನಮ್ಮಲ್ಲಿ ಲಭ್ಯ.
ನಮ್ಮ ಮಳಿಗೆ ಭಾನುವಾರವೂ ತೆರೆದಿರುತ್ತದೆ.
ಅಂಜುಮಾನ್ ರೋಡ್, ಸಿಟಿ ಬಸ್ ಸ್ಟ್ಯಾಂಡ್, ಉಡುಪಿ.
0820 - 4295313, (S) 2593313, Mob: 9964428159, 9880898343
● ಅತ್ಯಂತ ಕಡಿಮೆ ಬೆಲೆಯಲ್ಲಿ ನಿಮ್ಮ ಆಯ್ಕೆಯ ಪರಿಶುದ್ಧ ಚಿನ್ನಾಭರಣ. ಚಿನ್ನಾಭರಣಗಳ ವಿಸ್ತೃತ ಸಂಗ್ರಹ. ● ಆಭರಣಕ್ಕಾಗಿ 100% ಬೈಬ್ಯಾಕ್ ಖಾತರಿ. ಜೀವನ ಪರ್ಯಂತ ಉಚಿತ ನಿರ್ವಹಣೆ. ● ಚಿನ್ನದ ಪರಿಶುದ್ಧತೆಯನ್ನು ಪರೀಕ್ಷಿಸಲು ಗೋಲ್ಡ್ ಚೆಕ್ ಕ್ಯಾರೆಟ್ ಅನಲೈಸರ್ ವ್ಯವಸ್ಥೆ. ● ನಿಮ್ಮ ಹಳೆ ಚಿನ್ನಾಭರಣವನ್ನು ಹೊಸ ಚಿನ್ನಾಭರಣದ ಜೊತೆಗೆ ವಿನಿಮಯ ಮಾಡುವಾಗ ನಿಮ್ಮ ಹಳೆ ಚಿನ್ನಾಭರಣಕ್ಕೆ ಪೂರ್ತಿ ಮೌಲ್ಯ ಪಡೆಯಿರಿ.

ಸಂಪಾದಕೀಯ

# ಹಜ್ಜಾಜ್‌ಗಳೇ, ಶುಭವಾಗಲಿ

ಮುಸ್ಲಿಂ ಜಗತ್ತು ಮಕ್ಕಾ ಮದೀನಾಗಳಿಗೆ ಮತ್ತೆ ಗಮನ ನೆಟ್ಟಿದೆ. ಸಮಾಜದ ಪ್ರತಿನಿಧಿಗಳಾಗಿ ಲಕ್ಷಾಂತರ ಸತ್ಯವಿಶ್ವಾಸಿ ಸಹೋದರ ಸಹೋದರಿಯರು ಪವಿತ್ರ ಹಜ್ಜ್‌ಗೆ ಹೊರಟು ನಿಂತಿದ್ದಾರೆ. ಸಮಾಜ ಬಾಂಧವರು ಅವರನ್ನು ಅಪ್ಪಿಕೊಂಡು, ಪ್ರಾರ್ಥನೆಗೆ ಬೇಡಿಕೊಂಡು ತಾವೂ ಅತ್ತ ಹೋಗಬೇಕೆಂಬ ಆಸೆ ತುಂಬಿಕೊಂಡು ಬೀಳ್ಕೊಡಲು ಸಜ್ಜಾಗಿದ್ದಾರೆ.

ಹಜ್ ಇಸ್ಲಾಮಿನ ಐದು ಆಧಾರ ಸ್ತಂಭಗಳಲ್ಲಿ ಐದನೆಯದು. ಆರೋಗ್ಯ, ಆರ್ಥಿಕತೆ, ಯಾತ್ರಾನು ಕೂಲತೆ ಇರುವ ಮುಸ್ಲಿಮನಿಗೆ ಕಡ್ಡಾಯ. ಅನು ಕೂಲತೆಯಿದ್ದೂ ಅವಗಣಿಸುವುದು ಮಹಾ ಪಾಪ. ಅನುಕೂಲತೆಯೆಂದರೆ ಕೋಟ್ಯಾಧೀಶನಾಗುವುದು ಎಂದಲ್ಲ. ಹಜ್‌ಗೆ ಬೇಕಾದ ಖರ್ಚು, ಹೋಗಿ ಬರುವ ವರೆಗೆ ತನ್ನ ಕುಟುಂಬಕ್ಕೆ, ಆಶ್ರಿತರಿಗೆ ಬೇಕಾದ ಖರ್ಚು ಮಾಡುವಷ್ಟು ಇದ್ದರೆ ಹಜ್ ಕಡ್ಡಾಯ. ಅಗತ್ಯಕ್ಕಿಂತ ಹೆಚ್ಚಿನ ಮನೆಯೋ, ಇತರ ಸಂಪತ್ತೋ ಇದ್ದು, ಅದನ್ನು ಮಾರಿ ಅಗತ್ಯಕ್ಕೆ ಬೇಕಾದಷ್ಟು ಮನೆ ಯಾ ಇತರ ವಸ್ತುಗಳನ್ನು ಹೊಂದಿ ಉಳಿದ ಹಣದಲ್ಲಿ ಹಜ್ ಮಾಡಲು ಸಾಧ್ಯವೆಂದಾದರೆ ಹಾಗೇ ಮಾಡುವುದು ಕಡ್ಡಾಯ. ಹಾಗಿದ್ದೂ, ಹಜ್‌ನ ದುಪ್ಪಟ್ಟು ಖರ್ಚಿನಲ್ಲಿ ಅಟಾಚ್ಡ್ ಬಾತ್‌ರೂಂ ಸಿದ್ಧಪಡಿಸಿದವರೂ ಹಜ್‌ಗೆ ಗಮನ ನೀಡದಿರುವುದು ಕಂಡುಬರುತ್ತದೆ. ಇಂತಹವರನ್ನು ಎಚ್ಚರಿಸುವ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ಒಂದು ವಚನ ಬಹಳ ಗಂಭೀರವಾಗಿದೆ; ಅಲ್ಲಾಹನ ಭವನಕ್ಕೆ ತೆರಳಲು ಬೇಕಾದ ಸೌಲಭ್ಯಗಳಿದ್ದೂ ಯಾರಾದರೂ ಹಜ್ ನಿರ್ವಹಿಸದೇ ಇದ್ದರೆ ಅವನು ಯಹೂದಿಯೋ ನಸ್ರಾನಿಯೋ ಆಗಿ ಸಾಯುವುದಕ್ಕೆ ಅಡ್ಡಿಯಿಲ್ಲ! *(ತಿರ್ಮುದಿ)*

ಸಾಧ್ಯವಿದ್ದೂ ಹಜ್ ಮಾಡದವನಿಗೆ ಈಮಾನ್ ಇಲ್ಲದ ಅಂತ್ಯ ಬಂದೆರಗುವುದು ಎನ್ನುವುದಕ್ಕಿಂತ ಗಂಭೀರ ಎಚ್ಚರಿಕೆ ಬೇರೆ ಬೇಕೆ? ಅಲ್ಲಾಹು ಕಾಪಾಡಲಿ.

ಹಜ್ಜನ್ನು ಸಾಧ್ಯವಾದಷ್ಟು ಬೇಗನೆ ಮಾಡಬೇಕು. ಸಾಧ್ಯವಿದ್ದೂ ಮುಂದೂಡುವುದು ಸಲ್ಲದು. ಕೆಲವರು ಕುಂಟು ನೆಪ ಹೇಳಿ ಮುಂದೂಡುವುದುಂಟು. ಮಕ್ಕಳ ಮದುವೆ, ಹೊಸ ಮನೆ, ತಂದೆ ತಾಯಿಯ ಹಜ್ ಇತ್ಯಾದಿಯೆಲ್ಲ ಮುಗಿದ ಮೇಲೆ ಹಜ್‌ಗೆ ಹೋಗೋಣ ಎನ್ನುವವರಿದ್ದಾರೆ. ಹಜ್ ಫರಳ್ ಐನ್ -ವೈಯಕ್ತಿಕ ಕಡ್ಡಾಯ - ಆಗಿದ್ದು, ತನಗೆ ಅದರ ಸಾಮರ್ಥ್ಯ ಕೈಗೂಡಿದ ಮೇಲೆ ಯಾವುದೇ ನೆಪದಿಂದ ಮುಂದೂಡುವಂತಿಲ್ಲ. 'ಮಾಡುವುದನ್ನೆಲ್ಲ ಮಾಡಿ ಕೊನೆಗೆ ಹಜ್‌ಗೆ ಹೋಗಿ ಶುದ್ಧವಾಗಿ ಬರ್‍ತೇನೆ' ಎಂದು ಭಾವಿಸುವವರೂ ಇಲ್ಲದಿಲ್ಲ. ಅವರಿಗೆ ಉಳಿಯುವ ಖಾತರಿ ಯಾರಿಗಿದೆ ಹೇಳಿ? ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳುತ್ತಾರೆ; "ನೀವು ಹಜ್ಜ್‌ಗೆ ಬೇಗ ಹೋಗಿ. ನಿಮಗೆ ಮುಂದೆ ಬರಬಹುದಾದ ಅಡ್ಡಿ ಗಳ ಬಗ್ಗೆ ಯಾರಿಗೂ ಗೊತ್ತಿಲ್ಲ." (ಇಸ್‌ಬಹಾನಿ)

"ಯಾರಾದರೂ ಹಜ್ಜ್ ಮಾಡಬಯಸುವುದಾದರೆ ಅವನದನ್ನು ಬೇಗನೇ ಪೂರೈಸಲಿ." (ಇಬ್ನುಮಾಜ)

ಹಜ್ ಅತ್ಯುನ್ನತವಾದ ಒಂದು ಆರಾಧನೆ. ಇತರೆಲ್ಲ ಆರಾಧನೆಗಳಿಗಿಂತ ಭಿನ್ನವಾಗಿ, ಒಂದು ನಿರ್ದಿಷ್ಟ ಅವಧಿಯಲ್ಲಿ, ಒಂದು ನಿಗದಿತ ಜಾಗದಲ್ಲಿ ಮಾತ್ರ ಮಾಡಲು ಸಾಧ್ಯವಿರುವ ಸತ್ಕರ್ಮ. ಇತರ ಆರಾಧನೆಗಳಂತೆ ನಿರಂತರ ನಿರ್ವಹಿಸುವುದು ಕೂಡಾ ಕಡ್ಡಾಯವಿಲ್ಲ. "ಹಜ್ಜ್ ಕಡ್ಡಾಯ ಒಮ್ಮೆ ಮಾತ್ರ. ಯಾರಾದರೂ ಹೆಚ್ಚಿಸುವುದಾದರೆ ಅದು ಸುನ್ನತ್" ಎಂದಿದ್ದಾರೆ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಂ (ಅಬೂದಾವೂದ್).

ಕರ್ಮಶಾಸ್ತ್ರ ನಿಗದಿಪಡಿಸಿದ ಸಾಮರ್ಥ್ಯವಿಲ್ಲದ ವ್ಯಕ್ತಿ ಕಷ್ಟಪಟ್ಟು ಹಜ್ ನಿರ್ವಹಿಸಿದರೂ ಕಡ್ಡಾಯ ಹಜ್ ಸಂದಾಯವಾಗುವುದು. ಅಪಾರ ಪುಣ್ಯ ದೊರೆಯುವುದು.

ಹಜ್ಜ್ ಅಪಾರ ಪುಣ್ಯಗಳ ಆಗರ. ಆ ಜಾಗವೇ ಅತ್ಯಂತ ಪುಣ್ಯಕರವಾದುದು. ಮಕ್ಕಾದ ಹರಂ ಭೂಮಿಯಲ್ಲಿ ಒಂದು ಆರಾಧನೆಗೆ ಒಂದು ಲಕ್ಷ ಆರಾಧನೆಯ ಪುಣ್ಯವಿದೆ! 'ಖೈರು ಉಮ್ಮತ್' ಎಂದು ವರ್ಣಿಸಲಾದ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ಸಮುದಾಯಕ್ಕೆ ಅಲ್ಲಾಹು ನೀಡಿರುವ ಹಿರಿಮೆಗಳಲ್ಲಿ ಇದೂ ಒಂದು; ಕನಿಷ್ಠ ಆರಾಧನೆಯಿಂದ ಗರಿಷ್ಠ ಪುಣ್ಯ ಸಂಪಾದನೆ! ಇದು ಅಲ್ಲಿನ ಭೂಮಿಯ ಹಿರಿಮೆಯಾದರೆ, ಅಲ್ಲಿನ ಪವಿತ್ರ ಮಸೀದಿ, ಭೂಮುಖದ ಮೇಲಿನ ಮೊದಲ ಆರಾಧನಾಲಯವಾದ ಮಸ್ಜಿದುಲ್ ಹರಾಂನಲ್ಲಿ ಮಾಡುವ ಆರಾಧನೆಯ ಪುಣ್ಯ ಹೇಳಬೇಕೇ! ಅಲ್ಲಿರುವ ಕಅ್‌ಬಾದ ಬಳಿ **120** ಅಲ್ಲಾಹನ ರಹ್ಮತ್ ಸುರಿಯುತ್ತದೆ. ಅಲ್ಲಾಹನ ರಹ್ಮತ್ ಒಂದಿಷ್ಟು ಸಿಕ್ಕಿದರೂ ಅದಕ್ಕಿಂತ ದೊಡ್ಡ ಭಾಗ್ಯವೇನಿದೆ? 'ಅಲ್ಲಾಹನಿಂದ ಸಿಗುವ ಸಣ್ಣ ತೃಪ್ತಿ ಅತ್ಯಂತ ದೊಡ್ಡದು' ಎನ್ನುತ್ತದೆ ಖುರ್‌ಆನ್.

"ಆ ಪ್ರದೇಶಕ್ಕೆ ಪ್ರವೇಶಿಸಿದವನು ಸುರಕ್ಷಿತನು" ಎನ್ನುತ್ತದೆ ಖುರ್‌ಆನ್ **(3:97)** ಅಂದರೆ, ನರಕದ ಬಗ್ಗೆ ಆತ ಭಯ ಪಡಬೇಕಾಗಿಲ್ಲ. ಏಕೆಂದರೆ, ಹಜ್ಜ್ ಸ್ವರ್ಗದ ಖಚಿತ ಭರವಸೆಯನ್ನು ನೀಡುತ್ತದೆ. ಆದರೆ ಒಂದು ಶರತ್ತು ಇದೆ - ಹಜ್ಜ್ ಮಬ್‌ರೂರ್ ಆಗಿರಬೇಕು. ಪಾಪಗಳಿಂದ ಮುಕ್ತವಾದ, ಕೊರತೆಗಳಿಲ್ಲದ ಸ್ವೀಕಾರಾರ್ಹ ಹಜ್ ಆಗಿರಬೇಕು. ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು; ಸ್ವೀಕೃತ ಹಜ್‌ಗೆ ಸ್ವರ್ಗವೇ ಪ್ರತಿಫಲ (ಬುಖಾರಿ).

ಹಜ್ಜ್ ಪಾಪಗಳಿಗೆ ಪರಿಹಾರ. ಲೈಂಗಿಕತೆಯಲ್ಲೋ, ಪಾಪ ಕೃತ್ಯಗಳಲ್ಲೋ ತೊಡಗದೆ ಅಲ್ಲಾಹನಿಗಾಗಿ ಯಾರಾದರೂ ಹಜ್ಜ್ ನಿರ್ವಹಿಸಿದರೆ ಅವನು ತನ್ನ ತಾಯಿ ಜನ್ಮವಿತ್ತ ದಿನದಲ್ಲಿದ್ದಷ್ಟು ಶುದ್ಧನಾಗುವನು. *(ಬುಖಾರಿ)* ಹಜ್ಜ್ ಖಂಡಿತವಾಗಿಯೂ ಹಿಂದೆ ಆಗಿ ಹೋದ ಪಾಪಗಳನ್ನು ನೀಗಿಸುತ್ತದೆ. (ಮುಸ್ಲಿಂ) ನೀವು ಹಜ್ಜ್ ನಿರ್ವಹಿಸಿರಿ. ನೀರು ಕೊಳಕನ್ನು ನೀಗಿಸುವಂತೆ ಹಜ್ಜ್ ಪಾಪಗಳನ್ನು ತೊಳೆಯುವುದು. *(ತ್ವಬ್‌ರಾನಿ)* ಇತ್ಯಾದಿಯಾಗಿ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾರೆ.

ಸ್ವೀಕೃತವಾದ ಹಜ್ಜ್‌ಗೂ ಇತರ ಆರಾಧನೆಗಳಿಗೂ ಶ್ರೇಷ್ಠತೆಯಲ್ಲಿ ಪೂರ್ವ ಪಶ್ಚಿಮದಷ್ಟು ಅಂತರವಿದೆ. (ಅಹ್ಮದ್) ಹಜ್ಜ್ ಎಂಬ ಆರಾಧನೆ ಅತ್ಯಂತ ಶ್ರೇಷ್ಠವಾಗಿರುವಂತೆ ಅದನ್ನು ನಿರ್ವಹಿಸುವ ಹಾಜಿಗೂ ಬಹಳ ಹಿರಿಮೆಯಿದೆ.

ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು; ಹಜ್ಜ್ ನಿರ್ವಹಿಸುವವನಿಗೂ ಅವನು ಯಾರಿಗೆಲ್ಲ ಕ್ಷಮೆ ಯಾಚಿಸುತ್ತಾನೋ ಅವರಿಗೂ ಕ್ಷಮಿಸಲಾಗುವುದು. *(ತ್ವಬ್‌ರಾನಿ)* ಹಜ್ಜ್ ಮತ್ತು ಉಮ್ರಾಗಳನ್ನು ಮಾಡುವವರು ಅಲ್ಲಾಹನ ಬಳಿಗೆ ಹೋಗುವ ನಿಯೋಗಗಳು. ಅವರು ಬೇಡಿದರೆ ಅಲ್ಲಾಹು ನೀಡುವನು. ಅವರು ಕ್ಷಮೆ ಯಾಚಿಸಿದರೆ ಅವನು ಕ್ಷಮಿಸುವನು. *(ಇಬ್ನು ಮಾಜಃ)* ಹಜ್ಜ್ ನಿರ್ವಹಿಸುವವನು ತನ್ನ ಕುಟುಂಬದಿಂದ **400** ಜನರಿಗೆ ಶಿಫಾರಸು ಮಾಡಿದರೂ ಅದು ಸ್ವೀಕರಿಸಲ್ಪಡುವುದು. *(ಬಝ್ಝಾರ್)* ಎಂಬುದಾಗಿ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ತಿಳಿಸಿದ್ದಾರೆ. ಸಾಧ್ಯವಿರುವ ಪ್ರತಿಯೊಬ್ಬರಿಗೂ ಜೀವನದಲ್ಲಿ ಒಂದು ಬಾರಿ ಹಜ್ ಕಡ್ಡಾಯ.

ಸಾಧ್ಯವಿರುವವರು ಎಷ್ಟು ಹಜ್ಜ್‌ಗಳನ್ನೂ ನಿರ್ವಹಿಸಬಹುದು. ಆದರೆ, ಸಂಖ್ಯೆ ಹೆಚ್ಚಿಸುವುದಕ್ಕಾಗಿಯೇ ಹಜ್ಜ್ ನಿರ್ವಹಿಸುವುದು ಸರಿಯಲ್ಲ. 'ಎಷ್ಟು ಹಜ್ಜ್?' ಎನ್ನುವುದಕ್ಕಿಂತ 'ಎಂತಹ ಹಜ್ಜ್?' ಎನ್ನುವುದು ಮುಖ್ಯ ಪ್ರಶ್ನೆ. ಒಂದಾದರೂ ಅಲ್ಲಾಹು ಸ್ವೀಕರಿಸಿದರೆ ಸಾಕು. ಹಾಜಿಗಳು ಗಮನಿಸಬೇಕಾದ್ದು ಮಾಡುವ ಹಜ್ಜ್‌ನ ಗುಣಮಟ್ಟ ಕಾಯುವ ಬಗ್ಗೆಯೆ. ಹೆಚ್ಚೆಚ್ಚು ನಿರ್ವಹಿಸಲು ಸಾಧ್ಯವಾದರೆ ಭಾಗ್ಯವೆ. ಅದಕ್ಕಾಗಿ ಕಅ್‌ಬಾದ ಬಳಿ, ರೌಳಾದ ಬಳಿ 'ಅಲ್ಲಾಹನೇ! ಇದನ್ನು ನನ್ನ ಕೊನೆಯ ಆಗಮನವಾಗಿ ಮಾಡದಿರು ನಾಥಾ!' ಎಂದು ಪ್ರಾರ್ಥಿಸಬೇಕು.

ನಮ್ಮಿಂದ ಪವಿತ್ರ ಹಜ್‌ಯಾತ್ರೆಗೆ ಹೊರಟು ನಿಂತಿರುವ ಯಾತ್ರಿಕರು ಭಾಗ್ಯಶಾಲಿಗಳು. ಅಲ್ಲಾಹನ ಅತಿಥಿಗಳಾಗಿ ಪವಿತ್ರ ಭೂಮಿಗೆ ತೆರಳಿ ಆರಾಧನಾ ನಿರತರಾಗುವ, ಪಾಪಮುಕ್ತರಾಗಲು ಅವಕಾಶಪಡೆದವರು. ಸೌದಿ ಮತ್ತು ಭಾರತ ಸರ್ಕಾರಗಳು ಅವರಿಗೆ ಬಹುತೇಕ ಸೌಕರ್ಯಗಳನ್ನು ಏರ್ಪಡಿಸಿದ್ದರೂ ಜಗತ್ತಿನ ಅತಿದೊಡ್ಡ ಜನಸಂಗಮವಾಗಿರುವುದರಿಂದ ಏರುಪೇರುಗಳು ಸಹಜ. ಯಾತ್ರಾ ನಡುವಿನ ಸಂಕಷ್ಟಗಳು ಸೇರಿ ಎಡರುತೊಡರುಗಳನ್ನೆಲ್ಲ ಸಹನೆಯಿಂದ ಎದುರಿಸಿ ಅಲ್ಲಾಹನ ಸಂತೃಪ್ತಿಗೆ ಏಕಾಗ್ರಚಿತ್ತರಾಗಿ ದುಡಿಯುವ, ಸ್ವೀಕೃತ ಸ್ವಾಗತಾರ್ಹ ಹಜ್, ಉಮ್ರಾ, ಝಿಯಾರತ್‌ಗಳನ್ನು ನಡೆಸುವ ತೌಫೀಖ್ ಅಲ್ಲಾಹು ಅವರಿಗೆ ನೀಡಲೆಂದು ಪ್ರಾರ್ಥಿಸುತ್ತಾ, ಶುಭ ವಿದಾಯ ಕೋರೋಣ.■

## ಮಿಡಿತ

ಚಿಣ್ಣರಲೋಕದಲ್ಲಿ ಬರುತ್ತಿರುವ 'ನಫೀಸಾ' ಚರಿತ್ರೆಯು ಆಸಕ್ತಿದಾಯಕವಾಗಿದೆ. ಅಲ್ಲಾಹನ ಸಂತೃಪ್ತಿಯಿಂದ ಉನ್ನತ ಸ್ಥಾನಕ್ಕೇರಿ ಜನಮನದಲ್ಲಿ ಸ್ಥಾನ ಹಿಡಿದಿರುವ ಔಲಿಯಾಗಳ ಚರಿತ್ರೆಯನ್ನು ಮಕ್ಕಳಿಗೆ ಕಲಿಸಿ ಕೊಡುವುದು ಅಗತ್ಯ. ಅದನ್ನು ನಿರ್ವಹಿಸುತ್ತಿರುವ ಪತ್ರಿಕೆಗೂ, ಲೇಖಕರಿಗೂ ಧನ್ಯವಾದಗಳು.

- ಫೌಝಿಯಾ ಅಡ್ಯಾರ್ ಕಣ್ಣೂರು, - ಖಲಂದರ್ ಪಿ.ಉದ್ಯಾವರ

## ಪ್ರವಾದಿ ﷺ ನುಡಿರತ್ನಗಳು

### ಬಲದಿಂದ ಆರಂಭ

556

ಅಬೂಹುರೈರಾ (ರ)ರಿಂದ ವರದಿ. ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು; ನೀವು ವಸ್ತ್ರ ತೊಡುವುದಾದರೆ, ವುಳೂ ಮಾಡುವುದಾದರೆ ಬಲಭಾಗದಿಂದ ಆರಂಭಿಸಿರಿ. (ಅಬೂದಾವೂದ್, ತಿರ್ಮುದಿ)

## 2011 ವಾರದ ನಮಾಝ್ ವೇಳಾಪಟ್ಟಿ 1432

| ಸೆಪ್ಟೆಂಬರ್ -ಅಕ್ಟೋಬರ್ ದಿನಾಂಕ | ಸುಬುಹಿ | ಲುಹರ್ | ಅಸರ್(ಶಾ) | ಅಸರ್(ಹ) | ಮಗ್ರಿಬ್ | ಇಶಾ (ಶಾಫಿ) | ಇಶಾ (ಹನಫಿ) | ಉದಯ |
|---|---|---|---|---|---|---|---|---|
| 25, 26, 27 | 5.05 | 12.26 | 3.45 | 4.46 | 6.29 | 7.39 | 7.47 | 6.19 |
| 28, 29, 30 | 5.05 | 12.25 | 3.44 | 4.45 | 6.27 | 7.37 | 7.45 | 6.19 |
| 01, 02, 03 | 5.05 | 12.24 | 3.44 | 4.44 | 6.25 | 7.35 | 7.43 | 6.19 |

ಪ್ರಸ್ತುತ ವೇಳಾಪಟ್ಟಿ ಮಂಗಳೂರು ಕೇಂದ್ರವಾಗಿಟ್ಟುಕೊಂಡು 25 ಕಿ.ಮೀ. ತನಕವಾಗಿದ್ದು ನಂತರ ಪ್ರತಿ 25 ಕಿ.ಮೀ.ಗೆ 1 ನಿಮಿಷದಂತೆ ಸೇರಿಸಿ 100 ಕಿ.ಮೀ. ತನಕ ಉಪಯೋಗಿಸಬಹುದಾಗಿದೆ.

# ವಿದೇಶದಲ್ಲಿದ್ದುಕೊಂಡೇ ಸ್ವದೇಶದಲ್ಲಿ ದಅ್‌ವಾ ನಡೆಸುವಿರಾ?

.... ಕೇರಳಕ್ಕೆ ತಾಗಿ ನಿಂತಿರುವ ಹಾಗೂ ಧಾರ್ಮಿಕ ಸಂಪರ್ಕವಿರುವ ಕರ್ನಾಟಕದ ಜಿಲ್ಲೆಗಳಲ್ಲಿ ಮಾತ್ರ ಇಸ್ಲಾಮ್ ಧರ್ಮದ ಚಿಹ್ನೆಗಳನ್ನು ಕಾಣಬಹುದು. ಇತರ ಜಿಲ್ಲೆಗಳಿಗೆ ನಾವು ಪ್ರವೇಶಿಸಿದಂತೆಲ್ಲಾ ಧಾರ್ಮಿಕವಾಗಿ ಅಧೋಗತಿಯನ್ನೇ ನಮಗೆ ದರ್ಶಿಸಬಹುದಾಗಿದೆ.

ಅಲ್ಲಿರುವವರು ಮನುಷ್ಯರಷ್ಟೆ. ಬದುಕಲೋಸ್ಕರ ಕೆಲಸ ಮಾಡುವವರು, ತಿಂದುಣ್ಣುವವರು, ಸುಖಪಡುವವರು. ಇಹಲೋಕದ ಬದುಕಿನ ನಂತರದ ಬಗ್ಗೆ ಅವರಿಗೆ ಅರಿವಿಲ್ಲ. ಅರಿತರೂ ಆ ಬಗ್ಗೆ ಪ್ರಜ್ಞೆ ಇಲ್ಲ. ಹೇಗಿದ್ದರೇನು? ಇರುವಷ್ಟು ದಿನ ಹಾಯಾಗಿರುವುದಷ್ಟೇ ಇವರ ಮನದಿಂಗಿತ.

ಇವರಲ್ಲಿ ಮುಸ್ಲಿಮ್ ಹೆಸರಿನವರಿದ್ದರೂ ಇಸ್ಲಾಮಿನ ಆಚರಣೆಗಳಿಲ್ಲ. ಆದರೆ ಇಸ್ಲಾಮೇತರ ಆಚರಣೆಗಳನ್ನೂ, ಸ್ವಯಂ ಘೋಷಿತ ರೀತಿ ರಿವಾಜುಗಳನ್ನೂ ಇಸ್ಲಾಮ್ ಧರ್ಮದ್ದೆಂದೇ ಬಿಂಬಿಸುವಂತೆ ಇಲ್ಲಿನವರು ಮಾಡುತ್ತಿರುವುದು ಮಾತ್ರ ಖೇದಕರ ಸಂಗತಿ.

ಹುಬ್ಬಳ್ಳಿಯ ಸಂಡೂರು ಎಂಬಲ್ಲಿನ ಮಸ್ಜಿದ್‌ಗೆ ವಿಸ್ಕಿಯನ್ನು ಹರಕೆ ನೀಡಿದ್ದು ಅರಿತಾಗ ಮನಸ್ಸು ತುಂಬಾ ದುಃಖಿಸಿತು....

ಇನ್ನೊಂದೆಡೆ ಕೆಲವರು ಕುದುರೆಯೊಂದನ್ನು ಮಸ್ಜಿದ್‌ಗೆ ಹರಕೆ ಮಾಡಿ, ಅದು ಸತ್ತಾಗ ಅದರ ಸಮಾಧಿಯ ಸುತ್ತಲೂ ಪ್ರದಕ್ಷಿಣೆ ಬರುತ್ತಿದ್ದಾರೆ...

ಹೀಗೆ ಎಷ್ಟೊಂದು ಘಟನೆಗಳು...

ಇಲ್ಲಿನವರಲ್ಲಿ ತಿಳುವಳಿಕೆ ಮೂಡಿಸಲು ಕರ್ನಾಟಕ ರಾಜ್ಯ SSF ಅಧೀನದ IHSAN ತಂಡವು ಕಳೆದ ನಾಲ್ಕು ವರ್ಷಗಳಲ್ಲಿ ದುಡಿಯುತ್ತಿದೆ. ಈ ತನಕದ ರಮಳಾನ್ ತಿಂಗಳಲ್ಲಿ ಸುಮಾರು ನಲವತ್ತರಷ್ಟು ಕಾರ್ಯಕರ್ತರು ಅಲ್ಲಿಗೆ ತೆರಳಿ ಧರ್ಮ ಬೋಧನೆಗಾಗಿ ಕಾರ್ಯಾಚರಿಸುತ್ತಿದ್ದವರು ಈ ಸಲ ನೂರು ಕಾರ್ಯಕರ್ತರು ಸಿದ್ಧರಾಗಿದ್ದಾರೆ.

ಆದರೆ ರಮಳಾನ್ ಮುಗಿದಾಗ ಇವರೆಲ್ಲರೂ ವಾಪಾಸು ಬರುವ ಕಾರಣ ಅಲ್ಲಿನ ಜನರಲ್ಲಿ ಬೆರೆತು ವರ್ಷವಿಡೀ ಬೋಧಿಸಲು ಖಾಯಂ ಬೋಧಕರನ್ನು ನೇಮಕ ಮಾಡಬೇಕಾಗಿದೆ. ಸದ್ಯಕರಾಯದ ಕೆ.ಎಂ.ಮರ್ಶದ್ ಹುಮೈದಿಯವರು ದುಡಿಯುತ್ತಿದ್ದಾರೆ. ಅಲ್‌ಹಮ್ದುಲಿಲ್ಲಾಹ್...

ಇದರ ಜತೆಗೇ...

ಅಲ್ಲಿ ಮೊಳಕೆಯೊಡೆಯುತ್ತಿರುವ ಧಾರ್ಮಿಕತೆಯನ್ನು ಉಳಿಸಿ, ಪೋಷಿಸಿ, ಬೆಳೆಸಲು ಆ ಊರುಗಳಲ್ಲಿ ಮದ್ರಸಾಗಳನ್ನು ನಿರ್ಮಿಸುವುದು, ರಮಳಾನ್ ತಿಂಗಳಲ್ಲಿ ದಾಇಗಳನ್ನು ನೇಮಿಸುವುದು, ಅಲ್ಲಿನ ಮನೆಗಳಿಗೆಲ್ಲಾ ಉಚಿತವಾಗಿ ಅಲ್ ಅನ್ಸಾರ್ ಪತ್ರಿಕೆಗಳನ್ನು ಹಂಚುವುದು, ಮುಂತಾದ ವ್ಯವಸ್ಥೆಗಳನ್ನು ಮಾಡುವುದಾಗಿದೆ ನಮ್ಮ ಮೊದಲ ಗುರಿ.

ಇದಕ್ಕಾಗಿ ಕೊಡುಗೈ ದಾನಿಗಳಿಂದ, ಸಹೃದಯಿ ಕಾರ್ಯಕರ್ತರಿಂದ, ಉದಾರ ಮನಸ್ಕರಿಂದ ನೆರವನ್ನು ಕೋರುತ್ತಿದ್ದೇವೆ.

| | |
|---|---|
| ಮದರಸ ನಿರ್ಮಾಣ | 1500 ದಿರ್ಹಂ |
| ದಾಇಗಳಿಗೆ ಗೌರವ ಧನ | 400 ದಿರ್ಹಂ |
| ಅಲ್ ಅನ್ಸಾರ್ 10 ಚಂದಾ | 250 ದಿರ್ಹಂ |

**ಆಸಕ್ತರು ಈ ಕೆಳಗಿನ ಹಿತೈಷಿಗಳನ್ನು ಸಂಪರ್ಕಿಸಿರಿ**

| | |
|---|---|
| ಮಂಗಳೂರು | ಜಿ.ಎಂ.ಮುಹಮ್ಮದ್ ಕಾಮಿಲ್ ಸಖಾಫಿ<br>0091 94484 09049 |
| ಸೌದಿ ಅರೇಬಿಯಾ | ಹಾಫಿಳ್ ಜಿ.ಎಂ.ಸುಲೈಮಾನ್ ಹನೀಫೀ ಜಿದ್ದಾ<br>00966 508 666 833 |
| ಯು.ಎ.ಇ | ಮುಹಮ್ಮದ್ ಇಖ್‌ಬಾಲ್ ಕಾಜೂರು<br>00971 557 687 004 |
| | ಕೆ.ಎಂ.ಮುಹಮ್ಮದ್ ಶಹೀರ್ ಕರಾಯ<br>00971 554 404 751 |
| ಕತಾರ್ | ಅಬ್ದುರ್ರಹೀಮ್ ಸಅದಿ ಪಾಣೆಮಂಗಳೂರು<br>0097 455 364 859 |
| ಬಹರೈನ್ | ಎಸ್.ಎಂ.ಫಾರೂಖ್ ಕುಂಬ್ರ<br>0097 338 375 247 |
| ಕುವೈತ್ | ಪಿ.ಪಿ.ಅಬ್ದುಲ್ ಹಮೀದ್ ಕಾಶಿಪಟ್ನ<br>0096 565 520 784 |




ಎಸ್.ಪಿ.ಎಚ್.

# ಇದು ನಮಗೆ ಹೇಳಿಸಿದ್ದಲ್ಲ

**ನ್ಯಾಯ, ನೀತಿ, ಪ್ರೀತಿ, ಸೌಹಾರ್ದಕ್ಕೆಲ್ಲ ಅರ್ಥ ನಿರಾಕರಿಸಲ್ಪಡುವ ಸ್ಥಿತಿಗೆ ಆಧ್ಯಾತ್ಮಿಕ ಶಿಕ್ಷಣ ಕೇಂದ್ರದ ಸುತ್ತಣ ವಿದ್ಯಮಾನಗಳು ತಲುಪುವುದಾದರೆ "ಇದು ಮುಸ್ಲಿಮ್ ಸಮುದಾಯಕ್ಕೆ ಹೇಳಿಸಿದ್ದಲ್ಲ" ವೆಂದು ದುಃಖದಿಂದ ಹೇಳಿ ಮೌನವಾಗಿರುವುದೊಂದೇ ಉಳಿದಿರುತ್ತದೆ.**



ಉತ್ತಮ ವ್ಯಕ್ತಿಗಳು ಕೆಟ್ಟದ್ದನ್ನು ಮಾಡಿದರೆ 'ಛೆ ಅವರು ಹಾಗೆ ಮಾಡಬಾರದಿತ್ತು' ಎಂದು ಜನರಾಡುವುದನ್ನು ನಾವು ಸಾಮಾನ್ಯವಾಗಿ ಕೇಳುತ್ತೇವೆ. ಆ ಕೆಲಸವು ಉತ್ತಮ ವ್ಯಕ್ತಿಗಳಿಗೆ ಅನುಯೋಜ್ಯವಾದುದಲ್ಲವೆಂದು ಜನರು ಮನಗಾಣುತ್ತಾರೆಂದರ್ಥ. ಉತ್ತಮ ವ್ಯಕ್ತಿಗಳು ಜನರಿಗೆ ಮಾದರಿ. ಅವರು ಮಾದರೀಯೋಗ್ಯವಲ್ಲದ್ದನ್ನು ಮಾಡಿದರೆ ಒಂದು ಸಮಾಜದ ವ್ಯವಸ್ಥೆಯು ಡೋಲಾಯಮಾನವಾಗುತ್ತದೆಯೆಂದರ್ಥ. ಉತ್ತಮ ವ್ಯಕ್ತಿಗಳು ಸರಿದಾರಿಯಿಂದ ಸರಿಯುವಾಗ ಸರಿದಾರಿಯು ಅನಾಥವಾಗುತ್ತದೆ. ಕೆಡುಕಿನತ್ತವಿರುವ ಸಮಾಜದ ನಡೆಗೆ ವೇಗ ದೊರಕುತ್ತದೆ.

ಪ್ರತಿಯೊಬ್ಬ ವ್ಯಕ್ತಿಗೂ ಅವನಿಗೆ ಹೊಂದಿಕೊಳ್ಳುವಂತಹ ಕೆಲಸಗಳಿವೆ. ಒಬ್ಬ ವಿದ್ವಾಂಸನಿಗೆ ಅವನಿಗೆ ಹೊಂದಿಕೊಳ್ಳುವ ಒಂದು ವಸ್ತ್ರ ವಿಧಾನವಿದೆ. ಅವನು ಅದನ್ನು ಧರಿಸಬೇಕು. ಸಾಮಾನ್ಯರ ವಸ್ತ್ರ ವಿಧಾನ ಅವನಿಗೆ ಹೇಳಿಸಿದ್ದಲ್ಲ. ಒಬ್ಬ ಸಜ್ಜನನ, ವಿದ್ವಾಂಸನ ಮಾತುಗಳಿಗೆ ಒಂದು ಚೌಕಟ್ಟು ಇದೆ. ಅವನ ನಾಲಗೆಯಿಂದ ಕೆಟ್ಟ ಮಾತುಗಳು ಬರಕೂಡದು. ಜನರ ಪೈಕಿ ನಾಲಗೆಯ ಹಿಡಿತವಿಲ್ಲದ ಕೆಲವರಿರುತ್ತಾರೆ. ಅವರ ನಾಲಗೆಯ ತುದಿಯಲ್ಲೇ ಅಸಭ್ಯಗಳು ತೂಗಾಡಿಕೊಂಡಿರುತ್ತವೆ. ವಿದ್ವಾಂಸನಿಂದ ಯಾ ಸಮಾಜದ ಗೌರವಾನ್ವಿತ ವ್ಯಕ್ತಿಯಿಂದ ಇಂತಹ ಅಸಭ್ಯಗಳು ಬಂದರೆ ಅದು ಅವರಿಗೆ ಹೇಳಿಸಿದ್ದಲ್ಲವೆಂದು ಜನರಾಡುತ್ತಾರೆ. ಅಂದರೆ ಪ್ರತಿಯೊಬ್ಬರಿಗೂ ಅವರಿಗೆ ಹೇಳಿಸಿದ್ದು ಮತ್ತು ಅವರಿಗೆ ಹೇಳಿಸದ್ದು ಎನ್ನುವುದೊಂದಿದೆ.

ಮುಸ್ಲಿಮ್ ಸಮುದಾಯಕ್ಕೊಂದು ಉನ್ನತ ಸಂಸ್ಕೃತಿಯಿದೆ. ಅದು ಅವರಿಗೆ ಹೇಳಿಸಿದ ಸಂಸ್ಕೃತಿ, ಅವರ ಧರ್ಮ ನೀತಿಗಳಿಗೆ ಹೊಂದಿಕೊಳ್ಳುವ ಸಂಸ್ಕೃತಿ. ವರ್ಷಗಳ ಮೊದಲೆಲ್ಲ ಮುಸ್ಲಿಮರು ಕೆಟ್ಟದ್ದು ಮಾಡಿದರೆ ಆ ಬಗ್ಗೆ ಇತರರು ಹುಬ್ಬೇರಿಸಿ ವೀಕ್ಷಿಸುತ್ತಿದ್ದರು. ಅಂದರೆ ಮುಸ್ಲಿಮರು ಹಾಗೆ ಮಾಡುವವರಲ್ಲವೆಂಬ ಭಾವ ಅಂದು ಇತರರಿಗಿತ್ತು. ಆದರೆ ಈಗ ಕಾಲ ಬದಲಾಗಿದೆ. ಮುಸ್ಲಿಮರು ತಮಗೆ ಹೇಳಿಸದ್ದು ಯಾವುದು ಎನ್ನುವುದನ್ನು ತಿಳಿಯದ ಸಾಂಸ್ಕೃತಿಕ ಅವನತಿಗೆ ತಲುಪಿದ್ದಾರೆ.

ಮುಸ್ಲಿಮ್ ಸಮಾಜದ ಮಹಿಳೆಯರಿಗೆ ಒಂದು ವಿಶೇಷ ಸ್ಥಾನಮಾನವಿತ್ತು. ಅವರಿಗೆ ತಮಗೆ ಹೇಳಿಸದ ವಸ್ತ್ರ ವಿಧಾನಗಳು ಯಾವುದೆಂದು ತಿಳಿದ ಕಾಲವದು. ಈಗ ಮುಸ್ಲಿಮರಿಗೆ ಹೇಳಿಸಿದ ವಸ್ತ್ರವೆನ್ನುವುದು ಒಂದು ಕಪ್ಪು ಹೊದಿಕೆಗೆ ಸೀಮಿತಗೊಂಡಿದೆ. ಆ ಕಪ್ಪು ಹೊದಿಕೆ ಕೂಡಾ ಸಮಾಜಕ್ಕೆ ಕಪ್ಪು ಬಳಿಯುವಂತಿದೆ.

ಮದುವೆಯ ಪ್ರಾಯ ತಲುಪಿದ ಹೆಣ್ಣು ಯಾರ ಕಣ್ಣಿಗೂ ಸಿಗದೆ ಸಮಾಜದಲ್ಲಿ ಗೌರವಕ್ಕೆ ಪಾತ್ರವಾಗಿದ್ದುದು ಹಿಂದಿನ ಕಥೆ. ಮದುವೆ ದಿನದಂದು ಸಿಂಗಾರಗೊಂಡು ಮದುಮಗನ ಕಣ್ಣಿಗೆ ಮಾತ್ರ ಅವಳು ಹಬ್ಬವಾಗುತ್ತಿದ್ದಳು. ಇವತ್ತು ಮದುಮಗನಿಗಿಂತ ಮೊದಲು ವೀಡಿಯೋ ಗ್ರಾಫರು ಅವಳನ್ನು ಸಂಪೂರ್ಣ ಹೀರಿಕೊಳ್ಳುತ್ತಾನೆ. ಮದುಮಗನ ಮಿತ್ರರ ಕಣ್ಣಿಗೂ ಅವಳು ಹಬ್ಬವಾಗುತ್ತಾಳೆ. ಕೆಲವು ಕಡೆ ಮಂಟಪಗಳಲ್ಲಿ ಮದುಮಗನೊಂದಿಗೆ ಎಲ್ಲರ ಪ್ರದರ್ಶನಕ್ಕೆ ಸಿಗಲು ಅವಳೂ ಜತೆ ಸೇರುತ್ತಾಳೆ. ಆದರೆ ಈ ಎಲ್ಲ ದುರದೃಷ್ಟ ಸ್ಥಿತಿಗತಿಗಳ ನಡುವೆ ಒಂದು ಸಣ್ಣ ಮಾತನ್ನು ಸಮಾಜವು ದುಃಖದಿಂದ ನೆನಪಿಸಿಕೊಳ್ಳುವುದೊಳಿತು. "ಇದು ನಮಗೆ ಹೇಳಿಸಿದ್ದಲ್ಲ."

ನಮ್ಮ ಧಾರ್ಮಿಕ ರಂಗವನ್ನು ನೋಡುವಾಗ ಇನ್ನಷ್ಟು ಬೇಸರವೆನಿಸುತ್ತದೆ. ಮದ್‌ರಸಾ ನಮ್ಮ ಮಕ್ಕಳಿಗೆ ಸಂಸ್ಕೃತಿ ಕಲಿಸುವ ಪಾಠಶಾಲೆ. ನಮ್ಮ ಮಕ್ಕಳಿಗೆ ಪ್ರೀತಿಯನ್ನೂ, ಸಾಹೋದರ್ಯತೆಯನ್ನೂ ಕಲಿಸುವ ಶಿಕ್ಷಣ ಕೇಂದ್ರ. ಇದನ್ನು ನಡೆಸುವವರು ಊರಿನ ನಾಯಕರು. ಇಲ್ಲಿ ಕಲಿಸುವವರು ಸಮಾಜದ ವಿದ್ವಾಂಸರು. ಇಲ್ಲಿ ಸೃಷ್ಟಿಯಾಗಬೇಕಾದುದು ಒಂದು ಮಾದರೀ ಸಮುದಾಯ. ನ್ಯಾಯ ಪಾಲಿಸುವ, ಶಾಂತಿ ಬಯಸುವ, ಪ್ರೀತಿ ಹಂಚುವ, ಅಲ್ಲಾಹನೆಡೆಗೆ ಮರಳುವ, ಅಲ್ಲಾಹನಿದ್ದಾನೆ ಎನ್ನುವುದನ್ನು ಬದುಕು ತುಂಬ ನೆನಪಿಸುವ ಒಂದು ಸಮುದಾಯ. ಆದರೆ ದುರದೃಷ್ಟನೆನ್ನಬೇಕು; ಅನೇಕ ಕಡೆ ಮದ್‌ರಸಾಗಳ ಸುತ್ತಮುತ್ತಣ ವಿದ್ಯಮಾನಗಳು ಹಲವರಿಂದ 'ಇದು ನಿಮಗೆ ಹೇಳಿಸಿದ್ದಲ್ಲ'ವೆಂದು ಹೇಳಿಸುವಂತಿದೆ.

ಒಬ್ಬರ ಹಕ್ಕನ್ನು ಇನ್ನೊಬ್ಬ ಕಸಿಯುವುದು, ಸಹೋದರನ ಹಕ್ಕಿಗೆ ಮಾನ್ಯತೆ ನೀಡದಿರುವುದು, ನ್ಯಾಯಪಾಲನೆ ಮಾಡದಿರುವುದು, ವಂಚಿಸುವುದು, ಹೊಂದಾಣಿಕೆ ಮಾಡಿಕೊಳ್ಳದಿರುವುದು, ವಾಗ್ದಾನ ಪಾಲಿಸದಿರುವರು, ಇಬ್ಬಗೆ ನೀತಿ ಹೊಂದುವುದು, ಎರಡು ನಾಲಗೆಯಿಂದ ಮಾತಾಡುವುದು, ದ್ರೋಹವೆಸಗುವುದು, ಅಸಭ್ಯಗಳನ್ನಾಡುವುದು, ಅಕ್ರಮವೆಸಗುವುದು, ಸಹೋದರನ ಶರೀರವನ್ನು ನೋಯಿಸುವುದು, ಮಕ್ಕಳನ್ನು ಅನಗತ್ಯವಾಗಿ ದಂಡಿಸುವುದು, ಅವರನ್ನು ಮಾನಸಿಕ ಕ್ಷೋಭೆಗೊಳಪಡಿಸುವುದು... ಹೀಗೆ ಎಲ್ಲವೂ ಇಲ್ಲಿ ಬೇಕಾಬಿಟ್ಟಿಯಾಗಿದೆಯೇ? ಈ ಸ್ಥಿತಿಗತಿಗಳು ಮದ್‌ರಸಾಗಳಿಗೆ ಹೇಳಿಸಿದ್ದಲ್ಲ; ಇದು ಮುಸ್ಲಿಮ್ ಸಮುದಾಯಕ್ಕೆ ಹೇಳಿಸಿದ್ದಲ್ಲ. ಇಲ್ಲೊಂದು ಶಾಂತಿಸ್ಥಿತಿಯ ನಿರ್ಮಾಣ ಸಾಧ್ಯವೇ ಇಲ್ಲವೆನ್ನುವಂತಹ ಸ್ಥಿತಿಗೆ ಈ ರಂಗವು ತಲುಪುವುದು ಅತಿ ದೊಡ್ಡ ದುರಂತವೆನ್ನಬೇಕು. ಇಲ್ಲಿ ಶಾಂತಿ ಸ್ಥಾಪಿಸಲು, ಹೊಂದಾಣಿಕೆ ಮಾಡಿಕೊಳ್ಳಲು ಅಸಾಧ್ಯವೆಂದಾದರೆ... ಈ ಸಮುದಾಯದಿಂದ, ಸಮುದಾಯ ನಾಯಕರಿಂದ ಇನ್ನೇನು ಮಾಡಲು ಸಾಧ್ಯ? ಈ ರಂಗವನ್ನು ಕ್ಷೋಭೆಗೊಳಿಸುವ ವ್ಯಕ್ತಿಗಳನ್ನು ಹಿಡಿತದಲ್ಲಿಡಲು ಸಾಧ್ಯವಾಗದೆಹೋಗುವುದಾದರೆ ಈ ಸಮುದಾಯದ ಭವಿಷ್ಯವೇನು?

ಸಮುದಾಯದ ಒಟ್ಟು ಚಿತ್ರಣ ಇಂದು ಚೆನ್ನಾಗಿಲ್ಲ. ಸಮುದಾಯವನ್ನು ಸರಿದಾರಿಗೆ ತರಬೇಕಾದ ಧಾರ್ಮಿಕ ರಂಗವೂ ನಿಶ್ಚಲವಾಗುತ್ತಿದೆ. ಸಮುದಾಯವನ್ನು ಸರಿದಾರಿಗೆ ತರುವವರು ಯಾರೂ ಇಲ್ಲವೇ ಎಂಬ ಪ್ರಶ್ನೆಯನ್ನು ಮುಂದಿಡುವಂತಿದೆ. ಹೊಣೆಗಾರಿಕೆಯುಳ್ಳವರು ನಿದ್ದೆ ಬಿಟ್ಟು ಏಳಬೇಕಾದ ಸಮಯಯಿದು.

ಯಾವುದೇ ಭಿನ್ನಾಭಿಪ್ರಾಯಗಳು ಹುಟ್ಟಿದರೂ ಅವುಗಳಿಗೆ ಒಂದು ಪರಿಹಾರ ಕಂಡು ಹೊಂದಾಣಿಕೆ ಮಾಡಿಕೊಳ್ಳಬಹುದು. ಪರಿಹಾರವಿಲ್ಲದ ಸಮಸ್ಯೆಗಳಿಲ್ಲ. ನ್ಯಾಯ, ನೀತಿ, ಪ್ರೀತಿ, ಸೌಹಾರ್ದಕ್ಕೆಲ್ಲ ಅರ್ಥವಿರುವುದು ಇಲ್ಲೇ. ಇವೆಲ್ಲವನ್ನೂ ನಿರಾಕರಿಸಲ್ಪಡುವ ಸ್ಥಿತಿಗೆ ಆಧ್ಯಾತ್ಮಿಕ ಶಿಕ್ಷಣ ಕೇಂದ್ರದ ಸುತ್ತಣ ವಿದ್ಯಮಾನಗಳು ತಲುಪುವುದಾದರೆ "ಇದು ಮುಸ್ಲಿಮ್ ಸಮುದಾಯಕ್ಕೆ ಹೇಳಿಸಿದ್ದಲ್ಲ"ವೆಂದು ದುಃಖದಿಂದ ಹೇಳಿ ಮೌನವಾಗಿರುವುದೊಂದೇ ಉಳಿದಿರುತ್ತದೆ.

ಆದರೆ ಪ್ರತಿಯೊಂದು ಪತನದ ಬಳಿಕ, ಪ್ರತಿಯೊಂದು ಸಮಸ್ಯೆಗಳ ಕೊನೆಯಲ್ಲಿ ಈ ಸಮುದಾಯ ಹಾಗೆ ಅತ್ತು ಕಣ್ಣೀರಿಳಿಸಿ ಕುಳಿತರೆ ಸಾಕೆ? ■

بارك الله لكما
ವೈವಾಹಿಕ ಶುಭಾಶಯಗಳು
ದಿನಾಂಕ 19.9.2011ರಂದು ವೈವಾಹಿಕ ಜೀವನಕ್ಕೆ ಪ್ರವೇಶಿಸಿರುವ ಸನ್ಮಿತ್ರ

ಎಚ್.ಎಂ.ಶರೀಫ್
(S/o.ಮರ್ಹೂಮ್ ಎಚ್.ಅಬೂಬಕರ್ ಕಾಶಿಪಟ್ನ)
ಹಾಗೂ
ಸಫಿಯಾ

(D/o. ಹಸನಬ್ಬ ವಾಮದಪದವು)
ಇವರ ವೈವಾಹಿಕ ಜೀವನವು ಸುಖ, ಕ್ಷೇಮ, ಸಕಲ ಐಶ್ವರ್ಯಗಳಿಂದ ಕೂಡಿ ಬೆಳಗಲಿ ಎಂದು ಹಾರೈಸುವ,
ಪಿ.ಪಿ.ಅಬ್ದುಲ್ ಹಮೀದ್ ಕಾಶಿಪಟ್ನ KKSA ಕುವೈಟ್

ನಮಾಝ್ ವೇಳಾಪಟ್ಟಿ

ಒಂದು ಪುಟದಲ್ಲಿ ಒಂದು ತಿಂಗಳು
12 ಪುಟಗಳು
ಕೇವಲ 15.00 ರೂ.
ಮಾತ್ರ
ಅಂಚೆಯಲ್ಲಿ ಬೇಕಾದವರು ರೂ.20 ಕಳುಹಿಸಿಕೊಡಬೇಕು.
ಸಮರಾತ್ ಬುಕ್ಸ್, ಅಲ್‌ಅನ್ಸಾರ್ ಕಾರ್ಯಾಲಯ, ಕುತ್ತಾರ್, ಮಂಗಳೂರು-17. Ph: 0824-2467886, Cell: 9480075704



26

وَذُو الشُّجَاعَةِ لَا فَخْرٌ لَهُ وَلَهُ
مِنَ الذَّلِيلِ خِدَاعُ الْحَرْبِ قَدْ يَقَعُ
لَوْ كَنَّ خُرْطُومَ فِيلٍ هَاجَ خَرْدَ مِنٌ
وَلَوْ ضَعِيفًا فَرُوحٌ مِنْهُ يَنْقَطِعُ

*ಶಕ್ತಿಶಾಲಿಗೆ ಮಹತ್ವವೇನೂ ಇಲ್ಲ. ಬಲಹೀನನ ಯುದ್ಧ ತಂತ್ರದೊಳಕ್ಕೆ ಅವನೂ ಬಿದ್ದು ಬಿಟ್ಟಾನು. ಶಕ್ತಿಶಾಲಿ ಆನೆಯ ಸೊಂಡಿಲಿನೊಳಕ್ಕೆ ದುರ್ಬಲ ಇರುವೆಯೊಂದು ಕಚ್ಚಿದರೂ ಆನೆಯು ಸತ್ತು ಬಿದ್ದೀತು.*

ತಂತ್ರವೇನೂ ತಿಳಿಯದ ಶಕ್ತಿಶಾಲಿಗಿಂತ ಯುಕ್ತಿಪೂರ್ವವಾಗಿ ಕಾರ್ಯ ನಿರ್ವಹಿಸುವ ದುರ್ಬಲನು ಶ್ರೇಷ್ಠವೆನ್ನುವುದನ್ನು ಕವಿ ವರ್ಯರಿಲ್ಲಿ ಪ್ರತಿಪಾದಿಸುತ್ತಿದ್ದಾರೆ. ಯುಕ್ತಿಗಳನ್ನು ಬಳಸಲು ತಿಳಿಯದವನಿಗೆ ಶಕ್ತಿಯಿದ್ದೂ ಫಲವಿಲ್ಲ. ಯುದ್ಧ ವೇಳೆಗಳಲ್ಲಿ ಶಕ್ತಿಯು ಅಗತ್ಯವಿದ್ದರೂ ಯುಕ್ತಿ ರಹಿತವಾಗಿದ್ದರೆ ಅದು ನಿಷ್ಫಲ. ಶಕ್ತಿಯನ್ನು ತಂತ್ರಗಳಿಂದ ಸೋಲಿಸಲು ಸಾಧ್ಯ. ಆದ್ದರಿಂದ ಶಕ್ತಿಗಿಂತ ಯುಕ್ತಿಗೇ ಹೆಚ್ಚು ಮಹತ್ವ. ಕವಿವರ್ಯರು ಇದಕ್ಕೊಂದು ಸೂಕ್ತ ಉದಾಹರಣೆಯನ್ನು ನೀಡಿದ್ದಾರೆ. ಆನೆ ಶಕ್ತಿಗೆ ಹೆಸರುವಾಸಿಯಾದ ಪ್ರಾಣಿ. ತನ್ನ ಸೊಂಡಿಲಿ ನಿಂದ ಅದು ಮಾಡದ ಕೆಲಸಗಳಿಲ್ಲ. ಆದರೆ ಈ ಸೊಂಡಿಲಿನೊಳ ಭಾಗವು ಆನೆಗೆ ಸಂಬಂಧಿಸಿದಂತೆ ಅತಿ ಸೂಕ್ಷ್ಮವಾದ ಭಾಗ. ಶಕ್ತಿಶಾಲಿ ಆನೆಯನ್ನು ಸೋಲಿಸಲು ದುರ್ಬಲ ಜೀವಿ ಈ ಸೊಂಡಿಲನ್ನು ಬಳಸಿದರೆ ಸಾಕು. ದುರ್ಬಲ ಇರುವೆಯೊಂದು ಸೊಂಡಿಲಿನೊಳಕ್ಕೆ ಪ್ರವೇಶಿಸಿ ಚುಚ್ಚಿದರೆ ಆನೆಯನ್ನು ಕೊಂದು ಹಾಕಲು ಅದಷ್ಟೆ ಸಾಕೆನ್ನುತ್ತಾರೆ. ಇರುವೆಯ ತಂತ್ರದೆದುರು ಆನೆ ಶಕ್ತಿಯೂ ನಿಷ್ಫಲವಾಗಬಹುದು.

وَمَنْ لَهُ زَوْجَتَانِ ساءَتَا خُلُقًا
وَلَمْ يَجِدْ مِنْهُمَا يَوْمًا لَهُ طَرَبًا
كَنَمْلَةٍ ذَبْذَبَتْ مَشْيًا عَلَى خَشَبٍ
وَجَانِبَاهُ بِجَمَرَاتٍ قَدِ الْتَهَبَا

*ಯಾರಿಗೆ ಸ್ವಭಾವ ಕೆಟ್ಟ, ಇಬ್ಬರು ಪತ್ನಿಯರಿರುವರೋ ಅವರಿಂದ ಅವನು ಒಂದು ದಿನವೂ*

# ಇರುವೆಗೆ ಸೋತ ಆನೆ!

*ನೆಮ್ಮದಿಯನ್ನು ಪಡೆಯನು. ಅವನ ಸ್ಥಿತಿಯು ಎರಡು ತುದಿಗಳು ಕೆಂಡವಾಗಿರುವ ಮರದ ಕೋಲಿನ ನಡುವೆ ಸಿಲುಕಿದ ಇರುವೆಯಂತಿರುವುದು.*

ಕವನ ಸಾಲುಗಳು ಇಲ್ಲಿ ಕೆಟ್ಟಗುಣವನ್ನು ಹೊಂದಿರುವ ಪತ್ನಿಯರ ನಡುವೆ ಸಿಲುಕಿದ ಪತಿರಾಯನತ್ತ ತಿರುಗಿದೆ. ಮನುಷ್ಯನ ನೆಮ್ಮದಿಯಲ್ಲಿ ಅವನ ಕುಟುಂಬದ ಪಾತ್ರ ಮುಖ್ಯವಾದುದು. ಪತಿ -ಪತ್ನಿಯರು ಪರಸ್ಪರ ತುಂಬು ಪ್ರೀತಿಯಿಂದಿದ್ದು, ಇಬ್ಬರ ಗುಣವು ಉತ್ತಮವಾಗಿದ್ದರೆ ಮಾತ್ರ ಪರಸ್ಪರ ನೆಮ್ಮದಿಯನ್ನು ಪಡೆಯಬಹುದು. ಇಬ್ಬರು ಪತ್ನಿಯರಿರುವಾಗ ಪರಸ್ಪರ ಪೈಪೋಟಿಗಳಿರುವುದು ಸಹಜ. ಪತ್ನಿಯರು ಉತ್ತಮ ಗುಣದವರಾಗಿದ್ದರೆ ಅವರ ನಡುವೆ ಸುಧಾರಿಸಿಕೊಂಡು ನೆಮ್ಮದಿಯಿಂದ ಬದುಕಬಹುದು. ಆದರೆ ಪತ್ನಿಯಂದಿರ ಸ್ವಭಾವವು ಸರಿಯಿಲ್ಲದಿದ್ದರೆ ಈತನ ಬದುಕು ಕಷ್ಟಕ್ಕೆ ಸಿಲುಕಿದಂತೆಯೆ. ಪೈಪೋಟಿಗಳ ನಡುವೆ ಸ್ವಭಾವದ ಕೇಡು ಕಾರಣ ಬದುಕು ರಣರಂಗವಾಗುತ್ತದೆ. ಪರಸ್ಪರ ಆರೋಪ ಪ್ರತ್ಯಾರೋಪಗಳು ಹೆಚ್ಚುತ್ತವೆ. ಹೊಂದಾಣಿಕೆಯು ಕಷ್ಟವಾಗುತ್ತದೆ. ಅವರ ನಡುವಿನ ಕಲಹಗಳಿಗೆಲ್ಲ ಪತಿಯೂ ಸಿಲುಕಿ ಒದ್ದಾಡುತ್ತಾನೆ. ಇಂತಹ ಕೆಟ್ಟ ಗುಣಗಳಿರುವ ಪತ್ನಿಯರ ನಡುವೆ ಸಿಲುಕಿ ಒದ್ದಾಡುವ ಪತಿಗೆ ಕವಿ ವರ್ಯರು ನೀಡಿದ ಉದಾಹರಣೆ ಸೂಕ್ತವಾಗಿದೆ. ಮರದ ಒಂದು ಕೋಲಿನ ಎರಡು ತುದಿಯಲ್ಲಿ ಉರಿಯುತ್ತಿರುವ ಕೆಂಡ. ನಡುವೆ ಇರುವೆಯೊಂದು ಅತ್ತ ಹೋಗಲೂ ಇತ್ತ ಸಾಗಲೂ ಸಾಧ್ಯವಾಗದೆ ಕಷ್ಟಕ್ಕೆ ಸಿಲುಕಿದೆ. ಅತ್ತಲೂ ಇಲ್ಲ, ಇತ್ತಲೂ ಇಲ್ಲ ಎಂಬ ದುಃಸ್ಥಿತಿ ಈ ಪತಿರಾಯನದ್ದು!

وَالرِّزْقُ يَأْتِي جَنِينًا وَهُوَ فِي رَحْمٍ
وَفِي الْإِنَائَيْنِ اَيْضًا ذَاكَ مَدَّخَرُ
فِي صَدْرِ اُمٍّ لَهُ فَوْقَ الْجَنِينِ وَذَا
قَبْلَ الْخُرُوجِ فَلَارِزْقٌ لَهُ ذُعْرٌ

*ಮಗು ಗರ್ಭಾಶಯದಲ್ಲಿರುವಾಗಲೇ ಅದರ ಆಹಾರವು ಅದಕ್ಕೆ ದೊರಕುತ್ತದೆ. ಬಳಿಕ ತಾಯಿಯ ಎದೆಯ ಎರಡು ಪಾತ್ರೆಗಳಲ್ಲಿ ಅದನ್ನು ಸಿದ್ಧ ಪಡಿಸಿ ಇಡಲಾಗಿದೆ. ಹಾಗಿರುವಾಗ ಆಹಾರದ ಬಗ್ಗೆ ಭಯಪಡಬೇಕಿಲ್ಲ.*

ಕವನ ಸಾಲುಗಳು ಅಲ್ಲಾಹನು ತಾನು ಸೃಷ್ಟಿಸಿದ ಜೀವಿಗಳಿಗೆ ಮಾಡಿಟ್ಟ ಆಹಾರ ವ್ಯವಸ್ಥೆಗಳತ್ತ ಬೊಟ್ಟು ಮಾಡುತ್ತಿವೆ. ಗರ್ಭಪಾತ್ರೆಯೊಳಗಿರುವ ಮಗುವಿಗೆ ಕರುಳ ಬಳ್ಳಿ ಮೂಲಕ ದೇಹಕ್ಕೆ ಬೇಕಾದ ಆಹಾರವು ಸಿಗುತ್ತದೆ. ಮಗು ಗರ್ಭದಿಂದ ಹೊರಬಂದ ತಕ್ಷಣ ತಾಯಿಯ ಎದೆ ಹಾಲು ಮಗುವಿನ ಶರೀರಕ್ಕೆ ಹೊಂದಿಕೊಳ್ಳುವ ವಿಶಿಷ್ಟ ರೀತಿಯಲ್ಲಿ ಸಜ್ಜಾಗಿರುತ್ತದೆ. ಅಲ್ಲಾಹನು ಪ್ರತಿಯೊಂದು ಜೀವಿಗೂ ಬೇಕಾದ ಆಹಾರವನ್ನು ಸಜ್ಜುಗೊಳಿಸಿಟ್ಟಿದ್ದಾನೆಯೆಂಬ ಸಂದೇಶವನ್ನು ಇದು ನೀಡುತ್ತಿದೆ. "ಅಲ್ಲಾಹನು ಆಹಾರದ ವ್ಯವಸ್ಥೆ ಮಾಡಿರದ ಯಾವುದೇ ಜೀವಿಯು ಭೂಮಿಯ ಮೇಲಿಲ್ಲ" ಎನ್ನುವ ಖುರ್‌ಆನ್ ನುಡಿಯು ಇದನ್ನೇ ಸಾರುತ್ತಿದೆ. ಕವಿವರ್ಯರು ಅಲ್ಲಾಹನು ಮಗುವಿಗೆ ಮಾಡಿಟ್ಟ ಆಹಾರ ವ್ಯವಸ್ಥೆಯನ್ನು ತೋರಿಸಿ ಆಹಾರಕ್ಕಾಗಿ ಭಯಪಡಬೇಕಿಲ್ಲವೆಂಬ ಆಶಯವನ್ನು ಮುಂದಿಡುತ್ತಾರೆ. ■




Specialist in :
Burkha Stitching as per
your choice
Since 1999
BURKHA FASHION ™
Shop # E - 9
TOKYO MARKET
G.H.S.Road, Hampankatta,
MANGALORE-1.
Ph : 0824-2447314



Shop # E-9
KUNIL CENTRE
G.H.S.Road, Hampankatta, Mangalore-1.
Ph : 0824-4257315

# FiF 15 (A), 5th Floor
CITY CENTRE MALL
Next to spar Hypermarket, K.S.Rao Road, Hampankatta, Mangalore-1.
Ph : 0824-4257316

Mob : 9886571883
Email : burkha.fashion@yahoo.com




**41.** ಅವರು (ಸುಲೈಮಾನ್ عليه السلام) ಹೇಳಿದರು; ನೀವು ಅವಳ ಸಿಂಹಾಸನವನ್ನು ರೂಪ ವ್ಯತ್ಯಾಸಗೊಳಿಸಿರಿ. ಅವಳು (ತನ್ನ ಸಿಂಹಾಸನವನ್ನು)ಗುರುತು ಹಿಡಿಯುವವಳೋ ಅಥವಾ ಗುರುತು ಹಿಡಿಯದವರ ಸಾಲಿಗೆ ಸೇರುವವಳೋ ಎಂದು ನಾವು ನೋಡೋಣ. (1)

**42.** ಹಾಗೆಯೇ ಅವಳು ಬಂದಾಗ "ನಿನ್ನ ಸಿಂಹಾಸನ ಈ ತರವಿದೆಯೇ" ಎಂದು ಅವಳೊಂದಿಗೆ ಕೇಳಲಾಯಿತು. "ಇದು ಅದುವೇ ಎಂಬಂತಿದೆ" ಎಂದು ಅವಳು ಹೇಳಿದಳು. (ಸುಲೈಮಾನ್ عليه السلام ಹೇಳಿದರು) ಅವಳಿಗಿಂತ ಮೊದಲೇ ನಮಗೆ ಸುಜ್ಞಾನವು ದೊರಕಿದೆ. ಮತ್ತು ನಾವು ಮುಸ್ಲಿಮರಾಗಿದ್ದೇವೆ.

**43.** ಅಲ್ಲಾಹನ ಹೊರತಾಗಿ ಅವಳು ಆರಾಧಿಸುತ್ತಿದ್ದ ವಸ್ತುಗಳು ಅವಳನ್ನು (ಸರಿದಾರಿಯಿಂದ) ತಡೆದಿರಿಸಿತ್ತು. ನಿಜಕ್ಕೂ ಅವಳು ಸತ್ಯನಿಷೇಧಿ ಜನಾಂಗದಲ್ಲಿ ಸೇರಿದವಳಾಗಿದ್ದಳು. (2)

**44.** 'ಅರಮನೆಯೊಳಗೆ ಪ್ರವೇಶಿಸು' ಎಂದು ಅವಳೊಡನೆ ಹೇಳಲಾಯಿತು. ಅದನ್ನವಳು ಕಂಡಾಗ ಅದೊಂದು ಜಲಾಶಯವೆಂದು ಭಾವಿಸಿದಳು . ಹಾಗೂ (ಅದನ್ನು ದಾಟಲು) ಕಾಲುಗಳಿಂದ (ವಸ್ತ್ರವನ್ನು) ಮೇಲೇರಿಸಿದಳು. ಆಗ ಅವರು (ಸುಲೈಮಾನ್ عليه السلام) ಇದು ಸ್ಫಟಿಕ ನಿರ್ಮಿತ ನುಣುಪಾದ ಅರಮನೆ ಎಂದರು. ಆಗ ಅವಳು "ನನ್ನ ಪ್ರಭೂ ನಾನು ನನ್ನ ಮೇಲೆ ಅಕ್ರಮವೆಸಗಿರುವೆ. ನಾನು ಸುಲೈಮಾನ್ عليه السلام ರೊಂದಿಗೆ ಸರ್ವ ಲೋಕಗಳ ಪಾಲಕನಾದ ಅಲ್ಲಾಹನಿಗೆ ಶರಣಾಗಿದ್ದೇನೆ" ಎಂದಳು. (3)

**45.** ನಾವು ಸಮೂದರೆಡೆಗೆ ಅವರ ಸಹೋದರ ಸ್ವಾಲಿಹ್ عليه السلام ರನ್ನು 'ಅಲ್ಲಾಹನನ್ನು ನೀವು ಆರಾಧಿಸಿರಿ ಎಂಬ ಸಂದೇಶದೊಂದಿಗೆ ಕಳುಹಿಸಿದೆವು.' ಆಗ ಅವರು ಪರಸ್ಪರ ಕಚ್ಚಾಡುವ ಎರಡು ತಂಡಗಳಾದರು.

**46.** ಅವರು (ಸ್ವಾಲಿಹ್ عليه السلام) ಹೇಳಿದರು - ಓ ನನ್ನ ಜನತೆಯೇ, ನೀವು ಒಳಿತಿಗಿಂತ ಮುಂಚೆಯೇ ಕೆಡುಕಿಗಾಗಿ ಏಕೆ ತ್ವರೆ ಮಾಡುತ್ತೀರಿ? ನೀವು ಅನುಗ್ರಹೀತರಾಗಲು ಅಲ್ಲಾಹೊಂದಿಗೆ ನಿಮಗೆ ಕ್ಷಮೆ ಯಾಚಿಸಬಾರದೇ?

**47.** ಅವರು ಹೇಳಿದರು; ನಾವು ನಿನ್ನ ಮತ್ತು ನಿನ್ನ ಜತೆಗಾರರ ಕಾರಣದಿಂದ ಅಪಶಕುನಕ್ಕೆ ಬಿದ್ದಿದ್ದೇವೆ. ಅವರು (ಸ್ವಾಲಿಹ್ عليه السلام ಹೇಳಿದರು - ನಿಮ್ಮ ಶಕುನವು ಅಲ್ಲಾಹನ ಬಳಿಯಿದೆ. ಆದರೆ ನೀವು ಪರೀಕ್ಷಿಸಲಿರುವ ಜನಾಂಗವಾಗಿದ್ದೀರಿ.

**48.** ನಗರದಲ್ಲಿ ಒಂಭತ್ತು ಮಂದಿಯ ಒಂದು ತಂಡವಿತ್ತು. ಅವರು ಭೂಮಿಯಲ್ಲಿ ಕೇಡನ್ನು ಹರಡುತ್ತಿದ್ದರು. ಸುಧಾರಣೆ ಮಾಡುತ್ತಿರಲಿಲ್ಲ.

**49.** ಅವರು ಹೇಳಿದರು- ನಾವು ಸ್ವಾಲಿಹ್ عليه السلام ಮತ್ತು ಅವನ ಜನರನ್ನು ರಾತ್ರಿ ವೇಳೆ ಕೊಂದು ಹಾಕೋಣ; ಬಳಿಕ ಅವನ ಹಕ್ಕುದಾರನಿಗೆ ಅವನ ಜನರ ನಾಶಕ್ಕೆ ನಾವು ಹಾಜರಾಗಿಲ್ಲ; ನಿಜಕ್ಕೂ ನಾವು ಸತ್ಯವನ್ನೇ ಹೇಳುತ್ತಿದ್ದೇವೆ ಎಂದು ಹೇಳೋಣ ಎಂದು ನೀವು ಅಲ್ಲಾಹನ ಮೇಲೆ ಆಣೆ ಹಾಕಿರಿ.

**50.** ಅವರು ಒಂದು ತಂತ್ರವನ್ನು ಹೆಣೆದರು. ನಾವು ಅದಕ್ಕೆ ಪ್ರತಿಯಾಗಿ ಅವರನ್ನು ಶಿಕ್ಷಿಸಿದೆವು. ಅವರು ಅದನ್ನು ತಿಳಿಯದವರಾಗಿದ್ದರು.

**51.** ಅವರ ತಂತ್ರದ ಅಂತಿಮ ಫಲವು ಏನಾಯಿತೆಂದು ನೋಡಿರಿ. ನಾವು ಅವರನ್ನೂ ಅವರ ಇಡೀ ಜನಾಂಗವನ್ನೂ ಸಮೂಲ ನಾಶಗೊಳಿಸಿದೆವು.

**52.** ಅವರು ಅಕ್ರಮವೆಸಗಿದ ಕಾರಣ ಅವರ ಆ ಮನೆಗಳೆಲ್ಲ ಪಾಳು ಬಿದ್ದಿವೆ. ನಿಶ್ಚಯವಾಗಿಯೂ ಇದರಲ್ಲಿ ತಿಳಿಯುವ ಜನತೆಗೆ ಪಾಠವಿದೆ.

**53.** ಸತ್ಯವಿಶ್ವಾಸವಿಟ್ಟು ಭಯಭಕ್ತಿ ತೋರುತ್ತಿದ್ದವರನ್ನು ನಾವು ರಕ್ಷಿಸಿದೆವು. (4)


ಮರ್ಸೀನ್ ಪಬ್ಲಿಕೇಷನ್ಸ್ ಹಾಗೂ ಅಲ್‌ಮದೀನಾ ಪಬ್ಲಿಕೇಷನ್ಸ್ ಪ್ರಕಟಿಸಿರುವ

**ಸಂಪೂರ್ಣ ಖುರ್‌ಆನ್ ಕನ್ನಡ ವ್ಯಾಖ್ಯಾನ**

ಬೆಲೆ ರೂ. 800.00 | ಗಲ್ಫ್ ರಾಷ್ಟ್ರಗಳಿಗೆ ಬೆಲೆ ರೂ. 2500.00

ಸಂಪರ್ಕಿಸಿರಿ ಅಥವಾ M.O.ಕಳುಹಿಸಿರಿ: ಸಮರಾತ್ ಬುಕ್ಸ್, ಅಲ್‌ಅನ್ಸಾರ್ ಕಾರ್ಯಾಲಯ, ಕುತ್ತಾರ್, ಮಂಗಳೂರು-17. Ph: 0824-2467886, Cell: 9480075704

# ಕೆಡುಕಿಗೆ ತ್ವರೆಯೇಕೆ?

| | |
|---|---|
| ಸೂರಃ | ಸೂರಾ ಅನ್ನಮ್ಲ್ |
| ಅವತೀರ್ಣ | ಮಕ್ಕಾ |
| ಒಟ್ಟು ಸೂಕ್ತಗಳು | 93 |

(1) ಬಿಲ್ಕೀಸ್ ರಾಣಿಯ ಸಿಂಹಾಸನವು ಪ್ರವಾದಿ ಸುಲೈಮಾನ್ عليه السلام ರವರ ದರ್ಬಾರಿಗೆ ತಲುಪಿದಾಗ ಪ್ರವಾದಿ ಸುಲೈಮಾನ್ عليه السلام ರವರು ಆ ಸಿಂಹಾಸನವನ್ನು ರೂಪ ವ್ಯತ್ಯಾಸಪಡಿಸಲು ಹೇಳಿದರು. ಬಿಲ್ಕೀಸ್ ರಾಣಿಯ ಬುದ್ದಿ ಪರೀಕ್ಷೆಯಾಗಿತ್ತು ಉದ್ದೇಶ. ಕೆಲವು ವ್ಯಾಖ್ಯಾನ ಗ್ರಂಥಗಳು ಉಲ್ಲೇಖಿಸಿದ ಚರಿತ್ರೆಯಂತೆ ಶೈತಾನ್‌ಗಳ ಪೈಕಿ ಕೆಲವು ಪ್ರವಾದಿ ಸುಲೈಮಾನ್ عليه السلام ರವರಿಗೆ, ವಿಷಯಗಳನ್ನೆಲ್ಲ ಗ್ರಹಿಸಬಲ್ಲ ಬುದ್ದಿಶಕ್ತಿ ಅವಳಿಗಿಲ್ಲವೆಂದು ತಿಳಿಸಿದ್ದರು. ಪ್ರವಾದಿ ಸುಲೈಮಾನ್ عليه السلام ರವರು ಬಿಲ್ಕೀಸ್ ರಾಣಿಯನ್ನು ವಿವಾಹವಾಗದಿರಲಿ ಎಂಬ ಉದ್ದೇಶವು ಜಿನ್ನ್ ವರ್ಗಕ್ಕಿತ್ತು. ತನ್ನ ವಿಶಿಷ್ಟ ಸಿಂಹಾಸನವನ್ನು ಅವಳು ಗುರುತಿಸುವಳೇ? ಇದೊಂದು ಪವಾಡವೆಂದು ಅವಳು ಮನಗಾಣುವಳೇ? ಈ ಮೂಲಕ ತನ್ನನ್ನು ಪ್ರವಾದಿಯೆಂದು ಗುರುತಿಸುವಳೇ ಎಂಬಿತ್ಯಾದಿ ಇರಾದೆಗಳು ಇದರ ಹಿಂದಿದ್ದವು.

(2) ರಾಣಿಯು ದರ್ಬಾರಿಗೆ ಬಂದಾಗ ಎದುರಿಗಿದ್ದ ಸಿಂಹಾಸನವನ್ನು ತೋರಿಸಿ "ನಿನ್ನ ಸಿಂಹಾಸನ ಈ ರೀತಿಯಿದೆಯೇ" ಎಂದು ಕೇಳಲಾಯಿತು. "ಇದು ಅದುವೇ ಎಂಬಂತಿದೆ." ಪ್ರಶ್ನೆಗೆ ಹೊಂದಿಕೊಂಡು ರಾಣಿ ಉತ್ತರಿಸಿದ್ದರು. ಸೂಕ್ತದ ಮುಂದುವರಿದ ಭಾಗ ಬಿಲ್ಕೀಸ್ ರಾಣಿಯದ್ದೇ ಅಥವಾ ಸುಲೈಮಾನ್ عليه السلام ರವರದ್ದೇ ಎಂಬ ಬಗ್ಗೆ ವ್ಯಾಖ್ಯಾನಗಾರರಲ್ಲಿ ಎರಡಭಿಪ್ರಾಯಗಳಿವೆ. ಬಿಲ್ಕೀಸ್ ರಾಣಿಯದ್ದೆನ್ನುವಾಗ ಅರ್ಥ ಹೀಗಾಗುತ್ತದೆ. "ಈ ದೃಷ್ಟಾಂತವನ್ನು ನೋಡುವ ಮೊದಲೇ ನಮಗೆ ಸರ್ವಶಕ್ತನಾದ ಅಲ್ಲಾಹನ ಸಾಮರ್ಥ್ಯದ ಬಗ್ಗೆ ಹಾಗೂ ತಮ್ಮ ಪ್ರವಾದಿತ್ವದ ಬಗ್ಗೆ ಜ್ಞಾನವು ಬಂದಿದೆ. ಹಾಗೂ ನಾವು ಅದನ್ನು ಅನುಸರಿಸುವರಾಗಿದ್ದೇವೆ." ಪ್ರವಾದಿ ಸುಲೈಮಾನ್ عليه السلام ರವರ ಮಾತು ಎನ್ನುವಾಗ ಅರ್ಥ ಹೀಗಾಗುತ್ತದೆ. "ಅವಳು ಅಲ್ಲಾಹನ ನಿದರ್ಶನಗಳ ಬಗ್ಗೆ ತಿಳಿಯುವ ಮೊದಲೇ ನಮಗೆ ಸುಜ್ಞಾನವು ದೊರಕಿದೆ. ಅದರಂತೆ ನಾವು ಮೊದಲೇ ಅಲ್ಲಾಹನಿಗೆ ಶರಣಾಗಿದ್ದೇವೆ" ಪ್ರವಾದಿ ಸುಲೈಮಾನ್ عليه السلام ರವರು ಅಲ್ಲಾಹನು ನೀಡಿದ ಅನುಗ್ರಹವನ್ನು ಇಲ್ಲಿ ಎತ್ತಿ ಹೇಳುತ್ತಾರೆ. ಮುಂದುವರಿದು ಈ ಸತ್ಯವನ್ನು ಗ್ರಹಿಸಲು ಬಿಲ್ಕೀಸ್‌ನ್ನು ತಡೆದಿರುವ ವಿಷಯವೇನೆಂದರೆ ಅವಳು ಅಲ್ಲಾಹನ ಹೊರತಾಗಿ ಇತರ ಶಕ್ತಿಗಳಿಗೆ ಆರಾಧಿಸುತ್ತಿದ್ದುದು ಮತ್ತು ಅವಳು ಸತ್ಯನಿಷೇಧಿಗಳಾದ ಜನತೆಯಲ್ಲಿ ಸೇರಿರುವುದು ಎನ್ನುತ್ತಾರೆ.

(3) ಪ್ರವಾದಿ ಸುಲೈಮಾನ್ عليه السلام ರವರು ಬಿಲ್ಕೀಸ್ ರಾಣಿಗೆ ಅಲ್ಲಾಹನು ತನಗೆ ನೀಡಿರುವ ಮತ್ತಷ್ಟು ಅನುಗ್ರಹಗಳನ್ನು ತೋರಿಸ ಬಯಸಿದರು. ಸ್ಫಟಿಕ ನಿರ್ಮಿತವಾದ ಅರಮನೆಯೊಳಗೆ ಹೋಗುವಂತೆ ಅವಳಲ್ಲಿ ಹೇಳಲಾಯಿತು. ಅರಮನೆಯ ಪ್ರವೇಶದಾರಿಯಲ್ಲಿ ನೀರಿನ ಮೇಲೆ ಸ್ಫಟಿಕವನ್ನು ಹಾಸಿದ ನೆಲವನ್ನು ನಿರ್ಮಾಣ ಮಾಡಲಾಗಿತ್ತು. ಸ್ಫಟಿಕದ ಅಡಿಭಾಗದಲ್ಲಿರುವ ನೀರು ಸ್ಪುಟವಾಗಿ ಕಾಣುತ್ತಿದ್ದರಿಂದ ಅದರ ಮೇಲಿನ ಸ್ಫಟಿಕ ಗಮನಕ್ಕೆ ಬರುತ್ತಿರಲಿಲ್ಲ. ಆದ್ದರಿಂದ ಅಲ್ಲಿ ನೀರೇ ಹರಿಯುತ್ತಿದೆ ಎಂದು ಭಾಸವಾಗುತ್ತಿತ್ತು. ಬಿಲ್ಕೀಸ್ ರಾಣಿಯು ಅದು ನೀರೇ ಎಂದು ಭಾವಿಸಿ ನೀರನ್ನು ದಾಟಲು ತನ್ನ ಕಾಲುಗಳಿಂದ ವಸ್ತ್ರವನ್ನು ಮೇಲಕ್ಕೆತ್ತಿದ್ದರು. ಆಗ ಸುಲೈಮಾನ್ عليه السلام ರವರು ಇದು ನುಣುಪಾದ ಸ್ಫಟಿಕ ನಿರ್ಮಿತ ಅರಮನೆಯನ್ನುತ್ತಾ ಆ ನೀರಿನ ಮೇಲ್ಭಾಗದಲ್ಲಿ ನಡೆಯಲು ಸ್ಫಟಿಕವಿದೆಯೆಂದು ಹೇಳಿದರು.

ಅದ್ಭುತಮಯ ನಿರ್ಮಾಣವನ್ನು ಕಂಡು ಚಕಿತಗೊಂಡ ರಾಣಿ ಪ್ರವಾದಿ ಸುಲೈಮಾನ್ عليه السلام ರವರಿಗೆ ಮಾನವಾತೀತ ಕೊಡುಗೆಯು ಲಭ್ಯವಾಗುವುದನ್ನು ಮನಗಂಡು ಪ್ರವಾದಿ ಸುಲೈಮಾನ್ عليه السلام ರ ಸನ್ನಿಧಿಯಲ್ಲಿ ಇಸ್ಲಾಮ್ ಸ್ವೀಕರಿಸಿದರು. ನಾನು ನನ್ನ ಮೇಲೆ ಅಕ್ರಮವೆಸಗಿರುವೆ; ನಾನು ಸುಲೈಮಾನ್ عليه السلام ರೊಂದಿಗೆ ಜಗತ್ಪಾಲಕನಾದ ಅಲ್ಲಾಹನಿಗೆ ಶರಣಾಗಿರುವೆನು ಎಂದಿರುವುದು ಈ ಬಗ್ಗೆಯಾಗಿದೆ.

➔8ನೇ ಪುಟಕ್ಕೆ

# ಹಜ್, ಇದು ಬಹಳ



ಹಜ್, ಉಮ್ರಾಗಳು ಬದುಕಿನಲ್ಲಿ ಅಪರೂಪಕ್ಕೆ ಮಾತ್ರ ನಿರ್ವಹಿಸುವ ಆರಾಧನೆಯಾಗಿರುವುದರಿಂದ ಅದರ ಅನುಷ್ಠಾನ ಕ್ರಮದ ಬಗ್ಗೆ ಬಹಳ ಮಂದಿಗೆ ಭಯ, ಆತಂಕಗಳಿರುವುದು ಸಹಜ. ಕೆಲವರಂತೂ ಹಜ್ ಕ್ರಮಗಳನ್ನು ವಿವರಿಸುವ ಪುಸ್ತಕಗಳ ದೊಡ್ಡ ಗಾತ್ರವನ್ನು ಕಂಡೇ ಇಷ್ಟೆಲ್ಲಾ ಇದೆಯಾ ಎಂದು ಹೆದರಿರುವುದುಂಟು. ವಾಸ್ತವದಲ್ಲಿ ಅಂತಹ ಯಾವ ಆತಂಕಕ್ಕೂ ಕಾರಣವಿಲ್ಲ. ಏಕೆಂದರೆ, ಹಜ್ ಬಹಳ ಸರಳ. ಪುಸ್ತಕಗಳಲ್ಲಿ ಹೇಳಲಾಗುವ ದ್ಸಿಕ್ರ್, ದುಆಗಳೆಲ್ಲ ಸುನ್ನತ್‌ಗಳಷ್ಟೇ ಆಗಿದ್ದು, ಕಂಠಪಾಠ ಮಾಡಬೇಕೆಂದೋ ಕಷ್ಟಪಟ್ಟು, ಅವನ್ನೇ ಹೇಳಬೇಕೆಂದೋ ಇಲ್ಲ. ಹಾಗೇ ನೋಡಿದರೆ ಹಜ್ ಅಥವಾ ಉಮ್ರಾದಲ್ಲಿ ಬಾಯಿಯಿಂದ ಹೇಳುವುದು ಕಡ್ಡಾಯವಾಗಿ ಯಾವುದೂ ಇಲ್ಲ. ನಮಾಝ್‌ನಲ್ಲಿ ಫಾತಿಹಾ ಓದುವುದು ಕಡ್ಡಾಯವಿದೆ. ಹಜ್, ಉಮ್ರಾಗಳಲ್ಲಿ ಅದು ಕೂಡಾ ಕಡ್ಡಾಯವಿಲ್ಲ!

ಇಹ್ರಾಂ : ಆರಾಧನೆಗಾಗಿ ಮಕ್ಕ ಕ್ಕೆ ಪ್ರವೇಶಿಸುವಾಗ 'ಇಹ್ರಾಂ' ಅಂದರೆ ಹಜ್ ಅಥವಾ ಉಮ್ರಾದ ನಿಯ್ಯತ್ ಕಡ್ಡಾಯ. ಅದು ಕೂಡಾ 'ಮೀಖಾತ್' ಎಂದು ಕರೆಯಲಾಗುವ ನಿರ್ದಿಷ್ಟ ಜಾಗವನ್ನು ದಾಟುವ ಮೊದಲೇ ಇಹ್ರಾಂ ಮೂಡಿರುವುದು ಕಡ್ಡಾಯ. ಬೇರೆ ಬೇರೆ ಕಡೆಯಿಂದ ಬರುವವರಿಗೆ ಬೇರೆ ಬೇರೆ ಮೀಖಾತ್‌ಗಳು. ಭಾರತದಿಂದ ಹೋಗುವವರು 'ಯಲವ್‌ಲವ್' ಎಂಬ 'ಮೀಖಾತ್' ದಾಟುವ ಮುಂಚೆ ಇಹ್ರಾಂ ಮೂಡಿರಬೇಕು. ಅದಕ್ಕಾಗಿ ವಿಮಾನ ಹತ್ತುವಾಗಲೇ ಇಹ್ರಾಂ ಮಾಡಿ ಬಿಟ್ಟರೆ, ಇಹ್ರಾಂ ಇಲ್ಲದೆ ಮೀಖಾತ್ ದಾಟಿಬಿಡುವ ಅಪಾಯ ತಪ್ಪುತ್ತದೆ.

ಹಜ್‌ಗೇನೇ ಇಹ್ರಾಂ ಮಾಡಿ ಹೋಗಿ ಹಜ್ ನಿರ್ವಹಿಸುವ ಕ್ರಮ ಶ್ರೇಷ್ಠ. ಆದರೆ, ಹಜ್ ಮುಗಿಯುವವರೆಗೂ ಇಹ್ರಾಂನಲ್ಲಿರುವುದು ತ್ರಾಸದಾಯಕವಾದ್ದರಿಂದ, ಬಹಳ ಮುಂಚಿತವಾಗಿ ಹೊರಡುವವರು ಉಮ್ರಕ್ಕೆ ಇಹ್ರಾಂ ಮಾಡಿ ಹೋಗಬಹುದು. ಮಕ್ಕಾ ತಲುಪಿ ಉಮ್ರಾ ನಿರ್ವಹಿಸಿ, ಹಜ್‌ನ ಸಮಯ ಸಮೀಪಿಸುವಾಗ ಹಜ್‌ಗೆ ಇಹ್ರಾಂ ಕಟ್ಟಿದರಾಯಿತು. ಹಜ್‌ಗಿಂತ ಮೊದಲು ಮದೀನಕ್ಕೆ ಹೋಗುವವರು ಅಲ್ಲಿಂದ ಬರುವಾಗ ಹಜ್‌ಗೆ ಇಹ್ರಾಂ ಮಾಡಿ ಬರಬಹುದು. ಇನ್ನು ಮಕ್ಕಾದಲ್ಲಿದ್ದು, ಅಲ್ಲೇ ಹಜ್‌ಗೆ ಇಹ್ರಾಂ ಮಾಡುವುದಾದರೆ ಒಂದು ಆಡನ್ನು 'ಫಿದ್‌ಯಾ' ನೀಡಬೇಕಾಗುತ್ತದೆ.

ಕೆಲವರು ಊರಿನಿಂದ ಮೊದಲು ಮದೀನಾಕ್ಕೆ ಹೋಗುವುದುಂಟು. ಅವರು ಇಹ್ರಾಂ ಮಾಡಬೇಕಿಲ್ಲ. ಮದೀನಾದಿಂದ ಮಕ್ಕಕ್ಕೆ ತೆರಳುವಾಗ ಇಹ್ರಾಂ ಮಾಡಿದರಾಯಿತು.

ಇಹ್ರಾಂ ಎಂದರೆ ಸಂಕಲ್ಪ/ ನಿಯ್ಯತ್. ಹಜ್ ಅಥವಾ ಉಮ್ರಕ್ಕಾಗಿ ನಾನು ನಿಶ್ಚೈಸಿದೆ ಎಂದು ಸಂಕಲ್ಪಿಸುವುದು. ಇಹ್ರಾಂಗೆ ಮುನ್ನ ಉಗುರು, ಅನಗತ್ಯ ರೋಮಗಳನ್ನು ನಿರ್ವಹಿಸಿ, ಸ್ನಾನ ಮಾಡಿ, ದೇಹಕ್ಕೆ ಸುಗಂಧ ಹಚ್ಚಿ ಜುಮುಅಕ್ಕೆ ಸಿದ್ಧರಾಗುವಂತೆ ಸಿದ್ಧರಾಗಬೇಕು. ಬಳಿಕ ಇಹ್ರಾಂನ ವಸ್ತ್ರ ಧರಿಸಬೇಕು. ಪುರುಷರಿಗೆ ಉಡುವುದಕ್ಕೊಂದು ಲುಂಗಿ, ಹೊದ್ದುಕೊಳ್ಳುವುದ ಕ್ಕೊಂದು ಶಾಲು ಬಿಟ್ಟು ಬೇರೇನೂ ಧರಿಸುವಂತಿಲ್ಲ. ಮಹಿಳೆ ಮುಖ, ಮುಂಗೈ ಮುಚ್ಚುವಂತಿಲ್ಲ. ಇಬ್ಬರಿಗೂ ಬಿಳಿ ವಸ್ತ್ರ ಸುನ್ನತ್. ಬಣ್ಣದ್ದು ಕರಾಹತ್. ನಂತರ ಇಹ್ರಾಂನ ಸುನ್ನತ್ ನಮಾಝ್ 2 ರಕ್‌ಅತ್ ನಿರ್ವಹಿಸಿ, ಇಹ್ರಾಮ್‌ನ ನಿಯ್ಯತ್ ಮಾಡಿದರಾಯಿತು. ಬಳಿಕ ನಿರಂತರ ತಲ್ಬಿಯತ್ ಹೇಳುತ್ತಿರಬೇಕು.

ಇಹ್ರಾಂ ಬಳಿಕ ಹಜ್ ಅಥವಾ ಉಮ್ರಾ ನಿರ್ವಹಿಸುವ ತನಕ ವಸ್ತ್ರಧಾರಣೆ ಮೇಲಿನಂತೆಯೇ ಇರಬೇಕು. ಕೂದಲು, ಉಗುರು ನಿವಾರಿಸಬಾರದು. ಸುಗಂಧ ಹಚ್ಚಬಾರದು. ಇಹ್ರಾಂನ ನಿಯಮಗಳನ್ನು ಉಲ್ಲಂಘಿಸಿದರೆ ಫಿದ್‌ಯಾ (ದಂಡ) ನೀಡಬೇಕಾಗುತ್ತದೆ. ಇಹ್ರಾಂನಲ್ಲಿರುವಾಗ ಸಂಭೋಗ ನಡೆಸುವುದರಿಂದ ಹಜ್, ಉಮ್ರಾ ಅಸಿಂಧುವಾಗುತ್ತದೆ. ಮತ್ತು ಅದನ್ನು ಮುಂದಿನ ಬಾರಿಯೇ ಮತ್ತೆ ನಿರ್ವಹಿಸುವುದು ಕಡ್ಡಾಯ.

**ಉಮ್ರಾ:** ಹಜ್ಜ್ ಯಾತ್ರಿಕರಿಗೆ ಸಾಮಾನ್ಯವಾಗಿ ಮೊದಲು ಮಾಡ ಸಿಗುವ ಮತ್ತು ಒಂದೇ ಯಾತ್ರೆಯಲ್ಲಿ ಹಲವು ಬಾರಿ ನಿರ್ವಹಿಸಬಹುದಾದ ಆರಾಧನೆ ಉಮ್ರಾ. ಉಮ್ರಾದ ಕ್ರಮ ಹೀಗಿದೆ; ಇಹ್ರಾಂ-ತವಾಫ್- ಸಅಯ್- ಕೂದಲು ಕತ್ತರಿಸುವುದು.

**1.ಇಹ್ರಾಂ:** ಉಮ್ರಾದ ಇಹ್ರಾಂ ಮಕ್ಕಾದ ಗಡಿಯಿಂದ ಹೊರಗೆ ಮಾಡಿರಬೇಕು. ಮಕ್ಕದಲ್ಲಿ ತಂಗುವ ಅವಧಿಯಲ್ಲಿ ಉಮ್ರಾ ನಿರ್ವಹಿಸುವವರು ಜಅ್‌ರಾನಾ(ಮಸ್ಜಿದುಲ್ ಹರಾಂನಿಂದ ಸುಮಾರು 25.ಕಿ.ಮೀ. ದೂರ)ಕ್ಕೆ ಹೋಗಿ ಇಹ್ರಾಂ ಮಾಡುವುದು ಶ್ರೇಷ್ಠ. ಇಲ್ಲವೇ ತನ್‌ಈಂ (ಮಸ್ಜಿದ್ ಆಇಶಾ- ಮಸ್ಜಿದುಲ್ ಹರಾಂನಿಂದ 7.ಕಿ.ಮೀ ದೂರ)ಗೆ ಹೋಗುವುದು ಉತ್ತಮ. ಹರಂನ ಗಡಿಯ ಹೊರಗಿರುವ ಯಾವುದೇ ಪ್ರದೇಶಕ್ಕೂ ಹೋಗಿ ಇಹ್ರಾಂ ಮಾಡ ಬಹುದು.

**2. ತವಾಫ್:** ಕಅ್‌ಬಾ ಶರೀಫನ್ನು ಹಜರುಲ್ ಅಸ್ವದ್ ಇರುವ ಮೂಲೆಯಿಂದ ಆರಂಭಿಸಿ 7ಬಾರಿ ಸುತ್ತುವುದು. ವುಳೂಅ್ ಕಡ್ಡಾಯ. ಔರತ್ ಮುಚ್ಚುವುದೂ ಕಡ್ಡಾಯ. ಸುತ್ತುವಾಗ ದೇಹದ ಎಡಭಾಗ ಕಅ್‌ಬಾದ ಭಾಗಕ್ಕಿರಬೇಕು. ಯಾವ ಕಾರಣಕ್ಕೂ ಎದೆಯ ಭಾಗ ಕಅ್‌ಬಾಕ್ಕೆ ಬೀಳದಂತೆ ನೋಡಿಕೊಳ್ಳಬೇಕು. ತವಾಫ್ ಆರಂಭಿಸುವಾಗ ಹಜರುಲ್ ಅಸ್ವದನ್ನು ಚುಂಬಿಸುವುದು, ಇಲ್ಲವೇ ಅದರತ್ತ ಕೈ ತೋರಿಸಿ ಕೈಯನ್ನು ಚುಂಬಿಸುವುದು, ಸುತ್ತುವಾಗ ದ್ಸಿಕ್ರ್, ದುಆ, ಖುರ್‌ಆನ್ ಪಾರಾಯಣ ಸುನ್ನತ್. ತವಾಫ್ ಮುಗಿದಾಗ ಮಖಾಮು ಇಬ್‌ರಾಹೀಂನ ಹಿಂದೆ, ಅಲ್ಲಿ ಸ್ಥಳ ಸಿಗದಿದ್ದರೆ ಹರಂನ ಇತರೆಡೆ 2 ರಕ್‌ಅತ್ ನಮಾಝ್ ಕೂಡ ಸುನ್ನತ್ ಇದೆ.

**3. ಸಅ್‌ಯ್:** ಸಫಾ ಮತ್ತು ಮರ್‌ವಾ ಎಂಬ ಎರಡು ಸ್ಥಳಗಳ ನಡುವೆ ನಡೆಯುವುದು. ಸಫಾದಿಂದ ಆರಂಭಿಸಿ ಮರ್ವಾಕ್ಕೆ 1, ಮರ್ವಾದಿಂದ ಮತ್ತೆ ಸಫಾಕ್ಕೆ 2 ... ಹೀಗೇ 7 ಬಾರಿ ನಡೆಯಬೇಕು. ಇಲ್ಲಿ ದ್ಸಿಕ್ರ್, ದುಆ, ಖುರ್‌ಆನ್ ಪಾರಾಯಣಗಳು ಹಾಗೂ ವುಳೂ ಇರುವುದು ಸುನ್ನತ್.

**4. ಕೂದಲು ಕತ್ತರಿಸುವುದು:** ಸಅ್‌ಯ್ ಮುಗಿದ ಬಳಿಕ ಕನಿಷ್ಠ 3 ಕೂದಲು ಕತ್ತರಿಸಿದರೆ ಉಮ್ರಾ ಪೂರ್ಣ. ಪುರುಷರಿಗೆ ಬೋಳಿಸುವುದು ಸುನ್ನತ್. ಸ್ತ್ರೀಯರು ಜಡೆಯ ತುದಿಯಿಂದ ಸ್ವಲ್ಪ ಕತ್ತರಿಸುವುದು. ಬೆರಳ ತುದಿಯ ಉದ್ದದಲ್ಲಿ ಕತ್ತರಿಸುವುದು ಸುನ್ನತ್. ಬಳಿಕ 2 ರಕ್ ಅತ್ ನಮಾಝ್, ಝಂಝಂ ಕುಡಿಯುವುದು, ಪ್ರಾರ್ಥನೆ ನಡೆಸುವುದು ಸುನ್ನತ್.

5. ಈ ಮೇಲಿನ ನಾಲ್ಕು ವಿಷಯಗಳು ಈ ಹೇಳಲಾದ ಕ್ರಮದಲ್ಲೇ ಮೊದಲು ಇಹ್ರಾಂ, ಬಳಿಕ ತವಾಫ್, ಸಅಯ್, ಕೊನೆಗೆ ಕೂದಲು ಹೀಗೆಯೇ ನಡೆಸಬೇಕು.

ಇದರೊಂದಿಗೆ ಉಮ್ರಾ ಪೂರ್ಣ.

**ಹಜ್ಜ್‌ನ ಅನುಷ್ಠಾನ ಕ್ರಮಗಳು:**

ಉಮ್ರಾದಲ್ಲಿ ಹೇಳಲಾದ ನಾಲ್ಕು ಕಾರ್ಯಗಳ ಜತೆ ಅರಫಾದಲ್ಲಿ ತಂಗುವುದು, ಮಿನಾದಲ್ಲಿ ತಂಗುವುದು, ಕಲ್ಲೆಸೆಯುವುದು, ಮುಝ್ದಲಿಫಾದಲ್ಲಿ ತಂಗುವುದು ಮತ್ತು ವಿದಾಯದ ತವಾಫ್ ಎಂಬಿವು ಹೆಚ್ಚುವರಿ ಕಡ್ಡಾಯ.

ಹಜ್ಜ್‌ನ ಫರ್‌ಳ್, ವಾಜಿಬ್, ಪ್ರಮುಖ ಸುನ್ನತ್‌ಗಳನ್ನು ಸೇರಿಸಿ ಈ ರೀತಿ ನಿರ್ವಹಿಸಬಹುದು.

1. ದ್ಸುಲ್‌ಹಜ್ಜ್ 8ರಂದು ಇಹ್ರಾಂನೊಂದಿಗೆ ಮಿನಾಕ್ಕೆ ಹೊರಡುವುದು. ಅಂದು ಹಗಲು ಮತ್ತು ರಾತ್ರಿ ಅಲ್ಲೇ ತಂಗುವುದು.

2.ದ್ಸುಲ್ ಹಜ್ಜ್ 9ರ ಳುಹ್‌ರ್ ನಿಂದ ಮರುದಿನ ಸುಬಹ್‌ವರೆಗಿನ ಯಾವುದಾರೊಂದು ಸಮಯ ಅರಫಾದಲ್ಲಿರುವುದು. ಳುಹ್‌ರ್‌ನಿಂದ ಮಗ್ರಿಬ್ ತನಕ ಇರುವುದು ಶ್ರೇಷ್ಟ.

3. ಈದ್‌ನ ರಾತ್ರಿ (ಅರಫಾ ಮುಗಿದ ರಾತ್ರಿ) ಅರಫಾದಿಂದ ಮತ್ತೆ ಮಿನಾ ಕ್ಕೆ ಬರುವ ದಾರಿಯಲ್ಲಿ ಮುಝ್ದಲಿಫ ಸಿಗುವುದು, ಸ್ವಲ್ಪ ಹೊತ್ತು ಅಲ್ಲಿರುವುದು.

4. ಈದ್‌ನ ಅರ್ಧರಾತ್ರಿ ಮುಗಿದ ಬಳಿಕ ಮಿನಾದಲ್ಲಿರುವ ಜಮ್ರತುಲ್ ಅಖಬಕ್ಕೆ ಕಲ್ಲೆಸೆಯುವುದು.

ಈದ್ ದಿನದ ಕಲ್ಲೆಸೆತ ಜಮ್ರತುಲ್ ಅಖಬಕ್ಕೆ ಮಾತ್ರ. ಕಡಲೆಗಾತ್ರದ 7 ಸಣ್ಣ ಕಲ್ಲುಗಳನ್ನು ಎಸೆಯುವುದು. ಈದ್ ದಿನದ ಸಂಜೆಯೊಳಗೆ ಉತ್ತಮ. ಆಗದಿದ್ದರೆ ರಾತ್ರಿ ಇಲ್ಲವೇ ನಂತರದ 3ದಿನಗಳ ಒಳಗೆ ಆಗಬೇಕು.

5. ಕಅ್‌ಬಕ್ಕೆ ತೆರಳಿ ಹಜ್‌ನ ತವಾಫ್ (ಇಫಾಳತ್‌ನ ತವಾಫ್ ಎನ್ನುತ್ತಾರೆ) ನಿರ್ವಹಿಸುವುದು. ಕಲ್ಲೆಸೆತಕ್ಕಿಂತ ಮೊದಲು ಬೇಕಾದರೂ ತವಾಫ್ ಮಾಡ ಬಹುದು.

6. ತವಾಫ್‌ನ ಬಳಿಕ ಸಫಾ-ಮರ್ವಾಗಳ ನಡುವೆ ಸಅ್‌ಯ್.

*(ಹಜ್‌ಗೆ ಇಹ್ರಾಂ ಮಾಡಿದ ಬಳಿಕ ಮಕ್ಕಾದ ಹರಂ ಪ್ರವೇಶಿಸಿದವರಿಗೆ ಕಅ್‌ಬಕ್ಕೆ ತೆರಳಿ 'ಖುದೂಮ್‌ನ ತವಾಫ್ ಎಂಬ ತವಾಫ್ ಮಾಡುವುದು ಸುನ್ನತ್ ಇದೆ. ಹಾಗೇ ತವಾಫ್ ಮಾಡಿದವರು ಆಗಲೇ ಹಜ್‌ನ ಸಅ್‌ಯ್ ಕೂಡಾ ಮಾಡಬಹುದು. ಹಾಗೇ ಹಜ್‌ನ ಸಅ್‌ಯ್ ಮಾಡಿದವರು ಈಗ ಹಜ್‌ನ ತವಾಫ್ ಮಾಡಿದ ಬಳಿಕ ಸಅ್‌ಯ್ ಮಾಡಬೇಕಿಲ್ಲ.)*

7. ಕೂದಲು ಬೋಳಿಸುವುದು/ಕತ್ತರಿ

بارك الله لكما ಬಾರಕಲ್ಲಾಹು ಲಕುಮಾ...

ದಿನಾಂಕ 29.9.2011ರಂದು ವೈವಾಹಿಕ ಜೀವನಕ್ಕೆ ಪಾದಾರ್ಪಣೆಗೈಯ್ಯಲಿರುವ
ಮಲ್‌ಜಉದ್ದುಆತಿ ವದ್ದಅ್‌ವತಿಲ್ ಇಸ್ಲಾಮಿಯ್ಯಃ ಉಜಿರೆ, ಅಬುದಾಬಿ ಸಮಿತಿಯ ಕಾರ್ಯದರ್ಶಿ ಹಾಗೂ ಸಕ್ರಿಯ ಸುನ್ನೀ ಕಾರ್ಯಕರ್ತ



ಮುಹಮ್ಮದ್ ರಫೀಖ್ ಜೌಹರಿ ಅಳಿಕೆ
(S/o.ಫಕ್ರುದ್ದೀನ್.ಎಸ್. ಅಳಿಕೆ) ಹಾಗೂ
ಫಾತಿಮತು ಫೌಝಿಯ
(D/o.ಅಬ್ಬಾಸ್ ಎಸ್. ಸುರಿಬೈಲು, ಖಂಡಿಗ)

ಇವರ ವೈವಾಹಿಕ ಜೀವನವು ಸುಖ, ಕ್ಷೇಮ,
ಸಕಲ ಐಶ್ವರ್ಯಗಳಿಂದ ಕೂಡಿ ಬೆಳಗಲಿ ಎಂದು ಪ್ರಾರ್ಥಿಸುವ,

ಮಲ್‌ಜಉದ್ದುಆತಿ ವದ್ದಅ್‌ವತಿಲ್ ಇಸ್ಲಾಮಿಯ್ಯಃ ಉಜಿರೆ, ಅಬುದಾಬಿ ಸಮಿತಿ

# ...ಳ ಸರಳ ಆರಾಧನೆ!

ಕೆ.ಎಂ. ಅಬೂಬಕರ್ ಸಿದ್ದೀಖ್

ಸುವುದು. ಇದನ್ನು ಈದ್‌ನ ಮಧ್ಯರಾತ್ರಿಯ ಬಳಿಕ ಯಾವಾಗಬೇಕಾದರೂ ನಡೆಸಬಹುದು. ತವಾಫ್ ಗಿಂತ ಮುಂಚೆಯೂ ನಡೆಸಬಹುದು.

8. ತವಾಫ್ ಮತ್ತು ಸಅ್‌ಯ್, ಕಲ್ಲೆಸೆತ, ಕೂದಲು ನಿವಾರಣೆ - ಈ 3ರ ಪೈಕಿ ಯಾವುದಾದರೂ ಎರಡನ್ನು ನಿರ್ವಹಿಸಿದರೆ ಹಜ್ ನಿಂದ ಮೊದಲ ವಿರಾಮವಾಗುತ್ತದೆ. ಅಂದರೆ ಇಹ್ರಾಮಿನಲ್ಲಿ ನಿಷಿದ್ಧವಾಗಿದ್ದ ವಸ್ತ್ರಧಾರಣೆ ಮತ್ತಿತರ ಸಂಗತಿಗಳೆಲ್ಲ ಈಗ ಸಮ್ಮತಾರ್ಹ ವಾಗುತ್ತದೆ; ಸಂಭೋಗ ಹೊರತುಪಡಿಸಿ. ಮೂರನ್ನೂ ನಿರ್ವಹಿಸಿದರೆ ಹಜ್‌ನಿಂದ ಪೂರ್ಣ ಮುಕ್ತಿ. ಎಲ್ಲವೂ ಸಮ್ಮತಾರ್ಹ.

9. ದ್ಸುಲ್‌ಹಜ್ 11,12,13 ಎಂಬೀ 3 ರಾತ್ರಿಗಳಲ್ಲಿ ಮಿನಾದಲ್ಲಿ ತಂಗುವುದು.

10. ದ್ಸುಲ್‌ಹಜ್ 11,12,13 ದಿನಗಳ ಳುಹ್‌ರ್‌ನ ಬಳಿಕ ಮೂರು 'ಜಮ್ರ'ಗಳಿಗೆ ತಲಾ 7ರಂತೆ ಕಲ್ಲೆಸೆಯುವುದು.

- ಈದ್‌ನ ದಿನದ ಕಲ್ಲೆಸೆತ (ಜಮ್ರತುಲ್ ಅಖಬಕ್ಕೆ ಮಾತ್ರ) ಬಾಕಿಯಿದ್ದರೆ ಮೊದಲು ಅದನ್ನು ನಿರ್ವಹಿಸ ಬೇಕು. ನಂತರ ಜಮ್ರತುಲ್ ಊಲಾ, ಬಳಿಕ ವುಸ್ತಾ, ಕೊನೆಗೆ ಅಖಬಾಕ್ಕೆ ಎಸೆಯುವುದು.
- ಆಯಾ ದಿನದ್ದನ್ನು ಮರುದಿನವೂ ಎಸೆಯಬಹುದು. ಆದರೆ, ಮೊದಲ ದಿನದ್ದನ್ನು ಮೂರು ಜಮ್ರಗಳಿಗೆ ಎಸೆದ ನಂತರವೇ ಎರಡನೇ ದಿನದ ಎಸೆತ ಆರಂಭಿಸಬೇಕು. 13ರ ಸಂಜೆಯೊಳಗೆ ಎಲ್ಲ ಕಲ್ಲೆಸೆತ ಮುಗಿಯಬೇಕು.
- 12ನೇ ದಿನ ಎಸೆದು ಮಗ್ರಿಬ್‌ಗಿಂತ ಮುಂಚೆ ಮಿನಾದ ಗಡಿಯಿಂದ ಹೊರ ಹೋಗಲು ಸಾಧ್ಯವಾದರೆ ಅಂದು ರಾತ್ರಿ ಮಿನಾದಲ್ಲಿ ತಂಗುವುದೋ, 13ನೇ ದಿನ ಕಲ್ಲೆಸೆತ ನಡೆಸುವುದೋ ಬೇಕಾಗಿಲ್ಲ. ಮಗ್ರಿಬ್‌ನ ಬಳಿಕ ಮಿನಾದ ಗಡಿಯೊಳಗೆ ಉಳಿದರೆ 13ನೇ ದಿನವೂ ಕಲ್ಲೆಸೆದ ಬಳಿಕವೇ ಹೋಗಬೇಕು.

11. ಮಿನಾ ಬಿಡುವವರೆಗೂ ತವಾಫ್, ಸಅ್‌ಯ್ ನಿರ್ವಹಿಸದವರು ಅದನ್ನು ನಿರ್ವಹಿಸಬೇಕು.

12. ಮಕ್ಕಾ ಬಿಡುವ ಮುನ್ನ ವಿದಾಯದ ತವಾಫ್ ನಿರ್ವಹಿಸುವುದು.

13. ಹಜ್‌ನ ಅನುಷ್ಠಾನ ಕರ್ಮಗಳ ಪೈಕಿ ಇಹ್ರಾಂ, ಅರಫಾ, ತವಾಫ್, ಸಅ್‌ಯ್, ಕೇಶ ನಿವಾರಣೆ ಫರ್ಳ್‌ಗಳಾಗಿದ್ದು, ಯಾವುದಾದರೊಂದನ್ನು ಕೈ ಬಿಟ್ಟು ಹೋದರೆ ಹಜ್ ಪೂರ್ಣಗೊಳ್ಳುವುದಿಲ್ಲ. ಇಹ್ರಾಂ ಮೀಖಾತ್ ದಾಟುವ ಮುನ್ನವೇ ಆಗಿರುವುದು, ಕಲ್ಲೆಸೆತ, ಮಿನಾದಲ್ಲಿ ವಾಸ, ಮುಝ್ದಲಿಫಾದಲ್ಲಿ ತಂಗುವುದು, ವಿದಾಯದ ತವಾಫ್ ಎಂಬಿವುಗಳು ಹಜ್‌ನ 'ವಾಜಿಬಾತ್'ಗಳಾಗಿದ್ದು ಯಾವುದಾದರೊಂದು ಬಿಟ್ಟು ಹೋಗುವುದು ಪಾಪಕರವಾದರೂ ನಿಗದಿತ ದಂಡ (ಫಿದ್ ಯಾ) ನೀಡಿ ಪರಿಹರಿಸಬಹುದು.

*ಆರಾಧನಾ ಕ್ರಮಗಳ ಬಗ್ಗೆ ಇಲ್ಲಿ ನೀಡಿರುವುದು ತೀರಾ ಸಂಕ್ಷಿಪ್ತ ರೂಪ ಮಾತ್ರ. ಇದು ಶಾಫಿಈಗಳಿಗೆ ಮಾತ್ರ ಅನ್ವಯಿಸುತ್ತಿದ್ದು, ಹನಫೀ ಮಸ್‌ಲಕ್‌ನಲ್ಲಿ ಕೆಲವು ವ್ಯತ್ಯಾಸಗಳಿವೆ. ಹೆಚ್ಚಿನ ಮಾಹಿತಿಗಳನ್ನು ಸುನ್ನೀ ವಿದ್ವಾಂಸರ ಹಜ್ ತರಗತಿಗಳು ಹಾಗೂ ಪುಸ್ತಕಗಳಿಂದ ಪಡೆದುಕೊಳ್ಳಬಹುದು.*

➔10ನೇ ಪುಟಕ್ಕೆ

## 120 ರಹ್ಮತ್!

ಅಲ್ಲಾಹನ ರಹ್ಮತ್-ಕರುಣೆ-ಒಂದೇ ಮನುಷ್ಯನ ರಕ್ಷಣೆಯ ಮಾರ್ಗ. ಪವಿತ್ರ ಕಅ್‌ಬಾದ ಬಳಿ 120 ರಹ್ಮತ್ ಸುರಿಯುತ್ತದೆ. 60 ತವಾಫ್ ಮಾಡುವವರಿಗೆ, 40 ನಮಾಝ್ ಮಾಡುವವರಿಗೆ, 20 ಕಅ್‌ಬಾ ನೋಡುವವರಿಗೆ. ಹಾಗಾಗಿ ರೂಮಿನಲ್ಲಿ ಹೇಗೆ ಹೇಗೋ ಸಮಯ ಮುಗಿಸುವ ಬದಲು ತವಾಫ್ ಮಾಡಿ, ಸುನ್ನತ್ ನಮಾಝ್‌ಗಳಲ್ಲಿ ತೊಡಗಿ, ಕನಿಷ್ಠ ಪಕ್ಷ ಕಅ್‌ಬಾ ನೋಡುತ್ತಲಾದರೂ ಕುಳಿತು ಕೊಳ್ಳಬೇಕು. ಅದಕ್ಕೂ ಪುಣ್ಯವಿದೆ. (ನಮಾಝ್‌ನಲ್ಲಿ ನೋಡಬೇಕಾದ್ದು ಸುಜೂದ್‌ನ ಸ್ಥಳವನ್ನು; ಕಅ್‌ಬಾವನ್ನಲ್ಲ.)

ಹಜ್ಜ್ ಅಥವಾ ಉಮ್ರಾದ ಇಹ್ರಾಮ್‌ನಲ್ಲಿರುವಾಗ, ತವಾಫ್‌ಗೆ ಪ್ರವೇಶಿಸುವ ತನಕ ಹೇಳಬೇಕಾದ ಅತ್ಯಂತ ಶ್ರೇಷ್ಠ ದ್ಸಿಕ್ರ್ ತಲ್ಬಿಯತ್- *(ಲಬ್ಬೈಕಲ್ಲಾಹುಮ್ಮ ಲಬ್ಬೈಕ್ ಲಬ್ಬೈಕ ಲಾ ಶರೀಕ ಲಕ ಲಬ್ಬೈಕ್. ಇನ್ನಲ್ ಹಮ್‌ದ ವನ್ನಿಅ್‌ಮತ ಲಕ ವಲ್ ಮುಲ್ಕ್. ಲಾ ಶರೀಕ ಲಕ್)* ಇದನ್ನು ನಿರಂತರ ಹೇಳುತ್ತಿರಬೇಕು. ತವಾಫ್, ಸಅ್‌ಯ್‌ಗಳಲ್ಲಿ ಹೇಳಲು ನಿರ್ದೇಶಿಸಲಾದ ದ್ಸಿಕ್ರ್, ದುಆಗಳು ಹೇಳಲು ಗೊತ್ತಿಲ್ಲವೆಂದು ನಿರಾಶರಾಗಬೇಕಿಲ್ಲ. ಖುರ್‌ಆನ್ ಓದುವುದು ಬಹಳ ಪುಣ್ಯ. ಖುರ್‌ಆನಿನಲ್ಲಿ ಗೊತ್ತಿರುವಷ್ಟನ್ನು ನಿರಂತರ ಪಠಿಸಬಹುದು. *'ರಬ್ಬನಾ ಆತಿನಾ ಫಿದ್ದುನ್ಯಾ ಹಸನತನ್ ವಫಿಲ್ ಆಖಿರತಿ ಹಸನತ್ ವಖಿನಾ ಅದ್ಸಾಬನ್ನಾರ್'* ಎಂಬುದು ಅತ್ಯಂತ ಶ್ರೇಷ್ಠ ಪ್ರಾರ್ಥನೆ. ಜತೆಗೆ ಅದು ಖುರ್‌ಆನ್ ಕೂಡಾ ಹೌದು. ಇದನ್ನು ಹೆಚ್ಚಿಸಬಹುದು.

ಹರಂ ಪರಿಸರದಲ್ಲಿರುವ ಪಾರಿವಾಳಗಳಿಗೂ ಮಹತ್ವವಿದ್ದು, ಅವುಗಳಿಗೆ ಆಹಾರ ಹಾಕುವುದೂ ಪುಣ್ಯಕರ್ಮ. ಹರಂ ಪ್ರದೇಶದಲ್ಲಿರುವಾಗ ಹರಂನ ಮಹತ್ವಕ್ಕೆ ಧಕ್ಕೆ ತರುವ ಯಾವುದೇ ಅಶಿಸ್ತು, ಪಾಪಗಳು, ಕೆಟ್ಟ ನಡೆನುಡಿಗಳು ಉಂಟಾಗದಂತೆ ಅತ್ಯಂತ ಎಚ್ಚರಿಕೆಯಿರಬೇಕು.

*ಅಲ್ಲಾಹು ಹೇಳುತ್ತಾನೆ: 'ನೀವು ಪತ್ನಿಯರಿಗೆ ವಸ್ತ್ರವಾಗಿದ್ದೀರಿ, ಅವರು ನಿಮಗೆ ವಸ್ತ್ರವಾಗಿರುವರು.' (ಖುರ್‌ಆನ್)*

*ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು; 'ಒಬ್ಬಾತ ತನ್ನ ಯೌವ್ವನದಲ್ಲಿ ವಿವಾಹವಾದರೆ ಶೈತಾನನು ಆತನಿಂದ ದೂರ ಸರಿಯುವನು. ಇಹಲೋಕವು ಸರಕಾಗಿದೆ. ಆ ಪೈಕಿ ಉತ್ಕೃಷ್ಟ ಸರಕು ಸದ್ವರ್ತೆ ಹೆಣ್ಣು.' (ಹದೀಸ್)*

بارك الله لكما

ವೈವಾಹಿಕ ಶುಭಾಶಯಗಳು



ದಿನಾಂಕ 29.9.2011ರಂದು ವೈವಾಹಿಕ ಜೀವನಕ್ಕೆ ಪ್ರವೇಶಿಸಲಿರುವ

**ಎನ್.ಶಾಹುಲ್ ಹಮೀದ್**

(S/o. ಎನ್.ಅಬೂಬಕರ್ ನಾಳ)

ಹಾಗೂ

**ಹಸೀನಾ ಬಾನು**

(D/o. ಸಯ್ಯಿದ್ ಉಮರ್ ಮಲೆಬೆಟ್ಟು)

ಇವರ ವೈವಾಹಿಕ ಜೀವನವು ಸುಖ, ಕ್ಷೇಮ, ಸಕಲ ಐಶ್ವರ್ಯಗಳಿಂದ ಕೂಡಿ ಬೆಳಗಲಿ ಎಂದು ಹಾರೈಸುವ,



- ಪಿ.ಕೆ.ದಾವೂದ್ ಸಅದಿ ಉರುವಾಲು ಪದವು, ರಿಯಾದ್
- ಪಿ.ಕೆ.ಮುಹಮ್ಮದ್ ಹನೀಫ್ ಉರುವಾಲುಪದವು, ರಿಯಾದ್
- ಅಯ್ಯೂಬ್ ಕಣ್ಣೂರು ರಿಯಾದ್
- ಅಬ್ದುಲ್ ಕರೀಂ ನಾಳ ರಿಯಾದ್
- ಇಬ್ರಾಹೀಂ ಪರಪ್ಪು ರಿಯಾದ್

# ಹಾರೂನ್ عليه السلامರ ಗಡ್ಡ ಎಳೆದದ್ದೇಕೆ?

ಒಳಗಿನ ಗುಟ್ಟು 37

ಅಹ್ಮದ್‌ಯಾರ್ ಖಾನ್ ನಈಮಿ
ಕನ್ನಡಕ್ಕೆ: ನಈಮಿ ಮಂಗಳಪೇಟೆ

*ಪ್ರಶ್ನೆ: ಗಡ್ಡ ಬಿಡುವುದು ಅಂಬಿಯಾಗಳ ಚರ್ಯೆ. ಪ್ರವಾದಿ ಮೂಸಾ عليه السلامರವರು ಸಹೋದರರಾದ ಪ್ರವಾದಿ ಹಾಹೂನ್ عليه السلامರವರ ಗಡ್ಡವನ್ನು ಹಿಡಿದೆಳೆದಿದ್ದರು. ಇಲ್ಲಿ ಪ್ರವಾದಿಯೊಬ್ಬರ ಗಡ್ಡವನ್ನು ಹಿಡಿದೆಳೆದದ್ದು, ಪ್ರವಾದಿಚರ್ಯೆಯಾದ ಗಡ್ಡವನ್ನು ಹಿಯಾಳಿಸಿದ್ದು ಎರಡೂ ಪಾಪವಲ್ಲವೇ? ಪ್ರವಾದಿ ಮೂಸಾ عليه السلامರವರು ಈ ಕೃತ್ಯವನ್ನು ವಹ್ಯ್ ಅವತೀರ್ಣಗೊಳ್ಳದೆಯೇ ಮಾಡಿರುವರು. ಹಾರೂನ್ عليه السلامರವರು ಮೂಸಾ عليه السلامರ ಮೇಲೆ ಖಿಸಾಸ್ ತೀರಿಸಬೇಕಿತ್ತಲ್ಲವೇ?*

ಉತ್ತರ: ಪ್ರವಾದಿ ಮೂಸಾ عليه السلامರವರು ಎಸಗಿದ ಈ ಕೃತ್ಯ ಪಾಪವೋ ತಪ್ಪೋ ಆಗಿರುತ್ತಿದ್ದರೆ ಅಲ್ಲಾಹನ ಕ್ರೋಧವು ಇಳಿದು ಬರುತ್ತಿತ್ತು. "ಮೂಸಾ ತಾವು ತಪ್ಪೆಸಗಿರುವಿರಿ ಎಂದು ದಿವ್ಯವಾಣಿ ಅವತೀರ್ಣಗೊಳ್ಳುತ್ತಿತ್ತು. ಪ್ರವಾದಿ ಆದಂ عليه السلامರವರು ನಿಷೇದಿತ ಮರದಿಂದ ಹಣ್ಣನ್ನು ಕಿತ್ತು ತಿಂದಾಗ ನಡೆದಂತೆ.

ಪ್ರವಾದಿ ಹಾರೂನ್ عليه السلامರವರು ಮೂಸಾ عليه السلامರವರ ಸಹೋದರ. ಆದರೂ ಪದವಿಯಲ್ಲಿ ಪ್ರವಾದಿ ಮೂಸಾ عليه السلامರವರೇ ದೊಡ್ಡವರಾಗಿದ್ದರು. ಮೂಸಾ عليه السلام ರಾಜನಂತಿದ್ದರೆ ಹಾರೂನ್ عليه السلامರವರು ಅವರ ಮಂತ್ರಿಯಂತಿದ್ದರು.

ಮೂಸಾ عليه السلامರವರ ಇಜ್‌ತಿಹಾದ್‌ನಲ್ಲಿ ಸಣ್ಣ ಎಡವಟ್ಟು ಉಂಟಾಯಿತು. ಅವರು ಭಾವಿಸಿದ್ದು ಪ್ರವಾದಿ ಹಾರೂನ್ عليه السلامರವರು ತನ್ನ ಅನುಪಸ್ಥಿತಿಯಲ್ಲಿ ಜನಾಂಗವನ್ನು ಸಾಮಿರೀ ತಯಾರಿಸಿದ ಕರುವನ್ನು ಪೂಜಿಸುವುದರಿಂದ ತಡೆಯುವಲ್ಲಿ ಉತ್ಸುಕರಾಗಿರಲಿಲ್ಲವೆಂದು. ಈ ಕಾರಣದಿಂದ ಅವರು ಕೋಪಗೊಂಡು ಅವರ ಗಡ್ಡವನ್ನೂ ತಲೆಗೂದಲನ್ನೂ ಹಿಡಿದೆಳೆದಿದ್ದರು. ನಂತರ ವಾಸ್ತವ ತಿಳಿದು ಅಲ್ಲಾಹನಲ್ಲಿ ಕ್ಷಮಿಸುವಂತೆ ಕೋರಿದರು. ಇಜ್‌ತಿಹಾದ್‌ನಲ್ಲುಂಟಾಗುವ ಸಣ್ಣ ಪ್ರಮಾದ ನಿಂದನೆಯೋ ಹೀಗಳೆಯುವುದೇ ಆಗದ ಕಾರಣ ಪ್ರವಾದಿ ಮೂಸಾ عليه السلامರವರು ಎಸಗಿದ ಈ ಕೃತ್ಯ ಪಾಪವೋ ಪ್ರವಾದಿನಿಂದನೆಯೋ ಆಗಿರಲಿಲ್ಲ ಎಂದು ಇದರಿಂದ ಸ್ಪಷ್ಟವಾಗುತ್ತದೆ. ■

# ಕೆಡುಕಿಗೆ ತ್ವರೆಯೇಕೆ?

←5ನೇ ಪುಟದಿಂದ

(4)ಬಿಲ್ಖೀಸ್ ರಾಣಿಯು ಸತ್ಯವಿಶ್ವಾಸವನ್ನು ಸ್ವೀಕರಿಸಿದ ಬಗ್ಗೆಯಿರುವ ವಿವರಣೆಯೊಂದಿಗೆ ಪ್ರವಾದಿ ಸುಲೈಮಾನ್ عليه السلامರವರ ಚರಿತ್ರೆಯನ್ನು ಮುಗಿಸಿ ಬಳಿಕ ಪ್ರವಾದಿ ಸ್ವಾಲಿಹ್ عليه السلام ಹಾಗೂ ಅವರ ಸಮೂದ್ ಜನತೆಯ ಬಗ್ಗೆ ಹ್ರಸ್ವ ವಿವರಣೆಯು ಈ ಸೂಕ್ತಗಳಲ್ಲಿವೆ. ಏಕ ಇಲಾಹನಾದ ಅಲ್ಲಾಹನಿಗೆ ಆರಾಧನೆ ಸಲ್ಲಿಸಲು ಸ್ವಾಲಿಹ್ عليه السلامರವರು ಜನತೆಗೆ ನೀಡಿದ ಉಪದೇಶವನ್ನು ಧಿಕ್ಕರಿಸಿದ ಜನತೆಯು ಸತ್ಯನಿಷೇಧಿಗಳಾಗಿ ಮಾರ್ಪಟ್ಟರು. ಕೆಲವರು ಮಾತ್ರ ಪ್ರವಾದಿ ಸ್ವಾಲಿಹ್ عليه السلامರವರಲ್ಲಿ ವಿಶ್ವಾಸವಿಟ್ಟರು. ಪ್ರವಾದಿ ಸ್ವಾಲಿಹ್ عليه السلامರವರು ಅವರಿಗೆ ನಿದರ್ಶನವಾಗಿ ನೀಡಿದ್ದ ಒಂಟೆಯನ್ನು ಅವರು ಕೊಂದು ಹಾಕಿದರು. ಈ ಮೂಲಕ ಅವರು ಕೆಡುಕನ್ನು ತ್ವರೆ ಮಾಡಿಕೊಂಡರು. ಪ್ರವಾದಿ ಸ್ವಾಲಿಹ್ عليه السلام ಮತ್ತು ಜತೆಗಿದ್ದ ಸತ್ಯವಿಶ್ವಾಸಿಗಳನ್ನು ತಮಗೆ ಅಪಶಕುನವಾಗಿ ಅವರು ಕಂಡರು. ಅದಕ್ಕೆ ಪ್ರತಿಯಾಗಿ ನಿಮ್ಮ ಜಯಾಪಜಯಗಳು ಅಲ್ಲಾಹನ ಬಳಿಯಿದೆಯೆಂದೂ ಅವನು ನಿಮ್ಮನ್ನು ಪರೀಕ್ಷಿಸುವೆನೆಂದೂ ಸ್ವಾಲಿಹ್ عليه السلامರವರು ಉತ್ತರಿಸಿದರು.

ಅವರ ಪೈಕಿ ಒಂಭತ್ತು ಮಂದಿ ನಾಯಕರು ಸ್ವಾಲಿಹ್ عليه السلامರನ್ನು ರಾತ್ರಿ ವೇಳೆ ಕೊಂದು ಹಾಕಲು ಯೋಜನೆ ಹಾಕಿದರು. ಆದರೆ ಅಲ್ಲಾಹನು ಅವರ ಯೋಜನೆಗಳು ಜಾರಿಯಾಗುವ ಮುನ್ನವೇ ಅವರನ್ನು ನಾಶಗೊಳಿಸಿದನು. ಜಿಬ್‌ರೀಲ್ عليه السلامರ ಒಂದು ಅಟ್ಟಹಾಸಕ್ಕೆ ಅವರು ಶವವಾಗಿ ಬಿದ್ದಿದ್ದರಷ್ಟೆ. ಸತ್ಯವಿಶ್ವಾಸಿಗಳಿಗೆ ನೀಡಿದ ಸಂರಕ್ಷಣೆ ಮತ್ತು ಸತ್ಯನಿಷೇಧಿಗಳಿಗೆ ನೀಡಿದ ಈ ಶಿಕ್ಷೆಯು ರೀತಿಯಲ್ಲಿ ಚಿಂತಿಸುವವರಿಗೆ ಪಾಠವಿದೆಯೆನ್ನುತ್ತದೆ ಖುರ್‌ಆನ್. ■

# ಪರಿವರ್ತನೆ

ಹಝ್ರತ್ ಮಅ್‌ರೂಫ್ رضي الله عنه ರವರು ಒಂದು ದಾರಿಯಲ್ಲಿ ನಡೆದುಕೊಂಡು ಹೋಗುತ್ತಿದ್ದರು. ಜೊತೆಯಲ್ಲಿ ತಮ್ಮ ಸಂಗಡಿಗರೂ ಇದ್ದರು. ಸಾಗುತ್ತಾ ಒಂದು ನದಿಯ ಬಳಿಗೆ ತಲುಪಿದರು. ಅಲ್ಲಿ ಕೆಲವು ಜನರನ್ನು ಕಂಡರು. ಅವರ ಕೈಯಲ್ಲಿ ಸಂಗೀತೋಪಕರಣಗಳಿದ್ದವು. ಮದ್ಯದ ಬಾಟಲಿಗಳಿದ್ದವು. ತೂರಾಡುತ್ತಾ ಮೋಜು, ಮಸ್ತಿಯಲ್ಲಿ ತೊಡಗಿದ್ದರು. ಮದ್ಯದ ನಶೆಯಲ್ಲಿ ತಮ್ಮನ್ನು ತಾವೇ ಮೈಮರೆತಿದ್ದರು. ಅವರ ಕುಚೇಷ್ಟೆ, ಪರಿಹಾಸ್ಯ ಹಾಗೂ ಮೋಜುಗಳನ್ನು ಕಂಡು ಸಂಗಡಿಗರಿಗೆ ಕಸಿವಿಸಿಯಾಯಿತು. ಕೋಪದಿಂದ ಮಹಾತ್ಮರಲ್ಲಿ ಭಿನ್ನವಿಸಿಕೊಂಡರು. "ಮಹಾತ್ಮರೇ, ಅಲ್ಲಾಹನಲ್ಲಿ ಅವರಿಗೆ ವಿರುದ್ಧವಾಗಿ ಪ್ರಾರ್ಥಿಸಿರಿ. ಅವರು ಆ ನದಿಯಲ್ಲಿ ಮುಳುಗಿ ಜೀವಂತ ಸಮಾಧಿಯಾಗಲಿ; ಅವರು ಇಲ್ಲೇ ನಾಶಹೊದಿದರೆ ಇಲ್ಲಿ ಜನರು ಅವರ ಪಾಪಕೃತ್ಯಗಳಿಂದ ಸಂರಕ್ಷಣೆ ಹೊಂದಿ ಯಾರು. ಇಲ್ಲಿನ ಪರಿಸರ ಕೆಡುಕುಗಳಿಂದ ಮುಕ್ತವಾದೀತು."




ಮಹಾತ್ಮರಾದ ಮಅ್‌ರೂಫ್ رضي الله عنه ರವರು ಸಂಗಡಿಗರ ಆಕ್ರೋಶ ಕಂಡು ನಸು ನಕ್ಕರು. ನಂತರ ಅವರತ್ತ ತಿರುಗಿ ಹೇಳಿದರು. "ನಾನು ಪ್ರಾರ್ಥಿಸುತ್ತೇನೆ. ನೀವು 'ಆಮೀನ್' ಎಂದು ಹೇಳಿರಿ."

ಸಂಗಡಿಗರು 'ಆಯಿತು' ಎನ್ನುತ್ತಾ ಕರಗಳನ್ನೆತ್ತಿದರು.

"ಅಲ್ಲಾಹನೇ, ಇವರನ್ನು ಯಾವ ರೀತಿ ಇಲ್ಲಿ ಸುಖಾಡಂಬರಗಳಿಂದ ಮೋಜು, ಮಸ್ತಿಗಳಿಂದ ಜೀವಿಸಿರುವೆಯೋ ಅದೇ ರೀತಿ ಅಲ್ಲಿಯೂ (ಪರಲೋಕ)ಸುಖಾಡಂಬರಗಳಿಂದ, ಮೋಜಿನಿಂದ ಜೀವಿಸುವಂತೆ ಮಾಡು."

ಮಹಾತ್ಮರ ಈ ಪರಿಯ ಪ್ರಾರ್ಥನೆ ಕೇಳಿ ಸಂಗಡಿಗರು ಚಕಿತರಾದರು. ಮೋಜು ಉಡಾಯಿಸುತ್ತಿರುವ, ಪಾಪಗಳಲ್ಲಿ ಮಿಂದು ದೇವನನ್ನೇ ಮರೆತಿರುವ ಇವರಿಗೆ ಪರಲೋಕದಲ್ಲಿ ಸುಖ ನೀಡುವಂತೆ ಪ್ರಾರ್ಥಿಸುವುದೇ? ಸಂಗಡಿಗರು ಅಚ್ಚರಿ, ಕುತೂಹಲದೊಂದಿಗೆ ಕೇಳಿದರು.

ಮಹಾತ್ಮರು ಮತ್ತೆ ಮಂದಹಾಸ ಬೀರಿದರು, "ಸ್ವಲ್ಪ ತಾಳಿ ಸಹನೆ ಪಾಲಿಸಿ, ಅದನ್ನು ನೀವು ಈಗಲೇ ಅರಿತುಕೊಳ್ಳುವಿರಿ ಎಂದರು.

ಸ್ವಲ್ಪ ಹೊತ್ತಿನಲ್ಲಿ ಆ ಶೋಕಿಲಾಲಗಳ ಗಮನ ಮಹಾತ್ಮರ ಮೇಲೆ ಬಿತ್ತು. ಮಹಾತ್ಮರನ್ನು ಕಂಡು ತಡಬಡಿಸಿ ಎದ್ದು ನಿಂತರು. ತಮ್ಮ ಕೈಯಲ್ಲಿದ್ದ ಸಂಗೀತೋಪಕರಣಗಳಲ್ಲು ಮತ್ತು ಮದ್ಯದ ಬಾಟಲಿಗಳನ್ನು ಬಿಸುಟೆಸೆದರು.

ನಂತರ ಸಾವಧಾನದಿಂದ ಮಹಾತ್ಮರತ್ತ ನಡೆದು ಬಂದರು. ಹತ್ತಿರಬಂದು ಗುಬ್ಬಚ್ಚಿಯಂತೆ ಮುದುರಿನಿಂತು ಮುಸಿಮುಸಿ ಅಳತೊಡಗಿದರು. ನಂತರ ಮಹಾತ್ಮರ ಪಾದಕ್ಕೆರಗಿ ನಿಷ್ಕಳಂಕ ಮನದೊಂದಿಗೆ ತೌಬಾ ಮಾಡಿದರು. ಸಂಗಡಿಗರುಈ ಚಿತ್ರಣವನ್ನೆಲ್ಲಾ ಬೆರಗುಗಣ್ಣಿನಿಂದ ನೋಡುತ್ತಲಿದ್ದರು.

ಮಹಾತ್ಮರು ಸಂಗಡಿಗರತ್ತ ತಿರುಗಿ ಹೇಳಿದರು "ನೋಡಿವಿರಾ, ಏನಾಯಿತೀಗ? ನದಿಯಲ್ಲಿ ಮುಳುಗಿಸದೆ, ಹಿಂಸೆ ನೀಡದೆ ನಿಮ್ಮ ಆಸೆ ಈಡೇರಲಿಲ್ಲವೇ?"

- ನಈಮಿ

ಅನ್ಸಾರಿಯ್ಯ ಹಜ್ ಉಮ್ರಾ ಟೂರ್ಸ್ & ಟ್ರಾವೆಲ್ಸ್

ನಮ್ಮ ವಿಶೇಷತೆಗಳು
● ಮಂಗಳೂರಿನಿಂದ-ಮಂಗಳೂರಿಗೆ ● ಹರಮಿನ ಸಮೀಪ ರೂಮಿನ ವ್ಯವಸ್ಥೆ ● ಊರಿನ ಮಾದರಿ ಊಟೋಪಚಾರ ● ಆರಾಧನೆಗಳಿಗೆ ಬೇಕಾದ ಅನುಭವಸ್ಥ ಉಸ್ತಾದರಿಂದ ಸಂದರ್ಭೋಚಿತ ಮಾಹಿತಿ.

ನಮ್ಮ ಸೇವೆಗಳು: ಟಿಕೆಟಿಂಗ್, ವೀಸಾ ಕ್ಲಿಯೆರೆನ್ಸ್, ಎಮಿಗ್ರೇಷನ್, ಪಾಸ್‌ಪೋರ್ಟ್ ಸರ್ವಿಸ್
ಹಜ್ಜ್‌ನ ನಂತರ ಎಲ್ಲಾ ತಿಂಗಳಲ್ಲೂ ಸೌದಿ ಸಂದರ್ಶನ ಹಾಗೂ ಉಮ್ರಾ ಪ್ಯಾಕೇಜ್

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿರಿ
ಅಲ್‌ಹಾಜ್ ಮುಹಮ್ಮದ್ ಶರೀಫ್ ಮದನಿ ಉಳ್ಳಾಲ : 9880274410
ಸಯ್ಯಿದ್ ಶಾಹುಲ್ ಹಮೀದ್ ತಂಙಳ್ Cell: 09995000595
ಕಛೇರಿ ನಂ: 0824-4265589
2ನೇ ಮಹಡಿ, ರೀಗಲ್ ಪಾರ್ಕ್, ನೌಫಲ್ ಹೋಟೆಲ್ ಎದುರುಗಡೆ, ಮಿಷನ್ ಸ್ಟ್ರೀಟ್, ಬಂದರ್, ಮಂಗಳೂರು-1




We Supply Soft Drinks for Marriage, Party & Other Occassions
Cell: 9880811537, 9916315496, 08254-233977(F) 230688 (R)
HUNGLURE, KODI, KUNDAPUR - 576 217.




ಉತ್ತರಿಸುವವರು:
ಪಿ.ಎಂ.ಇಬ್‌ರಾಹೀಮ್ ಮುಸ್ಲಿಯಾರ್ ಬೇಕಲ

## ಮೀನು ಸಾಕುವುದು

*ಬಾಬಾಜಾನ್ ಸಾಹೇಬ್ ಅಂಬಲಪಾಡಿ*

ಪ್ರ : ಮನೆಯಲ್ಲಿ ಅಕ್ವೇರಿಯಮ್‌ನಲ್ಲಿ ಮೀನು ಸಾಕಬಹುದೇ? ಇದನ್ನು ಮನೆಯ ಎದುರಿಗೆ ಇಡಬಹುದೇ?

ಉ : ಅಕ್ವೇರಿಯಮ್‌ನಲ್ಲಿ ಮೀನು ಸಾಕುವುದಕ್ಕೆ ವಿರೋಧವೇನೂ ಇಲ್ಲ. ಇದನ್ನು ಮನೆಯ ಯಾವುದೇ ಕಡೆ ಇಡುವುದಕ್ಕೆ ತೊಂದರೆಯೂ ಇಲ್ಲ.

## ವಿದ್ಯುತ್ ಬ್ಯಾಟ್

*ಸ್ವಾಬಿರಾ ಎಂ.ಎಸ್. ಕನ್ಯಾಡಿ*

ಪ್ರ : *ನುಸಿಗಳನ್ನು ಕೊಲ್ಲುವ 'ವಿದ್ಯುತ್ ಬ್ಯಾಟ್' ಇದರಿಂದ ನುಸಿಗಳನ್ನು ಕೊಲ್ಲಬಾರದೆಂದು ಕೆಲವರು ಹೇಳುತ್ತಾರೆ. ಇದರಿಂದ ನುಸಿಗಳು ಸುಟ್ಟು ಹೋಗುವುದೆಂದೂ, ಯಾವ ಪ್ರಾಣಿಗಳನ್ನೂ ಜೀವಂತ ಸುಟ್ಟು ಕೊಲ್ಲಬಾರದೆಂದೂ ಇದಕ್ಕೆ ಅವರು ಕಾರಣ ಹೇಳುತ್ತಿದ್ದಾರೆ. ಇದು ಸರಿಯೆ? ಈ ಬಗ್ಗೆ ವಿವರಿಸುವಿರಾ?*

ಉ : ಯಾವುದೇ ಜೀವಿಗಳನ್ನು ಅನಿವಾರ್ಯತೆಯಿಲ್ಲದೆ ಸುಟ್ಟು ಕೊಲ್ಲುವುದನ್ನು ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ವಿರೋಧಿಸಿದ್ದಾರೆ. ಇರುವೆಗಳ ಗೂಡೊಂದಕ್ಕೆ ಬೆಂಕಿ ಹಾಕಿರುವುದನ್ನು ಕಂಡಾಗ 'ಇದನ್ನು ಸುಟ್ಟವರು ಯಾರು?" ಎಂದು ಕೇಳಿದ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು 'ಅಗ್ನಿ ಮೂಲಕ ಸುಡಲು ಅಗ್ನಿಯನ್ನು ಸೃಷ್ಟಿಸಿದ ಅಲ್ಲಾಹನಿಗಲ್ಲದೆ ಅನುಯೋಜ್ಯವಲ್ಲ' ಎಂದರು. ಈ ಹದೀಸ್‌ನ ಆಧಾರದಲ್ಲಿ ಬಹುತೇಕ ವಿದ್ವಾಂಸರು ಜೀವಿಗಳನ್ನು ಸುಟ್ಟು ಕೊಲ್ಲುವುದು ಕರಾಹತ್ ಎಂದಿದ್ದಾರೆ. ಆದರೆ ಸೊಳ್ಳೆಯಂತೆ ಉಪದ್ರವ ಜೀವಿಗಳು, ಕಚ್ಚುವ ಇರುವೆ ಮುಂತಾದವುಗಳು ಹೆಚ್ಚಿನ ಪ್ರಮಾಣದಲ್ಲಿದ್ದು ಸುಟ್ಟು ಹಾಕುವ ಮೂಲಕವಲ್ಲದೆ ಅದರ ತೊಂದರೆಗಳನ್ನು ನಿವಾರಿಸಲಾಗದಿದ್ದಲ್ಲಿ ಅದನ್ನು ಸುಟ್ಟು ಕೊಲ್ಲುವುದು ಸಮ್ಮತಾರ್ಹವಾಗಿದೆ. ತುಹ್‌ಫಾ, ಬುಜೈರಿಮೀ ಮುಂತಾದ ಕರ್ಮಶಾಸ್ತ್ರ ಗ್ರಂಥಗಳಲ್ಲಿ ಈ ಬಗ್ಗೆ ವಿವರಣೆಗಳಿವೆ. ಇದರಂತೆ ವಿದ್ಯುತ್ ಬ್ಯಾಟ್ ಮೂಲಕ ಸೊಳ್ಳೆಗಳನ್ನು ಕೊಂದು ಹಾಕುವ ಅನಿವಾರ್ಯತೆಗಳಿದ್ದರೆ ಅದನ್ನು ಬಳಸಿ ಸೊಳ್ಳೆ ನಿಯಂತ್ರಿಸುವುದು ಸಮ್ಮತಾರ್ಹವಾಗಿದೆ.

## ಮಯ್ಯಿತ್ ಎರಡು ಮಸೀದಿಗೆ?

*ಇಬ್ರಾಹಿಮ್ ಕಡಪಾಡಿ, ಉಡುಪಿ*

ಪ್ರ : *ಒಂದು ಮೊಹಲ್ಲಾದಲ್ಲಿ ಎರಡು ಮಸೀದಿಗಳಿದ್ದು ಒಬ್ಬ ವ್ಯಕ್ತಿಯು ಎರಡೂ ಮಸೀದಿಗಳಿಂದ ಜಮಾಅತ್‌ನ ಸದಸ್ಯತನ ಪಡೆದಿರುವನು. ಈ ವ್ಯಕ್ತಿ ಮರಣ ಹೊಂದಿದರೆ ಇವನಿಗಾಗಿ ಎರಡೂ ಮಸೀದಿಗಳಲ್ಲಿ ಮಯ್ಯಿತ್ ನಮಾಝ್ ನಿರ್ವಹಿಸಬೇಕೆ?*

ಉ : ನಿರ್ವಹಿಸಬೇಕಿಲ್ಲ. ವ್ಯಕ್ತಿಯು ಮರಣಹೊಂದಿದ ಮೊಹಲ್ಲಾದ ನಿವಾಸಿಗಳು ಆ ಮಯ್ಯಿತ್‌ಗಾಗಿ ಮಯ್ಯಿತ್ ನಮಾಝ್ ನಿರ್ವಹಿಸುವುದು ಅವರ ಮೇಲಿನ ಸಾಮೂಹಿಕ ಬಾಧ್ಯತೆಯಾಗಿದ್ದು ಅದು ನಡೆದರೆ ಮಯ್ಯಿತ್‌ನ ಮೇಲಿನ ಹಕ್ಕು ನಿರ್ವಹಿಸಿದಂತಾಗುತ್ತದೆ. ವ್ಯಕ್ತಿಯು ಯಾವ ಜಮಾಅತ್‌ನ ಸದಸ್ಯತನ ಪಡೆದಿದ್ದಾನೆನ್ನುವುದು ಮುಖ್ಯವಲ್ಲ. ಜಮಾಅತ್‌ನ ಸದಸ್ಯತನ ಪಡೆದಿರುವುದರಿಂದ ಮಾತ್ರ ಆ ಜಮಾಅತ್‌ನವರಿಗೆ ಮಯ್ಯಿತ್ ನಮಾಝ್ ನಿರ್ವಹಿಸುವ ಹಕ್ಕು ಬರುವುದಲ್ಲ. ಜಮಾಅತ್‌ನ ಸದಸ್ಯತನ ಪಡೆದಿದ್ದರೂ ಇಲ್ಲದಿದ್ದರೂ ಸತ್ಯವಿಶ್ವಾಸಿಯೊಬ್ಬನು ಊರಿನಲ್ಲಿ ಮರಣ ಹೊಂದಿರದೆ ಊರಿನವರು ಅವನ ಮೇಲೆ ಮಯ್ಯಿತ್ ನಮಾಝ್ ನಿರ್ವಹಿಸಬೇಕು. ಮಸೀದಿಯಲ್ಲಿ ಜನರು ಹೆಚ್ಚು ಸೇರುವುದರಿಂದ ಮಯ್ಯಿತ್ ನಮಾಜನ್ನು ಅಲ್ಲಿ ನಿರ್ವಹಿಸುವುದು ಉತ್ತಮ. ಊರಿನಲ್ಲಿ ಎರಡು ಮಸೀದಿಗಳಿದ್ದರೆ ಒಂದೆಡೆ ನಮಾಝ್ ನಿರ್ವಹಿಸಿ ದಫನ ಕಾರ್ಯಗಳತ್ತ ಮುಂದುವರಿಯಬೇಕು.

## ನಮಾಜ್ ಖಳಾ ಮಾಡುವುದು

*ಹೆಸರು, ಊರು ಬೇಡ*

ಪ್ರ : *ಸುಬುಹಿ ನಮಾಜನ್ನು ಮನಪೂರ್ವಕ ಖಳಾ ಮಾಡುವುದರ ವಿಧಿ ಏನು?*

ಉ : ಯಾವುದೇ ಫರ್‌ಳ್ ನಮಾಜನ್ನು ಮನಪೂರ್ವಕ ಖಳಾ ಮಾಡುವುದು ಹರಾಮ್ ಆಗಿದೆ. ಸಮಯ ಮುಗಿಯುವ ಮುನ್ನ ನಮಾಜ್ ನಿರ್ವಹಣೆ ಕಡ್ಡಾಯವಾಗಿದೆ. ನಮಾಜ್ ಖಳಾ ಮಾಡುವುದು ಅತಿ ಭೀಕರ ಶಿಕ್ಷೆಗೆ ಗುರಿಯಾಗುವ ಪಾಪವೆನಿಸುತ್ತದೆ.

## ಗರ್ಭಿಣಿಯ ಝಿಯಾರತ್

*ಆಯಿಶಾ, ಉಚ್ಚಿಲ*

ಪ್ರ : *ಗರ್ಭಿಣಿಯರು 7 ತಿಂಗಳ ನಂತರ ದರ್ಗಾ ಝಿಯಾರತ್‌ಗೆ ಹೋಗಬಾರದೆಂದು ಹೇಳುತ್ತಾರೆ ಹೌದೆ? ಮುಟ್ಟಾದವರು ದರ್ಗಾ ಝಿಯಾರತ್ ನಡೆಸಬಾರದೆ? ವಿವರಿಸುವಿರಾ?*

ಉ : ಸಜ್ಜನರಾದ ಮಹಾತ್ಮರ ಖಬ್‌ರ್‌ಗಳನ್ನು ಝಿಯಾರತ್ ಮಾಡುವುದು ಮಹಿಳೆಯರಿಗೂ ಸುನ್ನತ್ತಿದ್ದು ಇದಕ್ಕೆ ಪ್ರತ್ಯೇಕ ಕಾಲ ನಿರ್ಣಯವೇನೂ ಇಲ್ಲ. ಮಹಿಳೆಯರು ಮನೆಯಿಂದ ಹೊರಡುವಾಗ ಬೇಕಾದ ಶಿಸ್ತುಗಳನ್ನು ಪಾಲಿಸಿ ಯಾವ ಸಂದರ್ಭಗಳಲ್ಲೂ ಝಿಯಾರತ್ ಮಾಡಬಹುದಾಗಿದೆ. ಇದಕ್ಕೂ ಗರ್ಭಾವಸ್ಥೆಗೂ ಸಂಬಂಧವಿಲ್ಲ.

ಮುಟ್ಟಾದ ಮಹಿಳೆಯರು ದರ್ಗಾ ಝಿಯಾರತ್ ಮಾಡುವುದಕ್ಕೆ ಅಡ್ಡಿಯಿಲ್ಲ. ಆದರೆ ಇವರಿಗೆ ಹಿರಿಯ ಅಶುದ್ಧಿ ಇರುವ ಕಾರಣ ಝಿಯಾರತ್‌ನ ವೇಳೆ ಖುರ್‌ಆನ್ ಪಾರಾಯಣ ಸಲ್ಲದು. ದ್ಸಿಕ್ರ್, ದುಆ ನಡೆಸಬಹುದಾಗಿದೆ.

## ಒಣಗಿದ ನಜಸ್

*ಮುಹಮ್ಮದ್ ಹಾರಿಸ್, ಕಲ್ಲಂದಡ್ಕ*

ಪ್ರ : *ಒಣಗಿರುವ ವಸ್ತುವಿಗೆ ನಾಯಿಯ ಸ್ಪರ್ಶವಾದರೆ 7 ಸಲ ತೊಳೆಯುವುದು ಬೇಕಿಲ್ಲವೆಂದು ಕೆಲವರು ಹೇಳುತ್ತಾರೆ. ಇದು ಸರಿಯೇ?*

ಉ : ಒಣಗಿದ ವಸ್ತುವಿಗೆ ಒಣಗಿರುವ ನಾಯಿ ಸ್ಪರ್ಶವಾದರೆ ವಸ್ತುವನ್ನು ತೊಳೆಯಬೇಕಿಲ್ಲ. ನಾಯಿಯು ಮಾತ್ರವಲ್ಲ ಯಾವುದೇ ಒಣಗಿದ ನಜಸ್‌ನ ಸ್ಪರ್ಶದಿಂದ ಒಣಗಿದ ವಸ್ತು ಮಲಿನವಾಗುವುದಿಲ್ಲ. ನಾಯಿಯ ಮೂತಿಯು ಸದಾ ಒದ್ದೆಯಿರುತ್ತಿದ್ದು ನಾಯಿ ಮೂತಿಯಿಂದ ಸ್ಪರ್ಶಿಸಿದರೆ ವಸ್ತುವನ್ನು ಒಮ್ಮೆ ಮಣ್ಣು ಮಿಶ್ರಿತ ನೀರಿನಿಂದ ಸೇರಿ ಏಳು ಬಾರಿ ತೊಳೆಯಬೇಕು.

## ಕಾಗೆ ಕುಡಿದ ನೀರು

*ಹಫ್ಸಾ, 7ನೇ ಬ್ಲಾಕ್, ಕೃಷ್ಣಾಪುರ*

ಪ್ರ : *ನೀರು ತುಂಬಿಸಿದ ಪಾತ್ರೆಗೆ ಕಾಗೆ ಬಾಯಿ ಹಾಕಿದರೆ ನೀರು ನಜಸ್ ಆಗುವುದೇ?*

ಉ : ಜೀವಂತ ಕಾಗೆ ನಜಸ್ ಅಲ್ಲ. ಆದ್ದರಿಂದ ಅದು ನೀರಿಗೆ ಬಾಯಿ ಹಾಕಿದರೆ ನೀರು ನಜಸ್ ಆಗುವುದಿಲ್ಲ. ಕಾಗೆಯ ಕೊಕ್ಕಿನಲ್ಲಿ ನಜಸ್ ಇದೆಯೆನ್ನುವುದು ಖಚಿತವಿದ್ದು ಆ ನಜಸ್‌ನೊಂದಿಗೆಯೇ ಪಾತ್ರೆಯ ನೀರಿಗೆ ಬಾಯಿ ಹಾಕಿದ್ದು ಖಚಿತವಿದ್ದರೆ 2 ಖುಲ್ಲತ್ ಪ್ರಮಾಣದಲ್ಲಿಲ್ಲದ ನೀರು ಮಲಿನವಾಗುವುದು.

## ಫಸ್ಖ್‌ಗೆ ಇದ್ದ ಬೇಕೆ?

*ರಾಬಿಯಾ, ಊರುಬೇಡ*

ಪ್ರ : *ತ್ವಲಾಖ್ ನೀಡಲ್ಪಟ್ಟ ಮಹಿಳೆಯು ಇದ್ದಃ ಕೂರುವಂತೆ, ಫಸ್ಖ್ ಮೂಲಕ ಪತಿಯನ್ನು ದೂರಮಾಡಿಕೊಂಡ ಮಹಿಳೆಯು ಇದ್ದಃ ಆಚರಿಸಬೇಕೆ?*

ಉ : ಹೌದು. ಫಸ್ಕ್ ಮೂಲಕ ಪತಿ-ಪತ್ನಿ ಬೇರ್ಪಟ್ಟರೆ ಆ ಮಹಿಳೆಗೆ ಪುನಃ ವಿವಾಹವಾಗಲು ಮೂರು ಶುದ್ಧಿ ಕಾಲದ ಇದ್ದಾಚರಣೆ ಕಡ್ಡಾಯವಿದೆ. ಇದ್ದಃದ ವಿಷಯದಲ್ಲಿ ತ್ವಲಾಖ್ ನೀಡಲ್ಪಟ್ಟವರಿಗೂ, ಫಸ್ಖ್ ನೀಡಿದವಳಿಗೂ ನಡುವೆ ವ್ಯತ್ಯಾಸವಿಲ್ಲ. ■




ಮರ್ಸೀನ್ ಪಬ್ಲಿಕೇಶನ್ಸ್, ಮಂಗಳೂರು ಪ್ರಕಟಿಸಿರುವ
**ಅಲ್-ಹಜ್ಜ್**
ಲೇಖಕರು: ಕಾಂತಪುರ ಎ.ಪಿ. ಅಬೂಬಕರ್ ಮುಸ್ಲಿಯಾರ್
ಅನುವಾದಕರು: ಮುಹ್‌ಯಿದ್ದೀನ್ ಕಾಮಿಲ್ ಸಖಾಫಿ ತೋಕೆ
ಬೆಲೆ ರೂ. 180/-
ಪ್ರತಿಗಳಿಗಾಗಿ ಸಂಪರ್ಕಿಸಿರಿ ಅಥವಾ M.O. ಕಳಿಸಿರಿ
ಸಮರಾತ್ ಬುಕ್ಸ್, ಅಲ್‌ಅನ್ಸಾರ್ ಕಾರ್ಯಾಲಯ, ಕುತ್ತಾರ್, ಮಂಗಳೂರು-17.
Ph: 0824-2467886, Cell: 9480075704



بارك الله لكما **ಬಾರಕಲ್ಲಾಹು ಲಕುಮಾ...**

ದಿನಾಂಕ 6.10.2011ರಂದು ವೈವಾಹಿಕ ಜೀವನಕ್ಕೆ ಪ್ರವೇಶಿಸಲಿರುವ



**ಮುಸ್ತಫಾ ಖಲೀಲ್.ವಿ.**
ಮೇಗಿನಪೇಟೆ
(ಪ್ರಾಧ್ಯಾಪಕರು, ಪಿ.ಎ.ಕಾಲೇಜ್, ನಡುಪದವು)
ಹಾಗೂ
**ಫಾತಿಮಾ ಸಾಬಿರಾ**
(D/o. ಅಬ್ದುಲ್ ಖಾದರ್ ಪಾಣೆಮಂಗಳೂರು)

ಇವರ ವೈವಾಹಿಕ ಜೀವನವು ಸುಖ, ಕ್ಷೇಮ, ಸಕಲ ಐಶ್ವರ್ಯಗಳಿಂದ ಕೂಡಿ ಬೆಳಗಲಿ, ಎಂದು ಹಾರೈಸುವುದರೊಂದಿಗೆ ವೈವಾಹಿಕ ಬದುಕಿನ ಸವಿನೆನಪಿಗಾಗಿ ಒಂದು ವರ್ಷದ ಅಲ್‌ಅನ್ಸಾರ್ ಪತ್ರಿಕೆಯನ್ನು ಮ್ಯಾರೇಜ್ ಗಿಫ್ಟಾಗಿ ಕಳುಹಿಸಿಕೊಡುತ್ತಿದ್ದೇವೆ.

ಕೆ.ಎಸ್.ಮುಹಮ್ಮದ್ ಮರ್ದಾಳ (ಬಾವ)
ಫಾತಿಮತ್‌ಝುಹ್‌ರಾ (ಅಕ್ಕ)
ನೌಫಲ್, ನಾಫಿಯಾ, ಆಯಿಶತುನ್ನಿಸಾ (ಮಕ್ಕಳು)
ಹಾಗೂ ಕುಟುಂಬಸ್ಥರು

# ದೀಪ ಆರಿತು, ಬೆಳಕು ಉಳಿಯಿತು




ಸುಹಾಪಿತ

ಇಮಾಂ ಶಾಫಿಈ رضي الله عنه! ಜ್ಞಾನ ಜಗತ್ತಿನ ಅಸ್ತಮಾನವಿಲ್ಲದ ಸೂರ್ಯ. ಜಗತ್ತಿನ ಅಧಿಕೃತ ನಾಲ್ಕು ಕರ್ಮಶಾಸ್ತ್ರ ವಿದ್ವಾಂಸರಲ್ಲಿ ಅಗ್ರಗಣ್ಯರು. ಅವರು ಕೂಡಾ ಇರುವುದು ನಫೀಸಾ رضي الله عنها ರವರ ಊರಿನಲ್ಲಿ, ಮಿಸ್ರ್‌ನಲ್ಲಿ. ಅಂತಹ ಶಾಫಿಈ ಇಮಾಂ رضي الله عنه ನಫೀಸತುಲ್ ಮಿಸ್ರೀ رضي الله عنها ಯವರ ಅಭಿಮಾನಿಗಳಾಗಿದ್ದರೆಂದರೆ, ನಫೀಸಾ رضي الله عنها ರವರ ಹಿರಿಮೆ ಎಷ್ಟು ದೊಡ್ಡದಲ್ಲವೆ?

ಇಮಾಂ ಶಾಫಿಈ رضي الله عنه ನಫೀಸಾ رضي الله عنها ರವರಲ್ಲಿ ದುಆ ಮಾಡಿಸುತ್ತಿದ್ದರು. ರೋಗವೋ ಸಮಸ್ಯೆಗಳೋ ಬಂದಾಗ ಪರಿಹಾರ ಕೇಳಿ ಅವರ ಬಳಿಗೆ ದೂತರನ್ನು ಕಳುಹಿಸುತ್ತಿದ್ದರು. ದೂತರು ಮರಳಿ ಬರುವ ಮುನ್ನವೇ ರೋಗ ಶಮನವಾಗುತ್ತಿತ್ತು. ಸಮಸ್ಯೆ ಪರಿಹಾರವಾಗುತ್ತಿತ್ತು.

ಹಿಜ್‌ರಾ 204ರ ರಜಬ್ ತಿಂಗಳು. ಇಮಾಂ ಶಾಫಿಈ رضي الله عنه ಯವರಿಗೆ ರೋಗ ಕಾಣಿಸಿಕೊಂಡಿತು. ಎಂದಿನಂತೆ ರೋಗ ಶಮನಕ್ಕಾಗಿ ದುಆ ಮಾಡಿಸಲು ನಫೀಸಾ رضي الله عنها ರವರ ಬಳಿಗೆ ದೂತನನ್ನು ಕಳುಹಿಸಿದರು. ಆದರೆ ನಫೀಸಾ رضي الله عنها ರವರ ಅಂದಿನ ದುಆ ಹೊಸತಾಗಿತ್ತು. "ಉದಾರಿಯಾದ ಅಲ್ಲಾಹನನ್ನು ದರ್ಶಿಸಲು ಅವರಿಗೆ ಅವಕಾಶವಾಗಲಿ" ಎಂಬುದಾಗಿತ್ತು ಪ್ರಾರ್ಥನೆ!

ದೂತ ಹೋಗಿ ಈ ವಿಷಯವನ್ನು ಇಮಾಂ ಶಾಫಿಈ رضي الله عنه ರವರಿಗೆ ತಿಳಿಸಿದಾಗ, ತಮಗೆ ಮರಣ ಸನ್ನಿಹಿತವಾಗಿದೆ ಎಂದು ಅವರು ತಿಳಿದುಕೊಂಡರು. ಇನ್ನು ತಮಗಿರುವುದು ಶಮನವಲ್ಲ, ಮರಣ. ಅದಕ್ಕಾಗಿ ಅವರು ಸಿದ್ಧರಾದರು. ವಸಿಯ್ಯತ್‌ಗಳನ್ನು ಸಂಬಂಧಪಟ್ಟವರಿಗೆ ತಿಳಿಸಿದರು. 'ನನಗೆ ನಫೀಸಾ رضي الله عنها ರವರಿಂದಲೂ ಮಯ್ಯಿತ್ ನಮಾಝ್ ಮಾಡಿಸಬೇಕು" ಎಂಬ ವಿಶೇಷವಾದ ವಸಿಯ್ಯತ್ತನ್ನು ಕೂಡಾ ಅವರು ಹೇಳಿದ್ದರು. ಮಹಿಳೆಯೊಬ್ಬರಲ್ಲಿ ವಿಶ್ವ ವಿದ್ವಾಂಸ ಶಾಫಿಈ رضي الله عنه ಯವರು ಮಯ್ಯಿತ್ ನಮಾಝ್ ನಿರ್ವಹಿಸಲು ವಸಿಯ್ಯತ್ ಮಾಡುವುದೆಂದರೆ, ಅವರ ಆಧ್ಯಾತ್ಮಿಕ ಸ್ಥಾನಮಾನವನ್ನು ಶಾಫಿಈ رضي الله عنه ಅಷ್ಟು ಅರಿತಿರಬೇಕಲ್ಲವೆ! ಇಮಾಂ ಶಾಫಿಈ رضي الله عنه ವಫಾತ್ ಆದರು. ಮಯ್ಯಿತನ್ನು ಮಸೀದಿಯ ಖಬರ್‌ಸ್ಥಾನಕ್ಕಾಗಿ ಕೊಂಡೊಯ್ಯುವ ದಾರಿಯಲ್ಲಿ ನಫೀಸಾ رضي الله عنها ರವರ ಮನೆ ಬಳಿ ತಲುಪಿದಾಗ ನಫೀಸಾ رضي الله عنها ಮಯ್ಯಿತ್ ನಮಾಝ್ ನಿರ್ವಹಿಸಿ ಶಾಫಿಈ ಇಮಾಂ رضي الله عنه ರವರ ಬೇಡಿಕೆಯನ್ನು ಪೂರೈಸಿದರು.

ಅದಾಗಿ ಸರೀ ನಾಲ್ಕು ವರ್ಷ ಕಳೆಯಿತು. ಹಿಜ್‌ರಾ 208ರ ರಜಬ್ ತಿಂಗಳು. ನಫೀಸತುಲ್ ಮಿಸ್ರೀ رضي الله عنها ರೋಗ ಬಾಧಿತರಾದರು. ಅದಕ್ಕಿಂತಲೂ 2-3ವರ್ಷ ಮೊದಲೇ ಅವರು ಮರಣವನ್ನು ಸ್ವಾಗತಿಸುವ ಸಿದ್ಧತೆಯಲ್ಲಿದ್ದಿರಬೇಕು. ರಾತ್ರಿ ಹೊತ್ತು ತಮ್ಮ ಮನೆಯ ನೆಲವನ್ನು ಅಗೆಯುತ್ತಿದ್ದರು. ಯಾರ ಸಹಾಯವನ್ನು ಕೂಡಾ ಪಡೆಯದೆ ತಾವೊಬ್ಬರೇ ಅಗೆದು ಕೆಲವೇ ದಿನಗಳಲ್ಲಿ ಒಂದು ಗೋರಿಯನ್ನು ತೋಡಿದ್ದರು. ತಾವು ಮರಣ ಹೊಂದಿದರೆ ಮಲಗಬೇಕಾದ ಖಬ್‌ರನ್ನು ತಾವೇ ಸಿದ್ಧಪಡಿಸಿದ್ದರು! ಬಳಿಕ ಹೆಚ್ಚಿನ ವೇಳೆ ಅದರೊಳಗೆ ಸಮಯ ವ್ಯಯಿಸುತ್ತಿದ್ದರು. ನಮಾಝ್, ಖುರ್‌ಆನ್ ಪಾರಾಯಣಗಳೆಲ್ಲ ಅದರಲ್ಲೇ. ಅದರೊಳಗೆ ನಿಂತುಕೊಂಡು ನಮಾಝ್ ನಿರ್ವಹಿಸುತ್ತಲೇ 6000 ಖತ್ಮುಲ್ ಖುರ್‌ಆನ್ ಪೂರ್ತಿಗೊಳಿಸಿದ್ದರು!

ರಮಳಾನ್ ಆರಂಭವಾಗುವಷ್ಟರಲ್ಲಿ ರೋಗ ಇನ್ನಷ್ಟು ಉಲ್ಬಣಗೊಂಡಿತ್ತು. ಪತಿ ಇಸ್‌ಹಾಖುಲ್ ಮುಅ್‌ತಮಿನ್ ಮದೀನಾದಿಂದ ಬಂದಿದ್ದರು. ನಫೀಸಾ رضي الله عنها ರವರ ಸ್ಥಿತಿಗೆ ಅಲ್ಲಿದ್ದವರ ಕಣ್ಣುಗಳೆಲ್ಲ ಹನಿಗೂಡಿದವು. ಚಿಕಿತ್ಸೆಗಾಗಿ ಬಂದ ವೈದ್ಯರು ಉಪವಾಸ ಕೈಬಿಡಬೇಕೆಂದು ಸಲಹೆ ನೀಡಿದರು. ನಫೀಸಾ رضي الله عنها ಅದಕ್ಕೊಪ್ಪಲಿಲ್ಲ. "ಉಪವಾಸಿಗಳಾಗಿ ಮರಣ ಹೊಂದಬೇಕೆಂದು ಮೂವತ್ತು ವರ್ಷಗಳಿಂದ ಪ್ರಾರ್ಥಿಸುತ್ತಾ ಬಂದ ನಾನು ಈಗ ಉಪವಾಸ ತೊರೆಯಬೇಕೆ? ಸಾಧ್ಯವಿಲ್ಲ" ಎಂದುಬಿಟ್ಟರು. ಯಾರ ಒತ್ತಾಯವೂ ಫಲಿಸಲಿಲ್ಲ.

ಇನ್ನೂ ಕೆಲವು ದಿನಗಳು ಸರಿದವು. ರಮಳಾನಿನ ಕೊನೆಯ ಶುಕ್ರವಾರ ನಫೀಸಾ رضي الله عنها ಖುರ್‌ಆನ್ ಪಾರಾಯಣದಲ್ಲಿ ಮಗ್ನರಾಗಿದ್ದರು. ಸೂರಾ ಅಲ್‌ಅನ್‌ಆಂ. "ಅವರಿಗೆ ಅವರ ಪ್ರಭುವಿನ ಬಳಿ ಶಾಂತಿಯ ಭವನವಿದೆ" ಎಂಬರ್ಥದ ಶ್ಲೋಕವೊಂದಕ್ಕೆ ಪಾರಾಯಣ ತಲುಪಿತ್ತು. ಅಷ್ಟರಲ್ಲಿ ಪ್ರಜ್ಞೆ ತಪ್ಪಿತು. ಸೇವಕಿ ಝೈನಬ್ ಓಡೋಡಿ ಬಂದು ಎತ್ತಿ ಹಿಡಿದರು. ಪ್ರಜ್ಞೆಯಿತ್ತು. ಮುಖ ಪ್ರಶೋಭಿತವಾಗಿತ್ತು. ಸ್ವರ್ಗವನ್ನು ಕಂಡಂತಹ ಮಂದಹಾಸ. ನಾಲಗೆ ಕೊನೆಯದಾಗಿ ಚಲಿಸಿತು-ಲಾ ಇಲಾಹ ಇಲ್ಲಲ್ಲಾಹ್!

ಹಿಜ್‌ರಾ 208ರ ರಮಳಾನ್ ಮಾಸದ ಕೊನೆಯ ಶುಕ್ರವಾರ. ಈಜಿಪ್ತ್‌ನ ದಾರುಅಬೀ ಜಅ್‌ಫರ್‌ನಲ್ಲಿ, ಖಲೀಫಾ ಮಅ್‌ಮೂನರ ಕಾಲದಲ್ಲಿ ಅಮೀರ್ ಸಿರ್ರಿಬಿನ್ ಹಕಂ ದಾನ ನೀಡಿದ ಮನೆ. ಅಲ್ಲೇ ನಫೀಸತುಲ್ ಮಿಸ್ರೀ رضي الله عنها ತಮ್ಮ 63ನೇ ಪ್ರಾಯದಲ್ಲಿ ಬದುಕಿಗೆ ವಿದಾಯ ಕೋರಿದರು. ಈಜಿಪ್ತ್‌ನ ಜನತೆಗೆ ಸಿಡಿಲು ಬಡಿದ ಅನುಭವ. ಮಿಸ್ರ್‌ನ ಆಧ್ಯಾತ್ಮ ದೀಪ ಆರಿದ ವಾರ್ತೆ ಎಲ್ಲೆಡೆ ಹಬ್ಬಿ, ಆ ಪುಣ್ಯ ಮಹಿಳೆಯ ಮಯ್ಯಿತ್ ನಮಾಝ್‌ನಲ್ಲಿ ಪಾಲ್ಗೊಳ್ಳುವ ಪುಣ್ಯಕ್ಕಾಗಿ ಜನ ಹರಿದು ಬರತೊಡಗಿದರು. ನೈಲ್ ನದಿಯ ತೀರದಲ್ಲೊಂದು ಜನ ಪ್ರವಾಹ!

ಈ ನಡುವೆ ಅಲ್ಲೊಂದು ವಿವಾದ ಹುಟ್ಟಿತು. ಪತಿ ಇಸ್‌ಹಾಖ್, ಪತ್ನಿಯನ್ನು ಸ್ವಂತ ಊರು ಮದೀನಾದಲ್ಲಿ ದಫನ ಮಾಡಬೇಕೆಂದು ಹೇಳಿದರು. ಆದರೆ ಈಜಿಪ್ತ್‌ನವರಿಗೆ ಅವರನ್ನು ಬಿಟ್ಟು ಕೊಡಲು ಮನಸ್ಸಿರಲಿಲ್ಲ. ನಮ್ಮ ಊರಿಗೆ ಬಂದ ಭಾಗ್ಯ ಇಲ್ಲೇ ಇದ್ದು ನಾವು ಅನುಗ್ರಹೀತರಾಗಬೇಕೆಂದು ಅವರು ಬಯಸಿದರು. ಹಾಗೇ ವಾದ-ಪ್ರತಿವಾದ ನಡೆಯಿತು. ಈ ನಡುವೆ ಪತಿಗೆ ತುಸು ನಿದ್ದೆ ಆವರಿಸಿದಂತಾಯಿತು. ಆಗೊಂದು ಕನಸು. ಸಾಕ್ಷಾತ್ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ಸ್ವಪ್ನದರ್ಶನ! ನಫೀಸಾ رضي الله عنها ರವರ ದಫನದ ವಿಷಯದಲ್ಲಿ ಈಜಿಪ್ತ್‌ನವರೊಂದಿಗೆ ವಾದ ಬೇಡ ಎಂಬ ಸಲಹೆ! ಎಚ್ಚರಗೊಂಡ ಇಸ್‌ಹಾಖ್, ಪತ್ನಿಯನ್ನು ಈಜಿಪ್ತ್‌ನಲ್ಲೇ ದಫನ ಮಾಡೋಣ ಎಂದರು. ಎಲ್ಲರಿಗೂ ನೆಮ್ಮದಿಯಾಯಿತು.

ಈಜಿಪ್ತ್ ಹಲವು ಮಹಾತ್ಮರ ಸಾನಿಧ್ಯದಿಂದ ಅನುಗ್ರಹೀತವಾದ ಮಣ್ಣು. ಆ ಸಾಲಿಗೀಗ ಮತ್ತೊಂದು ಸೇರ್ಪಡೆ ನಫೀಸತುಲ್ ಮಿಸ್ರೀ رضي الله عنها ಯವರ ಮಖ್‌ಬರ. ನಫೀಸಾ رضي الله عنها ರವರ ಹಿರಿಮೆಗೆ ದೃಕ್ ಸಾಕ್ಷಿಯಾಗಿದ್ದ ಈಜಿಪ್ತ್ ಅಮೀರ್ ಸಿರ್ರ್‌ಬಿನ್ ಹಿಕಂರವರೇ ಮೊದಲು ಅವರ ದರ್ಗಾ ಶರೀಫ್ ನಿರ್ಮಿಸಿದರು. ಆ ಮಖ್‌ಬರದ ಪ್ರವೇಶ ದ್ವಾರದ ಮೇಲೊಂದು ಸುಂದರವಾದ ಖುಬ್ಬ ಇದೆ. ಅದನ್ನು ನಿರ್ಮಿಸಿದವರು ಖಲೀಫಾ ಅಲ್ ಹಾಫಿಳ್ ದ್ದೀನು ಲ್ಲಾಹ್, ಹಿಜ್‌ರಾ 532ರಲ್ಲಿ. ಭವ್ಯ ಮನೋಹರವಾದ ನಫೀಸಾ رضي الله عنها ರವರ ದರ್ಗಾ ಶರೀಫ್ ಸದಾ ಜನಸಂದರ್ಶನದಿಂದ ಗಿಜಿಗುಟ್ಟುವ ಜಾಗ. ಹತ್ತು ಹಲವು ಹರಕೆ, ಹಾರೈಕೆಗಳೊಂದಿಗೆ ಬರುವ ನೊಂದ ಜನರ ಆಶ್ರಯ ಕೇಂದ್ರ. ನಫೀಸಾ رضي الله عنها ರವರ ದರ್ಗಾ ಸಂದರ್ಶಿಸಿ, ಅವರನ್ನು ತವಸ್ಸುಲ್ ಮಾಡಿ ಅಲ್ಲಾಹನಲ್ಲಿ ಪ್ರಾರ್ಥಿಸುವ ಮೂಲಕ ಬೇಡಿಕೆ ಈಡೇರಿಸಿಕೊಂಡವರಲ್ಲಿ ದೊಡ್ಡ ದೊಡ್ಡ ಮಹಾತ್ಮರಿದ್ದಾರೆ. ಇಮಾಂ ಮುಅ್‌ಮಿನ್ ಬಿನ್ ಹಸನ್ ಅಶ್ಶಬ್ ಲಂಜಿ رضي الله عنه ಅವರಲ್ಲೊಬ್ಬರು. ಶಬ್ ಲಂಜಿಯವರು ಕಣ್ಣಿನ ಸಮಸ್ಯೆ ನಿವಾರಣೆಗಾಗಿ ನಫೀಸಾ رضي الله عنها ರವರ ಮಖ್‌ಬರ ಝಿಯಾರತ್ ಮಾಡಿ, ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ಕುಟುಂಬದ ಬಗ್ಗೆ ಗ್ರಂಥ ರಚಿಸುವುದಾಗಿ ಹರಕೆ ಮಾಡಿದ್ದರು. ಹಾಗೇ, 'ನೂರುಲ್ ಅಬ್‌ಸಾರ್ ಫೀ ಮನಾಖಿಬಿ ಆಲು ಬೈತಿನ್ನಬಿಯ್ಯಿಲ್ ಮುಖ್ತಾರ್' ಎಂಬ ಗ್ರಂಥವನ್ನು ರಚಿಸಿ ದ್ದಾರೆ. ಹೀಗೆ ಎಷ್ಟೆಷ್ಟು ಅನುಭವಗಳು!

ಔಲಿಯಾ ಜಗತ್ತಿನಲ್ಲಿ ಅತ್ಯಂತ ಪ್ರಭಾವಶಾಲಿ ಮಹಿಳಾ ಮಣಿಯೆನಿಸಿ, ಮುಸ್ಲಿಂ ಜಗತ್ತಿನ ಮನಸ್ಸುಗಳಲ್ಲಿ ವಿರಾಜಮಾನರಾಗಿರುವ ನಫೀಸತುಲ್ ಮಿಸ್ರೀ رضي الله عنها ರವರ ಬರ್ಕತ್‌ನಿಂದ ಅಲ್ಲಾಹು ನಮಗೆಲ್ಲ ಒಳಿತು ನೀಡಲಿ, ಆಮೀನ್. (ಮುಗಿಯಿತು)

# ಹಜ್ ಮುಅ್‌ಮಿನ್ ಮದೀನಾಕ್ಕೆ

←7ನೇ ಪುಟದಿಂದ

ಹಜ್‌ನ ಸಂದರ್ಭದಲ್ಲಿ ಸತ್ಯವಿಶ್ವಾಸಿಗೆ ಸಿಗುವ ಮತ್ತೊಂದು ಮಹಾಭಾಗ್ಯ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ಝಿಯಾರತ್. ಸತ್ಯವಿಶ್ವಾಸಿಯ ನಿತ್ಯ ಆಸರೆಯಾದ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಸಂದರ್ಶಿಸುವ ಸೌಭಾಗ್ಯಕ್ಕೆ ಹಾತೊರೆಯದವರ ಸತ್ಯವಿಶ್ವಾಸವೇ ಸಂದೇಹಾಸ್ಪದ. ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ಝಿಯಾರತ್ ಅತ್ಯಂತ ಪುಣ್ಯಕರ ಆರಾಧನೆ.

ಹಜ್ ಮಾಡಿ ನನ್ನ ಮರಣಾನಂತರ ನನ್ನ ಖಬ್‌ರನ್ನು ಝಿಯಾರತ್ ಮಾಡಿದವನು ನನ್ನನ್ನು ಜೀವನಕಾಲದಲ್ಲಿ ಸಂದರ್ಶಿಸಿದವನಂತೆ. (ಬೈಹಖಿ) ಉದ್ದೇಶಪೂರ್ವಕ ನನ್ನನ್ನು ಸಂದರ್ಶಿಸಿದವನು ಪರಲೋಕದಲ್ಲಿ ನನ್ನ ಆಶ್ರಯದಲ್ಲಿರುವನು. ಮದೀನಾದಲ್ಲಿ ತಂಗಿ, ಅಲ್ಲಿ ಎದುರಾಗುವ ಸಮಸ್ಯೆಗಳನ್ನು ಸಹಿಸಿದವನಿಗೆ ಪರಲೋಕದಲ್ಲಿ ನಾನು ಸಾಕ್ಷಿಯೂ ಶಿಫಾರಸ್ಸುದಾರನೂ ಆಗುವೆನು (ಮಿಶ್ಕಾತ್) ಎಂದಿರುವ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಯಾರಾದರೂ ಹಜ್ ಮಾಡಿ ನನ್ನ ಝಿಯಾರತ್ ಮಾಡದಿದ್ದರೆ ಅವನು ನನ್ನೊಂದಿಗೆ ಜಗಳವಾಡಿದಂತೆ ಎಂದು ಎಚ್ಚರಿಸಿದ್ದಾರೆ.

'ಹಾವು ಬಿಲಕ್ಕೆ ಮರಳಲು ಹಾತೊರೆಯುವಂತೆ ಈಮಾನ್ ಮದೀನಾಕ್ಕೆ ಮರಳುವುದು' ಎಂದಿದ್ದಾರೆ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು. ಈಮಾನ್ ಇರುವವರು ಮದೀನಾಕ್ಕೆ ಹೋಗಲೇಬೇಕಲ್ಲವೇ? ಮುಗುಳ್ನಗುವ ನಗರ ಮದೀನಾಕ್ಕೆ ಪ್ರಾರ್ಥನಾ ಮನಸ್ಸಿನೊಂದಿಗೆ ಪ್ರವೇಶಿಸಬೇಕು.

ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅತ್ಯಂತ ಶಿಸ್ತುಬದ್ಧವಾಗಿ, ಪೂರ್ಣ ಗೌರವದಿಂದ ಮೆಲುದನಿಯಲ್ಲಿ ಸಲಾಂ ಹೇಳುವುದು, ಸೂಕ್ತ ಸ್ಥಳದಲ್ಲಿ ನಿಂತು ಖುರ್‌ಆನ್, ಸಲಾತ್‌ಗಳನ್ನು ಸಮರ್ಪಿಸಿ ಪ್ರಾರ್ಥಿಸುವುದು, ಅಬೂಬಕರ್ رضي الله عنه, ಉಮರ್ رضي الله عنه ಹಾಗೂ ಜನ್ನತುಲ್ ಬಖೀಅ್‌ನಲ್ಲಿರುವ ಸ್ವಹಾಬೀ ಮಹಾತ್ಮರುಗಳ ಝಿಯಾರತ್ ನಡೆಸುವುದು, 'ಸ್ವರ್ಗ ದೋಟ'ವೆಂದು ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿರುವ, ಖಬ್‌ರ್ ಶರೀಫ್ ಮತ್ತು ಮಿಂಬರ್‌ಗಳ ನಡುವೆ ಪ್ರತ್ಯೇಕ ಗುರುತಿಸಲ್ಪಟ್ಟಿರುವ ಜಾಗದಲ್ಲಿ ನಮಾಝ್ ನಿರ್ವಹಿಸಲು ಪ್ರಯತ್ನಿಸುವುದು, ಮದೀನಾ ಮಸೀದಿಯಲ್ಲಿ ಗರಿಷ್ಠ ಪ್ರಮಾಣದಲ್ಲಿ ಇಅ್‌ತಿಕಾಫ್ ಇರುವುದು

ಇತ್ಯಾದಿಗಳನ್ನು ನಡೆಸಬೇಕು. ಮದೀನಾ ಮಸೀದಿಯ ಆರಾಧನೆಗೆ ಇತರ ಮಸೀದಿಗಳ ಆರಾಧನೆಗಿಂತ 10,000 ಅಧಿಕ ಪುಣ್ಯವಿದೆ.

ಮದೀನಾದ ಮಸೀದಿಯಲ್ಲಿ ನಿರಂತರ 40 ವಖ್ತ್ ನಮಾಝುನ್ನು ಜಮಾಅತ್ ಆಗಿ ನಿರ್ವಹಿಸುವವನಿಗೆ ನರಕಮೋಚನೆ ಇದೆ ಎಂಬುದಾಗಿ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾರೆ. ಹಾಗಾಗಿ ಅಲ್ಲಿರುವ 8 ದಿನಗಳಲ್ಲಿ ಒಂದೇ ಹೊತ್ತಿನ ಜಮಾಅತ್ ಕೂಡಾ ತಪ್ಪದಂತೆ ಪುರುಷರು ಜಾಗ್ರತೆ ವಹಿಸಬೇಕು.

(ಕೊನೇ ಪುಟಕ್ಕೆ)

ಒಂದೇ ಪ್ರಶ್ನೆ 1

252

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕನ್ನಡಿಗರಲ್ಲಿ ಅತ್ಯಂತ ಕೊನೆಯವರು ಯಾರು?

ಉತ್ತರಕ್ಕೆ ಕೊನೇ ದಿನ 5.10.11

ಒಂದೇ ಪ್ರಶ್ನೆ-250ರ ಸರಿಯುತ್ತರ

ಪಶ್ಚಿಮ ಬಂಗಾಳ ರಾಜ್ಯದ ನೂತನ ಹೆಸರೇನು?

**ಪಶ್ಚಿಮ ಬಂಗ**

## ಕಿನ್ಯದಲ್ಲಿ ಹಜ್ ತರಬೇತಿ

ದೇರಳಕಟ್ಟೆ : ಕಿನ್ಯಾ ಶಾಖಾ ಎಸ್ಸೆಸ್ಸೆಫ್ ವತಿಯಿಂದ ಹಜ್ ತರಬೇತಿ ನಡೆಯಿತು. ಜಿ.ಎಂ. ಕಾಮಿಲ್ ಸಖಾಫಿ ತರಗತಿ ನಡೆಸಿದರು. ಹಾರೂನ್ ಅಹ್ಸನಿ ಅಧ್ಯಕ್ಷತೆಯಲ್ಲಿ ಇಝ್ಝುದ್ದೀನ್ ಅಹ್ಸನಿ ಉದ್ಘಾಟಿಸಿದರು. ಅಶ್ರಫ್ ಸಖಾಫಿ ಕನ್ನಂಗಾರ್ ಶುಭ ಕೋರಿದರು.

## ಎಸ್ಸೆಸ್ಸೆಫ್ ಕ್ಯಾಂಪಸ್ ಮೀಟ್

ಮಂಗಳೂರು: ನಗರದ ವಿವಿಧ ಕಾಲೇಜ್‌ಗಳ ವಿದ್ಯಾರ್ಥಿ ಪ್ರತಿನಿಧಿಗಳ ಸಂಗಮವು ಜಂಇಯ್ಯತುಲ್ ಉಲಮಾ ಕಛೇರಿಯಲ್ಲಿ ನಡೆಯಿತು. ರಾಜ್ಯ ಎಸ್ಸೆಸ್ಸೆಫ್ ಕ್ಯಾಂಪಸ್ ಕೌನ್ಸಿಲ್ ಚೇರ್‌ಮ್ಯಾನ್ ಎಂ.ಬಿ.ಹಮೀದ್ ಮಡಿಕೇರಿ ಅಧ್ಯಕ್ಷತೆಯಲ್ಲಿ ಜಿ.ಎಂ. ಕಾಮಿಲ್ ಸಖಾಫಿ ಉದ್ಘಾಟಿಸಿದರು. ಸಿದ್ದೀಖ್ ಕೆ.ಎಂ. ಮೋಂಟುಗೋಳಿ ತರಗತಿ ನಡೆಸಿದರು.

ರಾಜ್ಯ ವಕ್ಫ್ ಬೋರ್ಡ್ ಸದಸ್ಯ ಶಾಫೀ ಸಅದಿ ಬೆಂಗಳೂರು, ಎಸ್ಸೆಸ್ಸೆಫ್ ಪ್ರಮುಖ ಹಮೀದ್ ಬಜ್ಪೆ ಮಾತನಾಡಿದರು. ರಾಜ್ಯ ಕಾರ್ಯದರ್ಶಿ ಎಂಬಿಎಂ ಸ್ವಾದಿಖ್, ಜಿಲ್ಲಾ ನಾಯಕರಾದ ಇಸ್ಹಾಖ್ ಝುಹ್ರಿ, ಇಸ್ಮಾಈಲ್ ಮಾಸ್ಟರ್ ಮಂಗಳಪದವು, ಹಾಫಿಳ್ ಯಅ್‌ಕೂಬ್ ಸಅದಿ, ಹಾಜಿ ಅಬ್ದುರ್ರಹ್ಮಾನ್ ಉಪಸ್ಥಿತರಿದ್ದರು. ಕ್ಯಾಂಪಸ್ ಕನ್ವೀನರ್ ಫೈಝುಲ್ ಕೃಷ್ಣಾಪುರ ಸ್ವಾಗತಿಸಿ, ಫಾರೂಖ್ ರೊಝಾರಿಯೋ ಧನ್ಯವಾದವಿತ್ತರು.

## ಮೂಡುಗೋಪಾಡಿಯಲ್ಲಿ ಅಧ್ಯಯನ ತರಗತಿ

ಕುಂದಾಪುರ: ಮೂಡುಗೋಪಾಡಿ ಶಾಖಾ ಎಸ್ಸೆಸ್ಸೆಫ್ ವತಿಯಿಂದ ಅಧ್ಯಯನ ತರಗತಿ ನಡೆಯಿತು. ಖತೀಬ್ ಟಿ.ಎಂ.ಮುಸ್ತಫಾ ಸಖಾಫಿ ಅಧ್ಯಕ್ಷತೆಯಲ್ಲಿ ಸದರ್ ಅಬೂಬಕರ್ ಸಖಾಫಿ ಉದ್ಘಾಟಿಸಿದರು. ಎಸ್ಸೆಸ್ಸೆಫ್ ರಾಜ್ಯ ಉಪಾಧ್ಯಕ್ಷ ಸಿದ್ದೀಖ್ ಕೆ.ಎಂ. ಮೋಂಟುಗೋಳಿ ತರಗತಿ ನಡೆಸಿದರು. ಜಮಾಅತ್ ಮಾಜಿ ಅಧ್ಯಕ್ಷ ಜಿ.ಮುಹಮ್ಮದ್, ಕಾರ್ಯದರ್ಶಿ ಬಿ.ಎಂ. ನಾಸಿರ್, ಭಂಡಾರ್ಕಾರ್ಸ್ ಕಾಲೇಜ್ ಉಪನ್ಯಾಸಕ ಇಕ್ಬಾಲ್ ಮಾಚಾರ್, ಜಿಲ್ಲಾ ಉಪಾಧ್ಯಕ್ಷರಾದ ಅಡ್ವಕೇಟ್ ಇಲ್ಯಾಸ್ ನಾವುಂದ, ರವೂಫ್ ಖಾನ್ ಮೊದಲಾದವರು ಉಪಸ್ಥಿತರಿದ್ದರು. ಹಸೈನಾರ್ ಸ್ವಾಗತಿಸಿ, ನವಾಝ್ ಧನ್ಯವಾದವಿತ್ತರು.

## ಕೂರತ್ ತಂಙಳ್‌ಗೆ ಸನ್ಮಾನ

ಬೆಳ್ತಂಗಡಿ: ಉಳ್ಳಾಲ ಸಹಾಯಕ ಖಾಝಿ ಅಸ್ಸಯ್ಯಿದ್ ಫಝುಲ್ ಕೋಯಮ್ಮ ತಂಙಳ್‌ರವರನ್ನು ಉರುವಾಲು ಪದವಿನಲ್ಲಿ ಸನ್ಮಾನಿಸಲಾಯಿತು. ಮುದರ್ರಿಸ್ ಇಬ್ರಾಹೀಂ ಸಅದಿ ಸಭೆಯನ್ನು ಉದ್ಘಾಟಿಸಿದರು. ಎಸ್‌ವೈಎಸ್ ರಾಜ್ಯ ಕಾರ್ಯದರ್ಶಿ ಜಿ.ಎಂ.ಕಾಮಿಲ್ ಸಖಾಫಿ, ಉಮರ್ ಮುಸ್ಲಿಯಾರ್ ಮರ್ದಾಳ ಶುಭ ಹಾರೈಸಿದರು. ಜಮಾಅತ್ ಪರವಾಗಿ ಪಿ.ಕೆ.ಅಬ್ದುಲ್ಲ, ಎಸ್‌ವೈಎಸ್ ವತಿಯಿಂದ ಟಿ.ಕೆ.ಸುಲೈಮಾನ್, ಎಸ್ಸೆಸ್ಸೆಫ್ ನಿಂದ ಶಕೀರ್ ಸನ್ಮಾನಿಸಿದರು. ಇಬ್‌ರಾಹೀಂ ಸಅದಿ, ಪಿ.ಕಾಸಿಂ ಪದ್ಮುಂಜ, ಅಬ್ಬಾಸ್ ಬಟ್ಲಡ್ಕ, ಅಬ್ದುಲ್ ಹಮೀದ್, ಅಬ್ದುಲ್ ಖಾದಿರ್ ಮುಸ್ಲಿಯಾರ್, ಆದಂ ಮತ್ತಿತರರು ಉಪಸ್ಥಿತರಿದ್ದರು. ಜಮಾಅತ್ ಕಾರ್ಯದರ್ಶಿ ಅಬ್ಬಾಸ್ ಸ್ವಾಗತಿಸಿದರು.

## ಮಯ್ಯಿತ್ ನಮಾಝ್

ಕೆ.ಪಿ.ಅಬ್ದುಲ್ ಹಮೀದ್ ಕಲ್ಲೆಗ, ಪುತ್ತೂರು
ಅಬ್ದುರ್ರಹ್ಮಾನ್ ಪಂಜಿಮೊಗರು, ಕೂಳೂರು
ವೈ.ಬಿ.ಯೂಸುಫ್ ಕೋಟೆ, ಸೂರಿಂಜೆ
ರುಖಿಯಾ ಬೀವಿ ಬದ್ರಿಯಾನಗರ
ಸುಲೈಮಾನ್ ಹಾಜಿ ಆತೂರು
ಸುಮಯ್ಯ ಮಂಜನಾಡಿ
ಅತಿಜಮ್ಮ ನಾವೂರು
ಫಾತಿಮಾ ಪಡುಬಿದ್ರಿ
ಮೂಸಾ ನೆಲ್ಲಿಗುಡ್ಡೆ
ಆಮಿನಾಬಿ ಬೆಳ್ಳಾರೆ
ಆರೀಫ್ ಉಪ್ಪಳ
ಬೇಬಿ ಬೇಂಗಿಲ

## ಮಲ್‌ಜಅ್ ಅಬೂದಾಬಿ ಸಮಿತಿ ಅಸ್ತಿತ್ವಕ್ಕೆ

ಅಬೂದಾಬಿ : ದ.ಕ.ಜಿಲ್ಲೆಯ ಬೆಳ್ತಂಗಡಿ ಉಜಿರೆ ಪ್ರದೇಶದಲ್ಲಿ ಬಡ, ನಿರ್ಗತಿಕ, ಅನಾಥ, ಅಂಗವಿಕಲರ ಅಭಯ ಕೇಂದ್ರವಾಗಿ ಕಾರ್ಯ ನಿರತವಾಗಿರುವ ಮಲ್‌ಜಅ್ ಸಂಸ್ಥೆಯ ಅಬೂದಾಬಿ ಸಮಿತಿಯನ್ನು ರಚಿಸಲಾಯಿತು. ಸಾಮಾಜಿಕ ಕಾರ್ಯಕರ್ತ ಅಬ್ದುಲ್ಲ ಹಾಜಿ ಚಿತ್ತಾರಿ ಉದ್ಘಾಟಿಸಿದರು. ಮಲ್‌ಜಅ್ ಯುಎಇ ಕೇಂದ್ರ ಸಮಿತಿ ಉಪಾಧ್ಯಕ್ಷ ಅಬ್ದುಲ್ ಹಮೀದ್ ಗಂಟಾಲ್‌ಕಟ್ಟೆ, ನಝೀರ್ ವೇಣೂರು ಮುಂತಾದವರು ಉಪಸ್ಥಿತರಿದ್ದರು. ಈ ಕೆಳಗಿನಂತೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಹಾಜಿ ಅಬ್ದುಲ್ಲ ಚಿತ್ತಾರಿ, ಅಬೂಬಕರ್ ಸಿದ್ದೀಖ್ ಕೆ.ಸಿ.ರೋಡ್ (ನಿರ್ದೇಶಕರು) ಸಯ್ಯಿದ್ ಅಥಾವುಲ್ಲಾಹ್ ತಂಙಳ್, ಉದ್ಯಾವರ (ಅಧ್ಯಕ್ಷರು), ಹಸೈನಾರ್ ಅಮಾನಿ, ಹಂಝ ಹಾಜಿ ಪೂಚಕ್ಕಾಡ್ (ಉಪಾಧ್ಯಕ್ಷರು), ಇಂಜಿನಿಯರ್ ಉಮರ್ ಬದ್ಯಾರ್ (ಪ್ರ.ಕಾರ್ಯದರ್ಶಿ), ನಝೀರ್ ವೇಣೂರು, ಶಂಸುದ್ದೀನ್ ವಡಗರ, ರಫೀಖ್ ಜೌಹರಿ (ಜತೆ ಕಾರ್ಯದರ್ಶಿಗಳು), ಹಾಜಿ ಇಸ್ಮಾಈಲ್ ನಾಳ (ಕೋಶಾಧಿಕಾರಿ) ಹಾಗೂ 15 ಕಾರ್ಯಕಾರಿ ಸದಸ್ಯರು. ಕೆ.ಎಸ್.ಮಹ್‌ಬೂಬುರ್ರಹ್ಮಾನ್ ಸಖಾಫಿ ಕಿನ್ಯ ಸ್ವಾಗತಿಸಿದರು.

## ಮಂಜೇರಿ: ಮುಹ್ಯಿಸ್ಸುನ್ನಃ ಸಾರಥಿಗಳು

ಮಲಪ್ಪುರಂ : ಹಿರಿಯ ವಿದ್ವಾಂಸರಾದ ಪೊನ್ಮಳ ಅಬ್ದುಲ್ ಖಾದಿರ್ ಮುಸ್ಲಿಯಾರ್ ಸಾರಥ್ಯದಲ್ಲಿ ಮುನ್ನಡೆಯುತ್ತಿರುವ ಪ್ರತಿಷ್ಠಿತ ವಿದ್ಯಾ ಸಂಸ್ಥೆ ಜಾಮಿಅಃ ಹಿಕಮಿಯ್ಯಃ ಶರೀಅತ್ ಕಾಲೇಜ್ ಮಂಜೇರಿಯ ವಿದ್ಯಾರ್ಥಿ ಸಂಘಟನೆ ಮುಹ್ಯಿಸ್ಸುನ್ನಃದ ಮಹಾಸಭೆಯು ಮುದರ್ರಿಸ್ ಅಲವಿ ಸಖಾಫಿ ಕೊಳತ್ತೂರು ಅಧ್ಯಕ್ಷತೆಯಲ್ಲಿ ನಡೆದು ಹೊಸ ಪದಾಧಿಕಾರಿಗಳನ್ನು ಆರಿಸಲಾಯಿತು. ಚೇರ್‌ಮೆನ್: ಖಾಲಿದ್ ನಿಝಾಮಿ ಕಣ್ಣೂರು, ವೈಸ್ ಚೇರ್‌ಮ್ಯಾನ್: ಹಾಫಿಳ್ ಎಚ್.ಐ.ಸುಫ್ಯಾನ್ ಮೂಡಬಿದ್ರೆ, ಕನ್ವೀನರ್: ಹಾಫಿಳ್ ಅಬ್ಬಾಸ್ ಪಾಲಕ್ಕಾಡ್, ಕನ್ನಡವೇದಿಕೆ ಕನ್ವೀನರ್: ಅರ್ಶದ್ ಚಿಕ್ಕಮಗಳೂರು, ಕನ್ನಡ ಹಸ್ತಲಿಪಿ ಸಂಪಾದಕ: ಉಮರುಲ್ ಫಾರೂಖ್ ಕಾಟಿಪಳ್ಳ, ಪ್ರಕಾಶಕರು: ಜಿ.ಎಂ.ಶಫೀಖ್ ಪಾಣೆಮಂಗಳೂರು, ಅಮೀರ್: ರಶೀದ್ ರಂತಡ್ಕ, ಶಮೀರ್ ಬೈತಡ್ಕ.


## ಸಮರಾತ್ ಬುಕ್ಸ್ ಕುತ್ತಾರ್

| | |
|---|---|
| ಅಲ್ ಫಾತಿಹಾ | 30.00 |
| ಹೃದಯ ದೀಪ | 30.00 |
| ಶಹೀದ್ಯೈನಿ | 30.00 |
| ದ್ವೀಪ ಸೇರಿದ ದೀಪ | 20.00 |
| ಒಲವಿನ ತಂಗಿಗೆ | 40.00 |
| ಮುಸಾಫಿರನ ಸ್ವಗತಗಳು | 50.00 |
| ಪ್ರವಾದಿ ﷺ ರ ಬಗ್ಗೆ 50 ಪ್ರಶ್ನೋತ್ತರ | 25.00 |
| ಖುರ್‌ಆನ್ ಕನ್ನಡ ವ್ಯಾಖ್ಯಾನ | 800.00 |
| ಪ್ರವಾದಿ ಚಿಕಿತ್ಸೆ | 50.00 |
| ಸ್ವಲಾತ್ ಮೂಲಕ ಪ್ರವಾದಿ ದರ್ಶನ | 50.00 |
| ಪ್ರವಾದಿ ﷺ ರ ಬರ್ಕತ್‌ಗಳು | 20.00 |
| ಮುತ್ತು ನಬಿರೆ ಮುತ್ತು ಪಲಕ | 20.00 |
| ಸೆರೆಮನೆಯಲ್ಲಿ ಸುಲ್ತಾನ | 25.00 |
| ಲಾ ಇಲಾಹ ಇಲ್ಲಲ್ಲಾಹ್ | 20.00 |
| ಸೂರತುಲ್ ಅಲ್‌ಕಹ್ಫ್ | 50.00 |
| ಸುನ್ನತ್ ನಮಾಝ್‌ಗಳು | 40.00 |
| ಇಸ್ಲಾಮಿನ ಮೂರನೇ ಖಲೀಫ ಹಝ್ರತ್ ಉಸ್ಮಾನ್ رضي الله عنه | 25.00 |
| ಹಝ್ರತ್ ಬಿಲಾಲ್ رضي الله عنه | 25.00 |
| ಹಝ್ರತ್ ಉಮರುಲ್ ಫಾರೂಖ್ رضي الله عنه | 20.00 |
| ಉಮ್ರಾ ಮಾರ್ಗದರ್ಶಿ | 35.00 |
| ಸಾಂದರ್ಭಿಕ 313 ದ್ಸಿಕ್ರ್ ದುಆಗಳು | 40.00 |
| ಸಲಿಂಗರತಿ ಇಸ್ಲಾಮೀ ದೃಷ್ಟಿಕೋನ | 30.00 |
| ಬೀವಿ ಆಶೂರಾ | 25.00 |
| ಹಂಝತುಲ್ ಕರ್‍ರಾರ್ رضي الله عنه | 20.00 |
| ಇಮಾಮ್ ಅಹ್ಮದುಬ್ನು ಹಂಬಲ್ رضي الله عنه | 13.00 |
| ಮಂಕೂಸ್ ಮೌಲಿದ್ ಕನ್ನಡದಲ್ಲಿ | 10.00 |
| ನರಕದ ಆರು ನಾರಿಯರು | 20.00 |
| ಫಿಕ್ಹ್ ಪಾಠಗಳು | 20.00 |
| ಪ್ರೇಮಾನುಭವ | 30.00 |
| ಮಹಿಳೆ ತಿಳಿದಿರಬೇಕಾದ 40 ಕಾರ್ಯಗಳು | 20.00 |
| ಅಂದದ ಮಕ್ಕಳಿಗೆ ಚಂದದ ಹೆಸರು | 40.00 |
| ಮುರಿಯದ ದಾಂಪತ್ಯ ಸಂಬಂಧ | 20.00 |
| ಒಂದು ಹೆಣ್ಣಿಗಾಗಿ... | 20.00 |
| ಮನೆಯಲ್ಲೇ ಬ್ಯೂಟಿಪಾರ್ಲರ್ | 20.00 |
| ಮಾತಾಪಿತರ ಹಕ್ಕುಗಳು | 20.00 |
| ಅರಮನೆ ತೊರೆದ ಸುಲ್ತಾನ | 25.00 |
| ಮುತ್ತು ಪೇಟೆ ಕರಾಮತ್ತುಗಳು | 25.00 |
| ಅಲ್ಲಾಹುವಿನ 99 ನಾಮಗಳು | 15.00 |
| ಜೇನುತುಪ್ಪದ ಔಷಧೀಯ ಗುಣಗಳು | 20.00 |
| ಮನೆಮನೆಗಳಿಗೆ ಒಂದು ಉತ್ತಮ ಕೈಪಿಡಿ ಮನೆ ಮದ್ದುಗಳು | 25.00 |
| ಮಕ್ಕಳ ಸಂರಕ್ಷಣೆ ಹೇಗೆ | 30.00 |
| ಭಯೋತ್ಪಾದ, ಉಗ್ರವಾದ, ಜಿಹಾದ್ | 15.00 |
| ಇಸ್ಲಾಮಿನಲ್ಲಿ ಮದುವೆ | 10.00 |
| ಸಂಪೂರ್ಣ ನಮಾಝ್ | 30.00 |
| ನಮಾಜಿನ ರೂಪ | 10.00 |
| ಇಸ್ಲಾಂ ಗುರುನಾನಕರ ದೃಷ್ಟಿಯಲ್ಲಿ | 20.00 |
| ರಮಳಾನ್ ಮತ್ತು ಝಕಾತ್ ನೂರಾರು ಪ್ರಶ್ನೋತ್ತರಗಳು | 40.00 |

| | |
|---|---|
| ರಮಾಳಾನ್ ಕೈ ಪಿಡಿ | 20.00 |
| ಹದ್ದಾದ್ ಅರ್ಥ ಮತ್ತು ವ್ಯಾಖ್ಯಾನ | 10.00 |
| ಖುರ್‌ಆನ್ ಹದೀಸ್‌ನಲ್ಲಿ ವರದಿಯಾದ ದುಆ | 20.00 |
| ಸಂಧರ್ಭೋಚಿತ ದುಆ | 20.00 |
| ಶಅರೇ ಮುಬಾರಕ್ | 20.00 |
| ಸೂಫಿಗಳು ನಡೆದು ಬಂದ ದಾರಿ | 30.00 |
| ಮಂಝಿಲ್ | 25.00 |
| ಶೈಖ್ ಜೀಲಾನೀ | 10.00 |
| ಹದೀಸ್ ಕಲಿಸಿದ ಕಥೆ | 30.00 |
| ಝಕಾತ್ ಅಧ್ಯಯನ ಚರ್ಚೆ - ಪ್ರಶ್ನೋತ್ತರ ಸಿ.ಡಿ | 25.00 |
| ಪ್ರವಾದಿ ಜೀವನ ಸಂದೇಶ 4 CD | 120.00 |
| ನೈಜ ಸುನ್ನತ್ ಜಮಾಅತ್ ಮತ್ತು ಸಲಫಿ ಪ್ರಸ್ಥಾನ ಸಿ.ಡಿ | 60.00 |
| ರಮಳಾನಿನ ದ್ಸಿಕ್ರ್ ದುಆಗಳು | 10.00 |
| ಮೌಲಿದ್ ಕಿತಾಬ್ ಕನ್ನಡದಲ್ಲಿ | 60.00 |
| ಮಂಕೂಸ್ ಮೌಲಿದ್ ಅರ್ಥ ಮತ್ತು ವ್ಯಾಖ್ಯಾನ | 25.00 |
| ನಮ್ಮ ದಿನಚರಿ | 20.00 |
| ದೇಶಭಕ್ತಿಗೀತೆ | 10.00 |
| ಇಸ್ಲಾಂ ಆದರ್ಶ ಗೈಡ್ | 20.00 |
| ಯಾಸೀನ್ ಅರ್ಥ ಮತ್ತು ವ್ಯಾಖ್ಯಾನ | 10.00 |
| ನಾರಿಯತ್ತ್ ಸ್ವಲಾತ್ ಅರ್ಥ ವ್ಯಖ್ಯಾನ | 10.00 |
| ಇಸ್ಲಾಂ ಮತ್ತು ಇತರ ಧರ್ಮಗಳು | 10.00 |
| ಉಗ್ರವಾದ, ಭಯೋತ್ಪಾದನೆ ಮತ್ತು ಇಸ್ಲಾಂ | 25.00 |
| ನೆಟ್‌ವರ್ಕ್ ಬ್ಯುಸಿನೆಸ್ | 10.00 |
| ತಬ್ಲೀಗ್‌ಗಳ ನಿಜ ಬಣ್ಣ | 10.00 |
| ಗಲ್ಫ್ ಭಾಷಾ ಸಹಾಯಿ | 100.00 |
| ಫ್ಯಾಲಸ್ತೀನ್ ನೆತ್ತರ ವೃತ್ತಾಂತ | 10.00 |
| ಶಅರೇ ಮುಬಾರಕ್ (ಪೇರೋಡ್ ಉಸ್ತಾದ್) | 05.00 |
| ಪತ್ತ್ ಕಿತಾಬ್ (ಕನ್ನಡ ತರ್ಜುಮೆ) | 80.00 |
| ಖುರ್‌ಆನ್ ಚಿಕಿತ್ಸೆ | 30.00 |
| ಪ್ರವಾದಿ ﷺ ರ ಸವಿಶೇಷತೆಗಳು | 20.00 |
| ಖುರ್‌ಆನ್ ಅದ್ಭುತಗಳ ಅದ್ಭುತ ಜಗತ್ತು | 100.00 |
| ಅಲ್ ಅಮೀನ್ ನುಡಿಮುತ್ತುಗಳು | 12.00 |
| ಖುರ್‌ಆನ್ ಮತ್ತು ವಿಜ್ಞಾನ | 20.00 |
| ಉಪವಾಸ | 20.00 |
| ಪ್ರಳಯ | 20.00 |
| ಬಡತನ ನಿವಾರಣೆ ಸೂತ್ರ | 10.00 |
| ಕನಸಿನ ಫಲ | 12.00 |
| ಕ್ವಿಝ್ ವೇದಿಕೆ | 10.00 |
| 313 ರಸಭರಿತ ರಸಪ್ರಶ್ನೆಗಳು | 10.00 |
| ಮಯ್ಯಿತ್ ಪರಿಪಾಲನೆ (ಚಿತ್ರಸಮೇತ) | 20.00 |
| ಗರ್ಭಿಣಿಯರಿಗೊಂದು ಸೂಪರ್ ಗೈಡ್ | 10.00 |
| ಯಾರಯ್ಯಾ ನಪುಂಸಕ? | 10.00 |
| ನಮ್ಮೆಲ್ಲರ ಪರಮ ಶತ್ರು ಯಾರು? | 13.00 |
| ಸ್ವರ್ಗದ ಕೀಲಿಕೈ | 10.00 |

| | |
|---|---|
| ದಾನದ ಮಹಿಮೆ ದಾನಿಯ ಹಿರಿಮೆ | 30.00 |
| ಸ್ವರ್ಗದ ಬೆಳಕು | 30.00 |
| ಭಯಾನಕ ಇಬ್ಲೀಸ್ | 13.00 |
| ಆತ್ಮ ಬೆಳಗಿಸಲು ಬೆಸ್ಟ್ ಚೋಯಿಸ್ | 12.00 |
| ಸ್ವಲಾತಿನ ಮಹತ್ವ | 27.00 |
| ಮುರಬ್ಬಿ ಶೈಖ್ | 10.00 |
| ಜೇನುತುಪ್ಪದ ಔಷದೀಯ ಗುಣಗಳು | 13.00 |
| ತತ್ವೋಪದೇಶಗಳು | 13.00 |
| ಮದ್‌ಹಬ್ ಮತ್ತು ತಖ್‌ಲೀದ್ | 25.00 |
| ಹಜ್ಜ್ ಮತ್ತು ಉಮ್ರಾಗೈಡ್ | 60.00 |
| ತರಾವೀಹ್ | 50.00 |
| ಔಲಿಯಾಗಳು ಒಂದು ಅವಲೋಕನ | 20.00 |
| ನಮಾಝಿನ ನಂತರ ಸಾಮೂಹಿಕ ಪ್ರಾರ್ಥನೆ | 20.00 |
| ಹಿರಖ್‌ಲ್ ಮತ್ತು ಅಬೂಸುಫ್‌ಯಾನ್ رضي الله عنه | 20.00 |
| ಭಾರತದ ಚಕ್ರವರ್ತಿ ಅಜ್ಮೀರ್ ಖಾಜಾ ಮುಈನುದ್ದೀನ್ ಚಿಶ್ತಿ رضي الله عنه | 40.00 |
| ಅದ್ಭುತ ಪಶು | 12.00 |
| ಇಸ್ಲಾಮಿಕ್ ಕ್ವಿಝ್ | 20.00 |
| ಸಾಲಿಮರ ಮದೀನಾ ಯಾತ್ರೆ | 10.00 |
| ಇಸ್ಲಾಮಿಕ್ ಪ್ರಯಾಣ ಮಾರ್ಗದರ್ಶಿ | 10.00 |
| ಅಹ್ಲುಬೈತಿನ ಪರಿಚಯ ಮತ್ತು ಸ್ವಲಾತಿನ ಮಹತ್ವ | 10.00 |
| ಸಕಾಲಿಕ ವಿಚಾರ ಪ್ರವಾದಿವಚನಗಳಲ್ಲಿ | 25.00 |
| ಓಕೆ ಝೈನುದ್ದೀನ್ ಕುಟ್ಟಿ ಉಸ್ತಾದ್ | 25.00 |
| ಚಂದ್ರದರ್ಶನ (ಇಸ್ಲಾಮೀ ವೀಕ್ಷಣೆ) | 10.00 |
| ಅಸಾಮಾನ್ಯ ಪ್ರವಾದಿ ﷺ | 20-00 |
| ನಮಾಝ್ | 25.00 |
| ಮೌಲಿದಾಚರಣೆ | 20.00 |
| ಅಲ್ ಮವಾಹಿಬುಲ್ ಜಲಿಯ್ಯ | 15.00 |
| ಸ್ವಲಾತ್ ಕಿತಾಬ್ ಕನ್ನಡದಲ್ಲಿ | 20.00 |
| ಸ್ವರ್ಗ ಭೂಮಿಯಲ್ಲೊಂದು ಪಯಣ | 15.00 |
| ಸ್ಕಾರ್ಫ್ ಮತ್ತು ಆಧುನಿಕ ಮಹಿಳೆ | 10.00 |
| ಅಸ್ಸಿಹಾತ್ | 18.00 |
| ಗೋ ಯುದ್ಧ ಇದು ಯಾರ ವಿರುದ್ಧ? | 15.00 |
| ಮುಸ್ಲಿಂ ಕಾನೂನು ಭಾರತದಲ್ಲಿ | 60.00 |
| ಯುವಕರಿಗೊಂದು ಮಾರ್ಗದರ್ಶಿ | 45.00 |
| ಇಸ್ರಾಅ್ ಮಿಅ್‌ರಾಜ್ | 30.00 |
| ಇಸ್ಲಾಮಿನ ಇತಿಹಾಸ | 100.00 |
| ಉಮ್ರಾ ಗೈಡ್ | 30.0 |
| ಪ್ರೀತಿಯ ಮಗುವಿಗೆ | 30.00 |
| 30 ದಿನಗಳಲ್ಲಿ ಮಲಯಾಳ ಭಾಷೆ | 25.00 |
| ನಮ್ಮ ಕರ್ನಾಟಕ | 96.00 |
| ಲೈಂಗಿಕ ಆರೋಗ್ಯ | 75.00 |
| ಲೈಂಗಿಕ ಚಿಕಿತ್ಸೆ ನೈಜ ಪ್ರಕರಣಗಳು | 135.00 |
| ಲೈಂಗಿಕ ಸಾಮರಸ್ಯ | 95.00 |
| ಲೈಂಗಿಕ ಅರಿವು 106 ಪ್ರಶ್ನೆಗಳು | 20.00 |

| | |
|---|---|
| ಸುಖ ದಾಂಪತ್ಯ | 28.00 |
| ಮನೋರೋಗಕ್ಕೆ ಚಿಕಿತ್ಸೆಯೇನು? | 18.00 |
| ನಿಮ್ಮ ಮಗು | 40.00 |
| ನಿಮ್ಮ ಮಗುವಿನ ಮನಸ್ಸು | 20.00 |
| ದಾಂಪತ್ಯ ಸಮಸ್ಯಗಳು | 40.00 |
| ಮಕ್ಕಳ ಮಾನಸಿಕ ಬೆಳವಣಿಗೆ | 40.00 |
| ಸ್ತನ್ಯ ಪಾನ | 20.00 |
| ಬಸಿರು | 100.00 |
| ಋತು ಚಕ್ರ | 25.00 |
| ಬುದ್ಧಿಮಾಂದ್ಯ ಮಕ್ಕಳು | 22.00 |
| ಒಂಟಿತನ ಎದುರಿಸುವುದು ಹೇಗೆ | 40.00 |
| ಸೌಂದರ್ಯ ವರ್ಧಕಗಳು ಏಕೆ ಬೇಕು? | 40.00 |
| ನೆಪಿಗೊಂದು ಕೌನ್ಸೆಲಿಂಗ್ | 45.00 |
| ರಕ್ತದ ಬ್ಯಂಕ್ ಕಣ್ಣಿನ ಬ್ಯಾಂಕ್ | 16.00 |
| ಶಿಸುಪ್ರಾಪ್ತಿಗೆ ವಿನೂತನ ವಿಧಾನ | 30.00 |
| ಕುತೂಹಲ ಕೆರಲಿಸುವ ಉತ್ತರಗಳು | 100.00 |
| ಪರಿಸರ ಅಧ್ಯಯನ | 45.00 |
| ಕಲಿಕೆಯ ತೊಂದರೆಗಳು | 60.00 |
| ಬೀರಬಲ್ಲನ ಬುದ್ಧಿವಂತಿಕೆಯ ಕಥೆಗಳು | 12.00 |
| ಸ್ವಾತಂತ್ರ ಹೋರಾಟದಲ್ಲಿ ಭಾರತೀಯ ಮುಸ್ಲಿಮರ ಪಾತ್ರ | 30.00 |
| ಇವೇಕೆ ಹೀಗೆ? | 80.00 |
| ಸ್ಕೂಲ್ ಡೈರಿ | 40.00 |
| ಲೇಖನ ಕಲೆಯನ್ನು ವೃದ್ದಿಸುದು ಹೇಗೆ? | 40.00 |
| ಮಗುವಿನಿಂದ ಆರೋಗ್ಯವೃದ್ದಿ | 40.00 |
| ಶಕ್ತಿಯ ಬರಕೆಯಲ್ಲಿ ಯುಕ್ತಿ | 35.00 |
| ನಮ್ಮ ಪರಿಸರ | 50.00 |
| ನಮ್ಮ ಭೂಮಿ ಮತ್ತು ನಮ್ಮ ಪರಿಸರ | 18.00 |
| ಸಸ್ಯ ಪರಿಸರ | 65.00 |
| ಆಪತ್ಕಾಲಕ್ಕೆ ಅಂತರ್ಜಾಲ | 20.00 |
| ಹದಿಹರೆಯ ಮಾನಸಿಕ ಸಮಸ್ಯೆಗಳು | 45.00 |
| ದೇವರು ದೆವ್ವ ಇರುವುವೇ? ಮೈಮೇಲೆ ಬರುವುವೇ | 22.00 |
| ಮಾಹಿತಿ ಹಕ್ಕು | 60.00 |
| ಕಪ್ಪು ಮನಸ್ಸಿಗೆ ಕಾಯಿಲೆ ಹೃದಯಕ್ಕೆ | 45.00 |
| ಮನರೋಗ ಗೆಲ್ಲಬಹುದೇ? | 75.00 |
| ವಾಸ್ತು ಎಷ್ಟು ವಾಸ್ತವ? | 35.00 |
| ಸಮಯದ ಸಮರ್ಥ ಬಳಕೆ ಹೇಗೆ? | 40.00 |
| ಸೌಜನ್ಯತೆ ಹೇಗೆ? | 40.00 |
| ಉತ್ತಮ ಮಾತುಗಾರರು ನೀವಾಗಿ | 40.00 |
| ಮುಂದಾಳುತನದ ಲಕ್ಷಣಗಳನ್ನು ಬೆಳೆಸಿಕೊಳ್ಳುವುದು ಹೇಗೆ? | 10.00 |
| ಗಾಳಿ | 15.00 |
| ನೀರು | 15.00 |
| ತೊದಲುವಿಕೆ | 15.00 |
| ಕಥೆ ಹೇಳುವ ಸಮಯ | 35.00 |
| ಸ್ವಾರಸ್ಯ ಸಂಗತಿಗಳು | 25.00 |
| ಭಗವದ್ಗೀತೆ - ಒಂದು ವೈಚಾರಿಕ ಒಳನೋಟ | 50.00 |
| ವಿಜ್ಞಾನ ಮತ್ತು ಪವಾಡಗಳು | 75.00 |
| ಹಲ್ಲಿನ ರಕ್ಷಣೆ | 140.00 |

ಪ್ರತಿಗಳಿಗಾಗಿ ಸಂಪರ್ಕಿಸಿರಿ | M.O. ಕಳಿಸಿರಿ | ಸಮರಾತ್ ಬುಕ್ಸ್, ಅಲ್‌ಅನ್ಸಾರ್ ಕಾರ್ಯಾಲಯ, ಕುತ್ತಾರ್, ಮಂಗಳೂರು-17. Ph: 0824-2467886, Cell: 9480075704




ಅಲ್ ಅನ್ಸಾರ್ ಚಂದಾ ವಿವರ: ವಾರ್ಷಿಕ ಚಂದಾ: ರೂ. 300-00, ಅರ್ಧ ವಾರ್ಷಿಕ: ರೂ. 160-00 *ಗಲ್ಫ್ ರಾಷ್ಟ್ರಗಳಿಗೆ* ವಾರ್ಷಿಕ : ರೂ. 1800-00, ಅರ್ಧ ವಾರ್ಷಿಕ : ರೂ. 900-00. *ಫಾರಿನ್ ಗಿಫ್ಟ್* : ರೂ. 500-00

# ತೌಫೀಕ್ ಗ್ರೈಂಡರ್ಸ್

ಕ್ರಾಮ್ಬನ್ ಮೋಟರ್ ಅಳವಡಿಸುವುದರೊಂದಿಗೆ



ತಯಾರಕರು:

ತೌಫೀಕ್ ಇಂಡಸ್ಟ್ರೀಸ್

ಆಲಡ್ಕ, ಪಾಣೆಮಂಗಳೂರು.

ಫೋನ್: 280019(O), 320819(O), 280219(R)

ಮೊಬೈಲ್: 9945190219

ಹಾಲ್‌ಮಾರ್ಕ್ ಪ್ರಾಮಾಣೀಕೃತ ಚಿನ್ನಾಭರಣ, ಐಜಿಐ ವಜ್ರಾಭರಣಗಳು

ನಿಮ್ಮ ಮನೋಭಿಲಾಷೆಯನ್ನು ಪೂರೈಸುವುದು ಖಚಿತ

● ಮದುವೆ ಖರೀದಿಗೆ ವಿಶೇಷ ರಿಯಾಯಿತಿ ● ಹಳೇ ಚಿನ್ನಕ್ಕೆ ಅತ್ಯುತ್ತಮ ಮೌಲ್ಯ



ಇಂದೇ ಭೇಟಿ ನೀಡಿ.

ಆಕರ್ಷಣ್ ಗೋಲ್ಡ್

ಶುದ್ಧತೆ ಹಾಗೂ ವಿನ್ಯಾಸಗಳ ಸಮ್ಮಿಲನ

ಮಸೀದಿ ರಸ್ತೆ, ಉಡುಪಿ

☎ : 0820-2529316 / 9845125488



RNI No: KARKAN/2009/28984 Regd No.: KA/SK/MNG/ 982/ 2009-11

Licensed to Post without prepayment License No. WPP-SK-12

Posted at : RMS MANGALORE, On 26-9-2011 (Monday)

If Undelivered Please Return : Al-Alnsar, Kuthar, Mangalore-575 017

E-mail : alansar.weekly@yahoo.com

ಚಂದಾ ನಂಬ್ರ :

To, ..........................................................................

..........................................................................

..........................................................................

..........................................................................

..........................................................................


## ಹಜ್

←10ನೇ ಪುಟದಿಂದ

# ಹಜ್ಜ್‌ನಲ್ಲಿ ಮಬ್‌ರೂರ್ ಮುಖ್ಯ

ಆಚಾರ ಕ್ರಮಗಳು ಹಜ್ಜ್‌ನ ಪ್ರಧಾನ ಭಾಗವೇ ಆಗಿದ್ದರೂ ತರಬೇತಿ ಮತ್ತು ಒಂದೆರಡು ಉಮ್ರಾಗಳಿಂದ ಸಿಗುವ ಅನುಭವದಿಂದಲೇ ಆ ಬಗ್ಗೆ ಕಲಿತು ಕೊಳ್ಳಲು ಸಾಧ್ಯವಿದೆ. ಆದರೆ, ಅತ್ಯಂತ ಮುಖ್ಯವಾದ ವಿಷಯ ಹಜ್ ಸ್ವೀಕಾರಾರ್ಹವಾಗುವುದು. ಹಜ್‌ಗೆ ಸ್ವರ್ಗ ವಾಗ್ದಾನ ನೀಡಿರುವ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಹಜ್ ಮಬ್‌ರೂರ್‌ಗೆ ಮಾತ್ರ ಸ್ವರ್ಗ ಪ್ರತಿಫಲ ಎಂದಿರುವುದನ್ನು ನಾವು ಗಮನಿಸಬೇಕು.

ಹಜ್ ನಿಷ್ಫಲವಾಗದಿರಲು, ಮಬ್‌ರೂರ್ ಆಗಲು ಗರಿಷ್ಠ ಪ್ರಯತ್ನಿಸಬೇಕಿದೆ.

ಮಬ್‌ರೂರ್ ಆಗಲು... ಹಜ್‌ಗೆ ಮಾಡುವ ಖರ್ಚು ಹಲಾಲ್ ಮಾತ್ರವಾಗಿರಬೇಕು. ಹಜ್‌ನ ಸಂದರ್ಭ ಬದುಕು ಪಾಪರಹಿತವಾಗಿರಬೇಕು. "ಯಾರಾದರೂ ಹಜ್‌ಗೆ ಸಿದ್ಧನಾದರೆ ಮತ್ತೆ ಅವನು ಲೈಂಗಿಕ ದೋಷಗಳನ್ನೋ, ಪಾಪಕೃತ್ಯಗಳನ್ನೋ, ಜಗಳವನ್ನೋ ಮಾಡುವಂತಿಲ್ಲ" ಎನ್ನುತ್ತದೆ ಖುರ್‌ಆನ್. (2:197)

ಹಜ್ ಸ್ವೀಕೃತಿಗೊಳ್ಳಲು ಬೇಕಾದ ದೇವಭಕ್ತಿ (ತಖ್‌ವಾ)ಗೆ ಮನಸ್ಸನ್ನು ಸಜ್ಜುಗೊಳಿಸುವುದು ಬಹಳ ಮುಖ್ಯ. ಹಜ್ಜ್ ಈಮಾನನ್ನು ಪರೀಕ್ಷೆಗೊಡ್ಡುವ ಸಂದರ್ಭ. ಸಹನೆ ಈಮಾನಿನ ಅರ್ಧ ಭಾಗ. ಹಜ್ಜ್‌ಗೆ ತಲುಪಿದ ಮೇಲೆ ಏನು ಬಂದರೂ ಸಹನೆ ತಾಳಲು ಸನ್ನದ್ಧರಾಗಬೇಕು.

ಹಜ್‌ನ ಧ್ಯೇಯ ಪರಲೋಕ ಯಶಸ್ಸು. ಯಾತ್ರೆಯ ಸಮಸ್ಯೆ, ಆಹಾರದ ಕೊರತೆ, ಸೌಲಭ್ಯಗಳ ಕಮ್ಮಿಗಾಗಿ ಕೊರಗುತ್ತಾ, ಕೊರೆಯುತ್ತಾ ಇರುವುದಲ್ಲ. ಬದಲು ಹಜ್‌ನುದ್ದಕ್ಕೂ ಪರಲೋಕದ ಚಿತ್ರಣವೇ ಮನಸ್ಸನ್ನು ತುಂಬಬೇಕು. ಅಲ್ಲಾಹನ ಭವನವನ್ನು ಕಾಣುವಾಗ ನಾಳೆ ಅಲ್ಲಾಹನ ಲಿಖಾವನ್ನು ದರ್ಶಿಸುವ ಮೋಹ ಮನದಲ್ಲಿ ಮೂಡಬೇಕು. ಹಜ್ ಯಾತ್ರೆಗೆ ಸಿದ್ಧತೆ ನಡೆಸುವಾಗ ಪರಲೋಕ ಯಾತ್ರೆಯ ಸಿದ್ಧತೆಯನ್ನು ಯೋಚಿಸಬೇಕು. ಮನೆ, ಕುಟುಂಬ, ಊರು, ಸಂಪತ್ತನ್ನೆಲ್ಲ ತಾತ್ಕಾಲಿಕವಾಗಿ ಬಿಟ್ಟು ಹಜ್‌ಗೆ ಹೊರಡುವಾಗ, ಇವೆಲ್ಲವನ್ನು ಶಾಶ್ವತವಾಗಿ ಬಿಟ್ಟು ಹೋಗಬೇಕಾದ ಮರಣ ಮನಸ್ಸಿನಲ್ಲಿರಬೇಕು. ವಾಹನವೇರಿ ಎಲ್ಲರಿಂದಲೂ ವಿದಾಯ ಹೇಳುವಾಗ ಮಯ್ಯಿತ್ ಮಂಚವೇರಿ ಶಾಶ್ವತ ವಿದಾಯ ಕೋರುವ ಅಂತಿಮ ಯಾತ್ರೆ ಕಣ್ಣಿಗೆ ಕಟ್ಟಬೇಕು. ಜಗತ್ತಿನೆಲ್ಲೆಡೆಯಿಂದ ಜನ ಸೇರಿ ತಲ್ಬಿಯತ್ ಮೊಳಗಿಸುವಾಗ, ಜಗತ್ತಿನ ಸಕಲ ಜನ ಪುನಃ ಎದ್ದು ನಿಲ್ಲುವ ಮಹ್‌ಶರಾ ಮನಸ್ಸಿಗೆ ಬರಬೇಕು. ಹಜ್‌ಗೆ ಬರುವವರಲ್ಲಿ ಸ್ವೀಕೃತರೂ ಅಸ್ವೀಕೃತರೂ ಇರುವಂತೆ ಮಹ್‌ಶರಾದಲ್ಲಿ ಸೇರುವವರ ಪೈಕಿಯೂ ಸ್ವೀಕೃತ-ಅಸ್ವೀಕೃತರಿದ್ದು, ನಾನು ಅಲ್ಲೂ ಇಲ್ಲೂ ಸ್ವೀಕೃತನಾಗಬೇಕೆಂಬ ಅದಮ್ಯ ಛಲವಿರಬೇಕು. ಕಣ್ಣಿನಿಂದ ಕಅ್‌ಬಾ ಕಾಣುವಾಗ ಖಲ್‌ಬ್‌ನಿಂದ ಅಲ್ಲಾಹನನ್ನು ದರ್ಶಿಸಬೇಕು. ಝಂ ಝಂ ಕುಡಿಯುವಾಗ ಹೌಳುಲ್ ಕೌಸರ್ ಸೇವಿಸುವ ಹಂಬಲ ಬರಬೇಕು.



ರೌಳಾ ಝಿಯಾರತ್ ಮಾಡುವಾಗ ಅಂತರಾತ್ಮ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ದರ್ಶಿಸಬೇಕು. ಝಿಯಾರತ್‌ಗೆ ನಿಲ್ಲುವಾಗ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರ ಶಫಾಅತ್‌ಗೆ ನಿಲ್ಲುವ ಸಂದರ್ಭ ಮನದಲ್ಲಿ ಮೂಡಬೇಕು. ಹಜ್ ಮುಗಿಸಿ ಬರುವಾಗ ಪಾಪಮೋಚಿತರಾಗಿರಬೇಕು. ತನ್ನ ಪಾಪಗಳೆಲ್ಲ ಕ್ಷಮಿಸಲ್ಪಟ್ಟಿದೆ ಎಂಬ ದೃಢವಾದ ನಂಬಿಕೆಬೇಕು. ಅರಫಾದಲ್ಲಿ ಪ್ರಾರ್ಥಿಸಿಯೂ ನನ್ನ ಪ್ರಾರ್ಥನೆ ಅಲ್ಲಾಹು ಸ್ವೀಕರಿಸಿರಬಹುದಾ ಇಲ್ಲವಾ ಎಂದು ಸಂದೇಹಪಡುವುದೂ ಪಾಪ ಎಂದಿದ್ದಾರೆ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು. ಸರಿಯಾದ ಹಜ್‌ನೊಂದಿಗೆ ನವಜಾತ ಶಿಶುವಿನ ಪರಿಶುದ್ಧಿ ಬಂದಿದೆ; ಇನ್ನು ಪಾಪವೆಸಗಿ ಅದನ್ನು ಹಾಳು ಮಾಡಬಾರದೆಂಬ ಪ್ರತಿಜ್ಞೆಯೊಂದಿಗೆ ಮರಳಿ, ಪ್ರತಿಜ್ಞೆಗೆ ಬದ್ಧವಾಗಿ ಬದುಕಿದರೆ, ಅದು ಸ್ವರ್ಗಕ್ಕೊಯ್ಯುವ 'ಹಜ್ ಮಬ್‌ರೂರ್' ಆಗುತ್ತದೆ. ತಪ್ಪಿದರೆ? ಮರಳುವಾಗ ಲಗೇಜ್ ಮಾತ್ರ ಜತೆಗಿರುತ್ತದೆ; ಹಜ್ ಕಳವಾಗಿರುತ್ತದೆ! ಅಲ್ಲಾಮಾ ಇಕ್ಬಾಲ್ ಕೇಳಿದ ಪ್ರಶ್ನೆ ಬಹಳ ಅರ್ಥಪೂರ್ಣ - "ಹಜ್‌ನಿಂದ ನೀವು ಝಂ ಝಂ ಬಿಟ್ಟು ಬೇರೇನೂ ತರಲಿಲ್ಲವೇ?"

## ಪುಣ್ಯ ತೀರ್ಥ ಝಂಝಂ

ಝಂಝಂ ನೀರನ್ನು ಯಾವ ಉದ್ದೇಶವಿಟ್ಟುಕೊಂಡು ಕುಡಿಯಲಾಗುತ್ತದೋ, ಆ ಉದ್ದೇಶ ಈಡೇರುವುದು. ಝಂಝಂ ಅತ್ಯಂತ ಪವಿತ್ರ ಪಾನೀಯ. ಹೌಳುಲ್ ಕೌಸರ್‌ಗಿಂತಲೂ ಇದುವೇ ಶ್ರೇಷ್ಠ. ಆದ್ದರಿಂದ ಹಜ್ಜಾಜ್‌ಗಳು ನೀರು ಕುಡಿಯಬಯಸುವುದಾದ್ದರಿಂದ ಝಂಝಂನ್ನೇ ಕುಡಿಯಬೇಕು.

ನಮಗೂ ಮುನಾಫಿಖ್ (ಕಪಟಿ)ಗಳಿಗೂ ಇರುವ ಒಂದು ವ್ಯತ್ಯಾಸವೆಂದರೆ, ಅವರು ಝಂಝಂ ನೀರಿನಿಂದ ಹೊಟ್ಟೆ ತುಂಬಿಸಲಾರರು. (ಇಬ್ನು ಮಾಜ) ಭೂಮಿಯಲ್ಲಿ ಅತ್ಯಂತ ಪುಣ್ಯವಿರುವ ನೀರು ಝಂಝಂ. ಅದರಲ್ಲಿ ಹಸಿವಿಗೆ ಆಹಾರವಿದೆ. ರೋಗಕ್ಕೆ ಶಮನವಿದೆ. (ತ್ವಬ್‌ರಾನೀ) ಝಂಝಂನತ್ತ ನೋಡುವುದೂ ಆರಾಧನೆಯಾಗಿದೆ. ಅದರಿಂದ ಪಾಪಗಳು ಕ್ಷಮಿಸಲ್ಪಡುವುದು. (ಹದೀಸ್) ಝಂಝಂ ನೀರನ್ನು ಹೊಟ್ಟೆ ತುಂಬ ಕುಡಿಯುವುದರಿಂದ ಕಪಟತನದಿಂದ ಮುಕ್ತಿ ದೊರೆಯುವುದು. (ದುರ್ರುಲ್ ಮನ್ಸೂರ್) ಝಂಝಂ ಹಸಿವಿಗೆ ಆಹಾರವೂ ರೋಗಕ್ಕೆ ಔಷಧಿಯೂ ಆಗಿದೆ (ತ್ವಬ್‌ರಾನಿ) ಎಂಬುದಾಗಿ ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾರೆ. ಪ್ರವಾದಿ ಸ್ವಲ್ಲಲ್ಲಾಹು ಅಲೈಹಿ ವಸಲ್ಲಮರು ಝಂಝಂನ್ನು ಹೊತ್ತೊಯ್ದು ರೋಗಿಗಳ ಮೇಲೆ ಸವರುತ್ತಿದ್ದರು ಹಾಗೂ ಅವರಿಗೆ ಕುಡಿಸುತ್ತಿದ್ದರು.

ಝಂಝಂ ಕುಡಿಯುವಾಗ ಕಅ್‌ಬಾಕ್ಕೆ ಅಭಿಮುಖವಾಗಿ ಕುಳಿತು ಕುಡಿಯುವುದು, ಬಿಸ್ಮಿ ಹೇಳುವುದು, ಹೊಟ್ಟೆ ತುಂಬ ಕುಡಿಯುವುದು, ಕುಡಿದ ಬಳಿಕ ಅಲ್ಲಾಹನನ್ನು ಸ್ತುತಿಸುವುದು, ಝಂಝಂ ಅನ್ನು ಕುಳಿತುಕೊಂಡೇ ಕುಡಿಯುವುದು, ಮೂರು ಗುಟುಕುಗಳಾಗಿ ಕುಡಿಯುವುದು, ಒಂದೊಂದು ಗುಟುಕಿನ ನಂತರ ಕಅ್‌ಬಾಲಯ ನೋಡುವುದು, ತಲೆ, ಮುಖ, ಎದೆಗಳಿಗೆ ಝಂಝಂ ಅನ್ನು ಸವರುವುದು, ಝಂಝಂ ಕುಡಿಯುವಾಗ ಪ್ರಾರ್ಥಿಸುವುದು - ಇವುಗಳೆಲ್ಲ ಪವಿತ್ರ ಜಲ ಕುಡಿಯುವಾಗಿನ ಶಿಸ್ತುಗಳಲ್ಲಿ ಮುಖ್ಯವಾದವುಗಳು.

ಹಜ್ಜಾಜ್‌ಗಳಿಗೆ ದೊರೆಯುವ ಸೌಭಾಗ್ಯಗಳಲ್ಲಿ ಝಂಝಂ ಕುಡಿಯುವುದೂ ಬಹಳ ಮುಖ್ಯವಾದುದು. ಅದನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಳ್ಳುವುದು ಜಾಣತನ. ■


## ಹಾರ್ದಿಕ ಅಭಿನಂದನೆಗಳು

ನಾಲ್ಕು ವರ್ಷಗಳ ಕಾಲ SSF ಕರ್ನಾಟಕ ರಾಜ್ಯಾಧ್ಯಕ್ಷರಾಗಿ ಸಂಘಟನೆಯನ್ನು ಮುನ್ನಡೆಸಿ, ಇದೀಗ SSF ದಕ್ಷಿಣ ಭಾರತ ಸಮಿತಿಯ ಅಧ್ಯಕ್ಷರಾಗಿ ಆಯ್ಕೆಯಾಗಿರುವ ನನ್ನ ಆತ್ಮೀಯ ಮಿತ್ರ, ಪ್ರಖ್ಯಾತ ವಾಗ್ಮಿ, ಹಿರಿಯ ಸಂಘಟಕ



ಎಮ್ಮೆಸ್ಸೆಂ ಝೈನಿ ಕಾಮಿಲ್

ಇವರಿಗೂ, ಸಮಿತಿಗೆ ಆಯ್ಕೆಯಾಗಿರುವ

ರಾಜ್ಯ SSFನ ಇತರ ನಾಯಕರಿಗೂ

ನನ್ನ ಹೃತ್ಪೂರ್ವಕ ಅಭಿನಂದನೆಗಳು.

ಇವರಿಗೆ ಅಹ್ಲುಸ್ಸುನ್ನಃದ ಸೇವೆಗೆ ಹೆಚ್ಚಿನ ಅವಕಾಶಗಳು ದೊರೆಯಲೆಂಬ ಹಾರೈಕೆಯೊಂದಿಗೆ,



ಯಾಕೂಬ್ ಯೂಸುಫ್ ಹೊಸನಗರ

بارك الله لكما ವೈವಾಹಿಕ ಶುಭಾಶಯಗಳು

ದಿನಾಂಕ 29.9.2011ರಂದು ವೈವಾಹಿಕ ಜೀವನಕ್ಕೆ ಪಾದಾರ್ಪಣೆಗೈಯ್ಯಲಿರುವ

ಕೆ.ಮುಹಮ್ಮದ್ ಹನೀಫ್

(S/o.ಮರ್ಹೂಂ ಎಂ.ಕೆ. ಇಸ್ಮಾಈಲ್, ಕಲ್ಲಡ್ಕ )

ಹಾಗೂ

ಆಇಶಾ ನೌಸೀನ್

(D/o. ಅಬ್ದುಲ್ ಖಾದರ್, ನಂದಾವರ)

ಇವರ ವೈವಾಹಿಕ ಜೀವನ ಸುಖ, ಕ್ಷೇಮ ಸಕಲ ಐಶ್ವರ್ಯಗಳಿಂದ ಕೂಡಿ ಬೆಳಗಲಿ ಎಂದು ಹಾರೈಸುವ

ಡೈಲಿ ಫ್ರೆಶ್, ಕಲ್ಲಡ್ಕ



Owned, Published & Printed by : M. Ibraheem Bava, Hasan Enclave, Kuthar, P.O.Munnur, Mangalore. Editor : Al-Haj Bekal Ibraheem Musliyar.
Printed at : Sanabil Printing Press, Kuthar- 575 017, Mangalore. Ph: 0824-2467886